prajavani.net prajavani | ಸೋಮವಾರ, ಡಿಸೆಂಬರ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 345 | ಪುಟ 14 | www.prajavani.net



ಸಿಂಗ್ ಸ್ವಿಂಗ್
ಭಾರತ ತಂಡದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರು ಭಾನುವಾರ ಧರ್ಮಶಾಲಾದಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಟಿ20 ಕ್ರಿಕೆಟ್ ಪಂದ್ಯದಲ್ಲಿ ಎರಡು ವಿಕೆಟ್ ಗಳಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಲೇಖಕಿಯರ ಸಂಘಕ್ಕೆ ಸುನಂದಮ್ಮ ಅಧ್ಯಕ್ಷೆ 7 | ಕೇರಳದ ಹಲವೆಡೆ ಹಿಂಸಾಚಾರ 4

ನಿತಿನ್ ಬಿಜೆಪಿ ಕಾರ್ಯಾಧ್ಯಕ್ಷ



ನಿತಿನ್

ನವದೆಹಲಿ (ಪಿಟಿಐ): ಬಿಹಾರದ ಸಚಿವ ನಿತಿನ್ ನಬೀನ್ ಅವರನ್ನು ಬಿಜೆಪಿಯ ರಾಷ್ಟ್ರೀಯ ಕಾರ್ಯಾಧ್ಯಕ್ಷರನ್ನಾಗಿ ಭಾನುವಾರ ನೇಮಿಸಲಾಗಿದೆ.

ಕಾಯಸ್ಥ ಸಮುದಾಯಕ್ಕೆ ಸೇರಿದ 45 ವರ್ಷ ವಯಸ್ಸಿನ ನಿತಿನ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಉತ್ತರಾಧಿಕಾರಿಯಾಗುವ ಸಾಧ್ಯತೆಯಿದೆ.

ಐದು ಬಾರಿ ಶಾಸಕರಾಗಿರುವ ನಿತಿನ್, ಬಿಹಾರದ ಬಾಂಕೀಪುರ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಬಿಹಾರ ಸರ್ಕಾರದಲ್ಲಿ ಈ ಹಿಂದೆಯೂ ಎರಡು ಸಲ ಸಚಿವರಾಗಿ ಕೆಲಸ ಮಾಡಿದ್ದಾರೆ.

‘ಬಿಜೆಪಿಯ ಸಂಸದೀಯ ಮಂಡಳಿಯು ನಿತಿನ್ ನಬೀನ್ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

65 ವರ್ಷದ ನಡ್ಡಾ ಅವರು 2020ರ ಜನವರಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಅವರ ಅಧಿಕಾರದ ಅವಧಿ ಈಗಾಗಲೇ ಪೂರ್ಣಗೊಂಡಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲು ಅವರ ಅಧಿಕಾರದ ಅವಧಿ ವಿಸ್ತರಿಸಲಾಗಿತ್ತು.

ಉತ್ತರ ಪ್ರದೇಶ–ಪಂಕಜ್ ಚೌಧರಿ ಅಧ್ಯಕ್ಷ (ಲಖನೌ ವರದಿ): ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರನ್ನು ಬಿಜೆಪಿ ಉತ್ತರ ಪ್ರದೇಶ ರಾಜ್ಯ ಘಟಕದ ಅಧ್ಯಕ್ಷರಾಗಿ ಘೋಷಿಸಲಾಗಿದೆ.

ಮತ ಕಳವು : ‘ಕೈ’ ರಣಕಹಳೆ

ದೆಹಲಿಯ ರಾಮ್‌ಲೀಲಾ ಮೈದಾನದಲ್ಲಿ ಕಾಂಗ್ರೆಸ್‌ನಿಂದ ಬೃಹತ್ ರ‍್ಯಾಲಿ



ರಾಮ್‌ಲೀಲಾ ಮೈದಾನದಲ್ಲಿ ನಡೆದ ರ‍್ಯಾಲಿಯಲ್ಲಿ ಪಾಲ್ಗೊಂಡ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಹಾಗೂ ಕೆ.ಸಿ.ವೇಣುಗೋಪಾಲ್ ಅವರು ಸಂವಿಧಾನದ ಪ್ರತಿ ತೋರಿಸಿದರು — ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮತ ಕಳವು’ ವಿರುದ್ಧ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿರುವ ಕಾಂಗ್ರೆಸ್ ಪಕ್ಷವು ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಭಾರತೀಯ ಚುನಾವಣಾ ಆಯೋಗದ ವಿರುದ್ಧ ವಾಗ್ಬಾಣಗಳ ಮೂಲಕ ಮುಗಿಬಿದ್ದಿದೆ.

ಮತ ಕಳವು ವಿರುದ್ಧ ಇಲ್ಲಿನ ರಾಮ್‌ಲೀಲಾ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ರ‍್ಯಾಲಿಯಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿ ಹಾಗೂ ಆಯೋಗದ ವಿರುದ್ಧ ರಣಕಹಳೆ ಮೊಳಗಿಸಿದರು. ದೇಶದ ಮೂಲೆ ಮೂಲೆಯಿಂದ ಬಂದಿದ್ದ ಸಹಸ್ರಾರು ಕಾರ್ಯಕರ್ತರ ಸಮ್ಮುಖದಲ್ಲಿ ಕಾಂಗ್ರೆಸ್ ನಾಯಕರು, ‘ಸತ್ಯ ಹಾಗೂ ಅಹಿಂಸೆಯ ಮೂಲಕವೇ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆಯುತ್ತೇವೆ’ ಎಂದರು.

ಬಿಹಾರ ಚುನಾವಣೆಯ ಸೋಲಿನಿಂದ ಪಕ್ಷದ ಕಾರ್ಯಕರ್ತರು ಧೃತಿಗೆಡಬೇಕಿಲ್ಲ ಎಂದು ರಾಷ್ಟ್ರೀಯ ನಾಯಕರು ಹುರುಪು ತುಂಬಿದರು. ಬಿಜೆಪಿಯ ಮತ ಕಳವಿನ ವಿರುದ್ಧ ನಾವು ಇಲ್ಲಿ ಮೊಳಗಿಸಿದ ಘೋಷಣೆಗಳು ಪ್ರಧಾನಿ ನರೇಂದ್ರ ಮೋದಿ ಮನೆಯವರೆಗೆ ತಲುಪಬೇಕು ಎಂದೂ ಕಾರ್ಯಕರ್ತರಲ್ಲಿ ಉತ್ಸಾಹ ತಂದರು. ▸4

ಮಗನ ಶಸ್ತ್ರಚಿಕಿತ್ಸೆಗೆ ಹೋಗದ ಖರ್ಗೆ

‘ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಮಗನನ್ನು ನೋಡಲು ನಾನು ಬೆಂಗಳೂರಿಗೆ ಹೋಗಬೇಕಿತ್ತು. ಆದರೆ, ಮತ ಕಳವಿನಂಥ ದೇಶದ್ರೋಹದಲ್ಲಿ ತೊಡಗಿರುವವರ ವಿರುದ್ಧ ನಡೆಯುತ್ತಿರುವ ರ‍್ಯಾಲಿಯನ್ನು ತಪ್ಪಿಸಿಕೊಳ್ಳಬಾರದು ಎಂಬ ಕಾರಣಕ್ಕೆ ನನ್ನ ನಿಲುವು ಬದಲಿಸಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

‘ಬೆಂಗಳೂರಿಗೆ ಹೋಗುವ ಬಗ್ಗೆ ರಾಹುಲ್ ಅವರಲ್ಲಿ ಹೇಳಿದ್ದೆ. ಬಳಿಕ ರ‍್ಯಾಲಿ ಬಗ್ಗೆ ಉಲ್ಲೇಖಿಸಿದ್ದೆ. ಮೊನ್ನೆ ನನ್ನ ಮಗನಿಗೆ ಎಂಟು ಗಂಟೆಗಳ ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆದಿತ್ತು. ನನ್ನ ಪತ್ನಿ, ಮಗಳು ಸೇರಿ ಇತರರು ಅಲ್ಲಿಗೆ ಬರುವಂತೆ ಕೇಳಿಕೊಂಡು ಕರೆ ಮಾಡುತ್ತಿದ್ದರು’ ಎಂದು ಖರ್ಗೆ ಹೇಳಿದರು. ▸4

‘ಸತ್ಯದಿಂದ ಸರ್ಕಾರ ಕಿತ್ತೆಸೆಯುತ್ತೇವೆ’

‘ಚುನಾವಣಾ ಆಯೋಗವು ಆಡಳಿತಾರೂಢ ಬಿಜೆಪಿ ವಹಿಸಿದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದೆ. ಆಯೋಗವು ಭಾರತದ ಚುನಾವಣಾ ಸಂಸ್ಥೆಯೇ ಹೊರತು ಪ್ರಧಾನಿಯವರದ್ದಲ್ಲ ಎಂದು ನೆನಪಿಸಿಕೊಳ್ಳಬೇಕು’ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ಮತಗಳ ಕಳ್ಳತನವಾಗದಿದ್ದರೆ ಜನರು ಐದು ನಿಮಿಷಗಳಲ್ಲೇ ಆರ್‌ಎಸ್‌ಎಸ್ ಸರ್ಕಾರವನ್ನು ಕಿತ್ತೆಸೆಯುತ್ತಾರೆ. ಕಾಂಗ್ರೆಸ್ ಪಕ್ಷವು ಸತ್ಯ ಮತ್ತು ಅಹಿಂಸೆ ಬಳಸಿ ಆರ್‌ಎಸ್‌ಎಸ್ ಸರ್ಕಾರವನ್ನು ತೆಗೆದು ಹಾಕಲಿದೆ ಎಂದರು. ಮತ ಕಳವು ಎಂಬುದು ಅಂಬೇಡ್ಕರ್ ಅವರ ಸಂವಿಧಾನದ ಮೇಲಿನ ಬಹುದೊಡ್ಡ ದಾಳಿ ಎಂದು ಅವರು ಪ್ರತಿಪಾದಿಸಿದರು. ▸4

‘ಮತಪತ್ರ ಮೂಲಕ ಚುನಾವಣೆ ಎದುರಿಸಿ’

ಬ್ಯಾಲಟ್ ಪೇಪರ್‌ನಲ್ಲಿ (ಮತ ಚೀಟಿ) ನ್ಯಾಯಯುತವಾಗಿ ಚುನಾವಣೆ ಗೆಲ್ಲುವಂತೆ ಬಿಜೆಪಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸವಾಲು ಹಾಕಿದರು.

ಜನರ ಮತದಾನದ ಹಕ್ಕುಗಳನ್ನು ಕಸಿದುಕೊಳ್ಳಲು ಚುನಾವಣಾ ಆಯುಕ್ತರು ಹೇಗೆ ಪಿತೂರಿ ಮಾಡಿದ್ದಾರೆ ಮತ್ತು ಚುನಾವಣಾ ಪ್ರಕ್ರಿಯೆಯ ಪ್ರತಿಯೊಂದು ಹೆಜ್ಜೆಯನ್ನು ಅನುಮಾನಾಸ್ಪದಗೊಳಿಸಿದ್ದಾರೆ ಎಂಬುದಕ್ಕೆ ಒಂದು ದಿನ ಇಡೀ ದೇಶಕ್ಕೆ ಉತ್ತರಿಸಬೇಕಾಗುತ್ತದೆ. ಚುನಾವಣಾ ಆಯೋಗದ ಸಹಾಯವಿಲ್ಲದೆ ಬಿಜೆಪಿ ಚುನಾವಣೆಗಳನ್ನು ಗೆಲ್ಲಲು ಸಾಧ್ಯವೇ ಇಲ್ಲ ಎಂದೂ ಅವರು ಹೇಳಿದರು. ▸4

‘ನುಸುಳುಕೋರರ ರಕ್ಷಿಸಲು ಪ್ರಯತ್ನ’

ಕಾಂಗ್ರೆಸ್ ಪಕ್ಷವು ‘ನುಸುಳುಕೋರರನ್ನು ರಕ್ಷಿಸಲು’ ಈ ರ‍್ಯಾಲಿ ಆಯೋಜಿಸಿದೆ ಎಂದು ಬಿಜೆಪಿ ಆರೋಪಿಸಿದೆ. ಜನರನ್ನು ದಾರಿತಪ್ಪಿಸುವ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ‘ಅವಮಾನಿಸುವ’ ತನ್ನ ಉದ್ದೇಶದಲ್ಲಿ ಕಾಂಗ್ರೆಸ್ ಎಂದಿಗೂ ಯಶಸ್ವಿಯಾಗುವುದಿಲ್ಲ ಎಂದು ಪ್ರತಿಪಾದಿಸಿದೆ.

‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಗ್ಗೆ ಸಂಸತ್‌ನಲ್ಲಿ ಸಮಗ್ರ ಚರ್ಚೆ ನಡೆದಿದೆ. ಗೃಹ ಸಚಿವ ಅಮಿತ್ ಶಾ ಅವರು ಕಾಂಗ್ರೆಸ್‌ನ ಸುಳ್ಳು ಆರೋಪಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಅದಾದ ಬಳಿಕವೂ ಈ ವಿಷಯವನ್ನು ಕಾಂಗ್ರೆಸ್ ರಾಜಕೀಯಗೊಳಿಸುತ್ತಿದೆ. ಕಾಂಗ್ರೆಸ್‌ನ ರ‍್ಯಾಲಿಯು ಅಕ್ರಮ ನುಸುಳುಕೋರರನ್ನು ರಕ್ಷಿಸುವ ಗುರಿ ಹೊಂದಿದೆ’ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ ಹೇಳಿದ್ದಾರೆ.

‘ಇತಿಹಾಸ ಸೇರಲಿದೆ’

ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿ ಅವರ ಸಾವು ಬಯಸಿ ಘೋಷಣೆ ಕೂಗಿದ್ದಾರೆ ಎಂಬ ಪೋಸ್ಟ್‌ಗಳನ್ನು ಉಲ್ಲೇಖಿಸಿ ಪ್ರತಿಕ್ರಿಯಿಸಿರುವ ಬಿಜೆಪಿಯ ಸುಧಾಂಶು ತ್ರಿವೇದಿ, ‘ಕಾಂಗ್ರೆಸ್ ಕಾರ್ಯಕರ್ತರು ಮತ್ತೊಮ್ಮೆ ಮೋದಿಯವರ ಸಾವು ಬಯಸಿದ್ದಾರೆ. ರಾಹುಲ್ ನಾಯಕತ್ವದಲ್ಲಿ ಕಾಂಗ್ರೆಸ್, ಇತಿಹಾಸ ಸೇರಲಿದೆ’ ಎಂದರು.



ಸಿಡ್ನಿಯ ಬೋಂಡಿ ಬೀಚ್‌ನಲ್ಲಿ ಸೇರಿದ್ದ ನೂರಾರು ಮಂದಿ ಗುಂಡಿನ ದಾಳಿ ನಡೆದಾಗ ಪ್ರಾಣ ರಕ್ಷಣೆಗಾಗಿ ಓಡಿದರು — ಎಎಫ್‌ಪಿ ಚಿತ್ರ

ಆಸ್ಟ್ರೇಲಿಯಾದಲ್ಲಿ ಗುಂಡಿನ ದಾಳಿಗೆ 16 ಜನರ ಸಾವು

ಸಿಡ್ನಿ (ಎಪಿ): ಇಲ್ಲಿನ ಪ್ರವಾಸಿ ತಾಣ ಬೋಂಡಿ ಬೀಚ್‌ನಲ್ಲಿ ‘ಹನುಕ್ಕಾ ಯಹೂದಿ ಹಬ್ಬ’ದ ಪ್ರಾರಂಭೋತ್ಸವಕ್ಕಾಗಿ ಸೇರಿದ್ದ ಅಪಾರ ಸಂಖ್ಯೆಯ ಜನರ ಮೇಲೆ ಬಂದೂಕುಧಾರಿಗಳಿಬ್ಬರು ನಡೆಸಿದ ಯದ್ವಾತದ್ವಾ ಗುಂಡಿನ ದಾಳಿಯಲ್ಲಿ 16 ಮಂದಿ ಮೃತಪಟ್ಟಿದ್ದಾರೆ.

ಪೊಲೀಸರು ನಡೆಸಿದ ಪ್ರತಿ ದಾಳಿಯಲ್ಲಿ ಒಬ್ಬ ದಾಳಿಕೋರ ಮೃತಪಟ್ಟಿದ್ದಾನೆ. ಇನ್ನೊಬ್ಬನನ್ನು ಬಂಧಿಸಲಾಗಿದೆ. ಘಟನೆಯಲ್ಲಿ 29 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಗುಂಡಿನ ದಾಳಿಯನ್ನು ಆಸ್ಟ್ರೇಲಿಯಾ ಪೊಲೀಸರು ‘ಭಯೋತ್ಪಾದಕ ಕೃತ್ಯ’ ಎಂದು ಘೋಷಿಸಿದ್ದು ದೇಶದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ. ಪೊಲೀಸರು ಗುಂಡಿಕ್ಕಿ ಹತ್ಯೆ ಮಾಡಿದ ದಾಳಿಕೋರನಿಗೆ ಸೇರಿದ ವಾಹನದಿಂದ ಕಚ್ಚಾ ಬಾಂಬ್ ಅನ್ನು ವಶಕ್ಕೆ ಪಡೆಯಲಾಗಿದೆ. ಗಾಯಗೊಂಡವರಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳೂ ಸೇರಿದ್ದಾರೆ ಎಂದು ನ್ಯೂ ಸೌತ್ ವೇಲ್ಸ್ ಸ್ಟೇಟ್ ಪೊಲೀಸರು ತಿಳಿಸಿದ್ದಾರೆ.

ಸಾಮೂಹಿಕ ಗುಂಡಿನ ದಾಳಿಗೆ ಕಾರಣ ಏನು ಎನ್ನುವುದನ್ನು ಇನ್ನೂ ಆಸ್ಟ್ರೇಲಿಯಾದ ಸರ್ಕಾರ ಖಚಿತಪಡಿಸಿಲ್ಲ. ಯೆಹೂದಿಗಳ ಎಂಟು ದಿನಗಳ ಚಳಿಗಾಲದ ‘ದೀಪಗಳ ಹಬ್ಬ’ದ ಮೊದಲ ದಿನವಾದ ಭಾನುವಾರ ಸಾವಿರಕ್ಕೂ ಹೆಚ್ಚು ಜನರು ಬೋಂಡಿ ಕಡಲ ತೀರದಲ್ಲಿ ಸೇರಿದ್ದಾಗ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಮುಖ ದಾಳಿಗಳು

- ಆಸ್ಟ್ರೇಲಿಯಾದಲ್ಲಿ ಸಾಮೂಹಿಕ ಗುಂಡಿನ ದಾಳಿಗಳು ನಡೆದಿರುವುದು ಕಡಿಮೆ. 1996ರಲ್ಲಿ ಆರ್ಥರ್ ಬಂದರಿನ ಟ್ಯಾಸ್ಮೆನಿಯನ್ ಪಟ್ಟಣದಲ್ಲಿ ಬಂದೂಕುಧಾರಿಯೊಬ್ಬ ನಡೆಸಿದ ದಾಳಿಯಲ್ಲಿ 35 ಮಂದಿ ಮೃತಪಟ್ಟಿದ್ದರು
- 2014ರಲ್ಲಿ ಐವರು ಮೃತಪಟ್ಟಿದ್ದರು
- 2018ರಲ್ಲಿ ನಡೆದ ಇನ್ನೊಂದು ಘಟನೆಯಲ್ಲಿ ವ್ಯಕ್ತಿಯೊಬ್ಬ ತನ್ನ ಸ್ವಂತ ಕುಟುಂಬದ 8 ಜನರಿಗೆ ಗುಂಡಿಕ್ಕಿ, ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದ
- 2022ರಲ್ಲಿ ಬಂದೂಕುಧಾರಿಗಳು ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಪೊಲೀಸರು ಮೃತಪಟ್ಟಿದ್ದರು

> ಬ್ರಿಟನ್‌ನಲ್ಲಿ ಯಹೂದಿಗಳ ಪ್ರದೇಶ ಮತ್ತು ಯಹೂದ್ಯರ ಪೂಜಾ ಮಂದಿರ ಸುತ್ತ ಭದ್ರತೆಯನ್ನು ಹೆಚ್ಚಿಸಲಾಗುವುದು
> **ಕಿಯರ್ ಸ್ಟಾರ್ಮರ್,** ಬ್ರಿಟನ್ ಪ್ರಧಾನಿ

> ಪ್ಯಾಲೆಸ್ಟೀನ್ ಪ್ರತ್ಯೇಕ ರಾಷ್ಟ್ರ ರಚನೆಗೆ ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್ ಕರೆ ಕೊಟ್ಟಿದ್ದರು. ನಿಮ್ಮ ಈ ನಿಲುವು ಯೆಹೂದಿ ವಿರೋಧಿ ಬೆಂಕಿಗೆ ತುಪ್ಪ ಸುರಿಯಲಿದೆ ಎಂಬುದಾಗಿ ಅವರಿಗೆ ಆಗ ಎಚ್ಚರಿಸಿದ್ದೆ
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ಪ್ರತ್ಯಕ್ಷದರ್ಶಿಯೊಬ್ಬರು ಘಟನೆಯ ವಿಡಿಯೊ ಚಿತ್ರೀಕರಣ ಮಾಡಿದ್ದು, ಅದನ್ನು ಆಸ್ಟ್ರೇಲಿಯಾದ ಕೆಲವು ಸುದ್ದಿ ವಾಹಿನಿಗಳು ಪ್ರಸಾರ ಮಾಡಿವೆ. ಈ ವಿಡಿಯೊ ತುಣುಕಿನಲ್ಲಿ ದಾಳಿಕೋರರಲ್ಲಿ ಒಬ್ಬನನ್ನು ತಡೆಯಲು ಜನರು ಮುಂದಾಗುತ್ತಿರುವ ದೃಶ್ಯವಿದೆ.

‘ಬೋಂಡಿ ಬೀಚ್‌ನಲ್ಲಿ ನಡೆದ ಗುಂಡಿನ ದಾಳಿಯು ತೀವ್ರ ದುಃಖಕರ ಘಟನೆ. ದಾಳಿಕೋರರಲ್ಲಿ ಒಬ್ಬನನ್ನು ತಡೆದ ಜನರಿಗೆ ಅಭಿನಂದನೆಗಳು. ಅವರೇ ನಿಜವಾದ ಹೀರೊಗಳು’ ಎಂದು ನ್ಯೂ ಸೌತ್ ವೇಲ್ಸ್‌ನ ಮುಖಂಡ ಕ್ರಿಸ್ ಮಿನ್ಸ್ ಹೇಳಿದ್ದಾರೆ.

‘ಸಂತೋಷದ ದಿನದಂದೇ ದುಷ್ಕೃತ್ಯ’: ‘ಹನುಕ್ಕಾ’ ಯಹೂದಿಗಳಿಗೆ ಪವಿತ್ರ ಹಬ್ಬ. ಇದು ನಂಬಿಕೆಯ ಆಚರಣೆ. ಆದರೆ, ಈ ಸಂತೋಷದ ದಿನದಂದೇ ದುಷ್ಕೃತ್ಯ ನಡೆದಿದೆ. ಇದು ಯಹೂದಿ ಆಸ್ಟ್ರೇಲಿಯನ್ನರನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯಾಗಿದೆ. ಭಯೋತ್ಪಾದನೆ ಆಸ್ಟ್ರೇಲಿಯಾದ ಹೃದಯವನ್ನು ಗಾಸಿಗೊಳಿಸಿದೆ’ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್ ಹೇಳಿದ್ದಾರೆ.

ಶಾಸಕ ಶಾಮನೂರು ಶಿವಶಂಕರಪ್ಪ ನಿಧನ

ಪ್ರಜಾವಾಣಿ ವಾರ್ತೆ



1931-2025

ದಾವಣಗೆರೆ: ಹಿರಿಯ ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಶಾಮನೂರು ಶಿವಶಂಕರಪ್ಪ (95) ವಯೋಸಹಜ ಅನಾರೋಗ್ಯದಿಂದ ಭಾನುವಾರ ಸಂಜೆ ನಿಧನರಾದರು.

ಇವರಿಗೆ ಗಣಿ ಮತ್ತು ಭೂವಿಜ್ಞಾನ ಖಾತೆ ಸಚಿವರೂ ಆಗಿರುವ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿ ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಸಂಸದೆ, ಸೊಸೆ ಡಾ.ಪ್ರಭಾ ಮಲ್ಲಿಕಾರ್ಜುನ್ ಇದ್ದಾರೆ.

ಶಾಮನೂರು ಶಿವಶಂಕರಪ್ಪ ಅವರು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಲ್ಲಿ ಕೆಲವು ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

ಶಿವಶಂಕರಪ್ಪ ಅವರು 1931ರ ಜೂನ್ 16ರಂದು ಶಾಮನೂರು ಕಲ್ಲಪ್ಪ– ಸಾವಿತ್ರಮ್ಮ ದಂಪತಿ ಪುತ್ರನಾಗಿ ಜನಿಸಿದ್ದರು. ಮೂಲತಃ ಉದ್ಯಮಿ. ರಾಜಕೀಯ ಕ್ಷೇತ್ರ ಪ್ರವೇಶಿಸಿದ ಇವರು 6 ಬಾರಿ ಶಾಸಕರಾಗಿ, ಸಚಿವರಾಗಿ ಹಾಗೂ ಒಮ್ಮೆ ಸಂಸದರಾಗಿ ಆಯ್ಕೆಯಾಗಿದ್ದರು. ಸುದೀರ್ಘ ಅವಧಿಗೆ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಖಜಾಂಚಿಯಾಗಿದ್ದರು. ▸4

ನುಡಿನಮನ ▸4

ಶೀತಗಾಳಿ 14 ಜಿಲ್ಲೆಗಳಿಗೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ದಿನದಿಂದ ದಿನಕ್ಕೆ ತಾಪಮಾನ ಕುಸಿತವಾಗುತ್ತಿದ್ದು, ರಾಜ್ಯದ 14 ಜಿಲ್ಲೆಗಳಲ್ಲಿ ಸೋಮವಾರ ಶೀತ ಗಾಳಿ ಕಾಣಿಸಿಕೊಳ್ಳುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ, ಗದಗ, ಧಾರವಾಡ, ಹಾವೇರಿ, ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ ಮತ್ತು ಮೈಸೂರಿನಲ್ಲಿ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಶೀತಗಾಳಿ ಬೀಸುವ ಸಾಧ್ಯತೆಯಿದೆ. ▸7

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕೊರಗರ ಮೊದಲ ಎಂ.ಡಿ. ಪದವೀಧರೆ




ಪ್ರಜಾವಾಣಿ ವಾರ್ತೆ

ಉಡುಪಿ: ಜಿಲ್ಲೆಯ ಕುಂದಾಪುರದ ಉಳ್ತೂರು ನಿವಾಸಿ, ಕೊರಗ ಸಮುದಾಯದ ಡಾ.ಕೆ.ಸ್ನೇಹಾ ಅವರು ನವದೆಹಲಿಯ ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸಸ್‌ನಿಂದ (ಯುಸಿಎಂಎಸ್) ಡಾಕ್ಟರ್ ಆಫ್ ಮೆಡಿಸಿನ್ (ಎಂ.ಡಿ) ಪದವಿ ಪಡೆದಿದ್ದಾರೆ. ಈ ಸಾಧನೆ ಮಾಡಿದ ಸಮುದಾಯದ ಮೊದಲಿಗರು. ಸ್ನೇಹಾ ಅವರ ತಂದೆ ಗಣೇಶ ಅವರು ಸಾಮಾಜಿಕ ಕಾರ್ಯಕರ್ತರಾಗಿದ್ದು, ತಾಯಿ ಜಯಶ್ರೀ ಅವರು ಅಂಕೋಲಾದಲ್ಲಿ ಶಿಕ್ಷಕಿಯಾಗಿದ್ದಾರೆ. ▸7

ಚಿಕ್ಕಮಗಳೂರು: ಸಖರಾಯಪಟ್ಟಣದ ಎಸ್.ಬಿದರೆ ಕೆರೆ • ಗ್ರಾಮಸ್ಥರ ಸಾಂಘಿಕ ಯತ್ನ

ಬತ್ತಿದ್ದ ಕೆರೆಗೆ ಭರಪೂರ ನೀರು



ಎಸ್.ಬಿದರೆಯ ಕೆರೆಗೆ ಪೈಪ್‌ಲೈನ್ ಮೂಲಕ ಹರಿದು ಬರುತ್ತಿರುವ ನೀರು

• ಎನ್.ಸೋಮಶೇಖರ್

ಕಡೂರು (ಚಿಕ್ಕಮಗಳೂರು): ತಾಲ್ಲೂಕಿನ ಸಖರಾಯಪಟ್ಟಣ ಹೋಬಳಿಯ ಎಸ್.ಬಿದರೆ ಗ್ರಾಮದಲ್ಲಿರುವ, ದಶಕಗಳಿಂದ ಬರಿದಾಗಿದ್ದ ಕೆರೆಗೆ ಗ್ರಾಮಸ್ಥರ ಸಾಂಘಿಕ ಶ್ರಮದಿಂದಾಗಿ ಈಗ ನೀರು ಹರಿದುಬರುತ್ತಿದೆ.

ಹತ್ತಿರದ ಬೆಳವಾಡಿ ಕೆರೆಯು ತುಂಬಿ ಕೋಡಿಯಾಗಿ ಹರಿಯುತ್ತಿದ್ದ ನೀರು, ಮಾಚೇನಹಳ್ಳಿ-ಎಸ್.ಬಿದರೆ ಬಳಿ ಹರಿದು, ಹಿರಿಯೂರಿನ ವಾಣಿವಿಲಾಸ ಸಾಗರಕ್ಕೆ ಸೇರುತ್ತಿತ್ತು. ಆ ನೀರು ಈಗ ಎಸ್.ಬಿದರೆ ಕೆರೆ ಸೇರುತ್ತಿದೆ.

ಸುಮಾರು 65 ಎಕರೆ ವಿಸ್ತೀರ್ಣದ ಎಸ್.ಬಿದರೆ ಕೆರೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿದೆ. ಕೆರೆಗೆ ಮಳೆ ನೀರೇ ಮೂಲವಾಗಿತ್ತು. ಕೆರೆ ತುಂಬುವಷ್ಟು ಮಳೆ ಇರಲಿಲ್ಲ. ಸಮಸ್ಯೆಗೆ ಪರಿಹಾರವಾಗಿ, ಇನ್ನೊಂದು ಕೆರೆ ಕೋಡಿಯಾಗಿ ಹರಿದುಹೋಗುತ್ತಿದ್ದ ನೀರನ್ನೇ ಕೆರೆ ತುಂಬಿಸಲು ಗ್ರಾಮಸ್ಥರು ಒತ್ತು ನೀಡಿದರು.

> ಸದ್ಯಕ್ಕೆ ಕೆರೆಯನ್ನು ಶೇ 40ರಷ್ಟು ತುಂಬಿಸಲು ನಿರ್ಧರಿಸಿದ್ದೇವೆ. ಸಣ್ಣ ನೀರಾವರಿ ಇಲಾಖೆ ಎಂಜಿನಿಯರ್‌ಗಳ ಸಲಹೆ ಪಡೆದು ಪೂರ್ಣ ತುಂಬಿಸಲಾಗುವುದು
> **ಶಂಕರಲಿಂಗೇಗೌಡ,** ಗ್ರಾಮದ ಹಿರಿಯ, ಎಸ್.ಬಿದರೆ

ಎತ್ತಿನಹೊಳೆ ಯೋಜನೆ ಮೂಲಕ ಹಳೇಬೀಡು ಕೆರೆಗೆ 2 ವರ್ಷದ ಹಿಂದೆ ನೀರು ಬಂದಿತ್ತು. ಹಳೇಬೀಡಿನಿಂದ ಬೆಳವಾಡಿ ಕೆರೆಗೆ ಹರಿದ ನೀರು, ಬಳಿಕ ವಾಣಿವಿಲಾಸ ಸಾಗರ ಸೇರುತ್ತಿತ್ತು. ವಾಣಿವಿಲಾಸ ಸಾಗರ ತುಂಬಿದ್ದರಿಂದ ಎಸ್.ಬಿದರೆ ಗ್ರಾಮಸ್ಥರು, ನೀರನ್ನು ಕೆರೆಗೆ ಅಭಿಮುಖವಾಗಿ ಹರಿಸಿ ಸಮಸ್ಯೆ ನೀಗಿಸಲು ಮುಂದಾದರು. ▸10

ಭಾವಪೂರ್ಣ ಶ್ರದ್ಧಾಂಜಲಿ



ನಾಡಿನ ಹಿರಿಯ ಚೇತನ , ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಜನಪ್ರಿಯ ಶಾಸಕರು,
ಸತತ 54 ವರ್ಷಗಳ ಕಾಲ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳು,
ಅದಮ್ಯ ಚೇತನರು, ಸರ್ವ ಜನಾನುರಾಗಿಗಳು, ಧರ್ಮ ಪ್ರವರ್ತಕರಾದ,

ಡಾ. ಶಾಮನೂರು ಶಿವಶಂಕರಪ್ಪನವರು

ನಿಧನರಾಗಿದ್ದು ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ

ಬಾಪೂಜಿ ವಿದ್ಯಾ ಸಂಸ್ಥೆ (ರಿ.)

ದಾವಣಗೆರೆ.

ಚಳಿಯಲ್ಲೂ ಸಂಭ್ರಮದ ಓಟ

‘ಥಂಪ್! ಸೆಲೆಬ್ರೇಷನ್ ಬೆಂಗಳೂರು’ ಹಾಫ್ ಮ್ಯಾರಥಾನ್ ಮತ್ತು 10ಕೆ ಓಟ

ಪ್ರಮುಖ ಅಂಶಗಳು
- ಲೈಫ್ ಈಸ್ ಕಾಲಿಂಗ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನಿಂದ ಆಯೋಜನೆ
- ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮಾಧ್ಯಮ ಸಹಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯೋದಯಕ್ಕೂ ಮುನ್ನವೇ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಜನರ ಗುಂಪು, ಮೈ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಉತ್ಸಾಹದಿಂದ ಉತ್ತಮ ಆರೋಗ್ಯಕ್ಕಾಗಿ ಓಡಿತು. ಈ ಓಟಕ್ಕಾಗಿ ಮಹಿಳೆಯರು ಮತ್ತು ವೃದ್ಧರು ಸಹ ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಗಿಳಿದದ್ದು ‘ಮ್ಯಾರಥಾನ್’ಗೆ ಮೆರುಗು ನೀಡಿತು.

ಲೈಫ್ ಈಸ್ ಕಾಲಿಂಗ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಲಿಮಿಟೆಡ್ ಸಂಸ್ಥೆಯು ನೈಸ್ ರಸ್ತೆಯಲ್ಲಿ ಹಮ್ಮಿಕೊಂಡಿದ್ದ 12ನೇ ಆವೃತ್ತಿಯ ‘ಥಂಪ್! ಸೆಲೆಬ್ರೇಷನ್ ಬೆಂಗಳೂರು’ ಹಾಫ್ ಮ್ಯಾರಥಾನ್ ಮತ್ತು 10ಕೆ ಓಟದಲ್ಲಿ 4,500ಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು. ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಮಾಧ್ಯಮ ಸಹಯೋಗದಲ್ಲಿ ಈ ಓಟದ ಕಾರ್ಯಕ್ರಮ ನಡೆಯಿತು. ಮುಂಜಾನೆ 5.30ರ ವೇಳೆಗೆ ನಗರದ ವಿವಿಧೆಡೆಯಿಂದ ಬಂದಿದ್ದ ಜನರು, ಸಂಗೀತಕ್ಕೆ ಹೆಜ್ಜೆ ಹಾಕುವ ಜತೆಗೆ ಓಟವನ್ನು ಸಂಭ್ರಮಿಸಿದರು.

ಅನುಭವಿ ಓಟಗಾರರು ಮತ್ತು ಹಿರಿಯರಿಗೆ ಪ್ರತ್ಯೇಕ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. 5 ಕಿ.ಮೀ. ‘ಸೆಲೆಬ್ರೇಷನ್’ ಓಟದಲ್ಲಿ 94 ವರ್ಷದ ದತ್ತಾತ್ರೇಯ ಎಂಬುವರು ಭಾಗವಹಿಸಿದ್ದರು. ಅವರು ಈ ಮ್ಯಾರಥಾನ್‌ನಲ್ಲಿ ಭಾಗವಹಿಸಿದ ಹಿರಿಯ ಸದಸ್ಯರಾಗಿದ್ದರು.

20 ಮೈಲಿ, ಹಾಫ್ ಮ್ಯಾರಥಾನ್, 10 ಕಿ.ಮೀ. ಮತ್ತು 5 ಕಿ.ಮೀ. ಸಂಭ್ರಮದ ಓಟವು ವಿವಿಧ ವಿಭಾಗದಲ್ಲಿ ನಡೆದವು. ಮೈಸೂರು ರಸ್ತೆಯ ನಾಯಂಡಹಳ್ಳಿ ಜಂಕ್ಷನ್ ಬಳಿ ಇರುವ ನೈಸ್ ಟೋಲ್ ಪ್ಲಾಜಾದಲ್ಲಿ ಓಟಗಳಿಗೆ ಚಾಲನೆ ನೀಡಲಾಯಿತು. 20 ಮೈಲಿಯ ಪುರುಷರ ಮುಕ್ತ ವಿಭಾಗದಲ್ಲಿ ಸಾತ್ವಿಕ್ ಎಸ್. ಅವರು 12 ಗಂಟೆ 15 ನಿಮಿಷದ ಎರಡು ಸೆಕೆಂಡುಗಳಲ್ಲಿ ಮೊದಲಿಗರಾಗಿ ಓಟ ಮುಗಿಸಿದರು. ಮಹಿಳೆಯರ ಮುಕ್ತ ವಿಭಾಗದಲ್ಲಿ ಲತಿಕಾ ಅರವಿಂದ ಅವರು 3 ಗಂಟೆ 5 ನಿಮಿಷದ 58 ಸೆಕೆಂಡ್‌ಗಳಲ್ಲಿ ಪೂರ್ಣ ಗೊಳಿಸಿದರು.



‘ಥಂಪ್! ಸೆಲೆಬ್ರೇಷನ್ ಬೆಂಗಳೂರು’ ಮ್ಯಾರಥಾನ್‌ನಲ್ಲಿ ಜನರು ಸಂಭ್ರಮದಿಂದ ಓಡಿದರು —ಪ್ರಜಾವಾಣಿ ಚಿತ್ರ

> **ಓಟಕ್ಕೆ ಬೆಂಗಳೂರಿಗರಿಂದ ಉತ್ತಮ ಸ್ಪಂದನೆ ದೊರೆತಿದ್ದು ಸಂತಸ ಉಂಟು ಮಾಡಿದೆ. ಗ್ರಾಮೀಣ ಶಿಕ್ಷಣಕ್ಕೆ ಪ್ರೋತ್ಸಾಹದ ಜತೆಗೆ ಮಕ್ಕಳ ಶಿಕ್ಷಣ ಮತ್ತು ಕ್ರೀಡಾ ಸೌಲಭ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇವೆ**
> **ಸುನಿಲ್ ಪಿ.ವಿ,**
> ಲೈಫ್ ಈಸ್ ಕಾಲಿಂಗ್ ಸ್ಪೋರ್ಟ್ಸ್‌ನ ರೇಸ್ ನಿರ್ದೇಶಕ

ಹಾಫ್ ಮ್ಯಾರಥಾನ್: ಎರಡನೇ ಓಟವಾದ ಹಾಫ್ ಮ್ಯಾರಥಾನ್‌ಗೆ ಬೆಳಿಗ್ಗೆ 5.45ಕ್ಕೆ ಚಾಲನೆ ನೀಡಲಾಯಿತು. ಪುರುಷರ ಮುಕ್ತ ವಿಭಾಗದಲ್ಲಿ ಓಜಸ್ ಸಾಹು ಅವರು 1 ಗಂಟೆ 25 ನಿಮಿಷ 24 ಸೆಕೆಂಡುಗಳಲ್ಲಿ ಓಟ ಮುಗಿಸಿದರು. ಮಹಿಳಾ ಮುಕ್ತ ವಿಭಾಗದಲ್ಲಿ ಸಪ್ನಾ ಅಗರ್ವಾಲ್ ವಿಜೇತರಾದರು. ಅವರು 1 ಗಂಟೆ 59 ನಿಮಿಷ 12 ಸೆಕೆಂಡುಗಳಲ್ಲಿ ಓಟ ಮುಗಿಸಿದರು.

10 ಕಿ.ಮೀ. ಪುರುಷರ ಮುಕ್ತ ವಿಭಾಗದಲ್ಲಿ ಮುಗೇಶ್ ಎಂ.ಯು. ಅವರು 42 ನಿಮಿಷ 57 ಸೆಕೆಂಡುಗಳಲ್ಲಿ ಓಟವನ್ನು ಪೂರ್ಣಗೊಳಿಸುವ ಮೂಲಕ ಜಯಶೀಲರಾದರು. ಮಹಿಳೆಯರ ವಿಭಾಗದಲ್ಲಿ ಶ್ರಿಯಾ ಗಾಣಿಗರ್ ಅವರು 57 ನಿಮಿಷ 46 ಸೆಕೆಂಡುಗಳಲ್ಲಿ ಪೂರ್ಣ ಗೊಳಿಸುವ ಮೂಲಕ ಮೊದಲಿಗರಾಗಿ ಗುರಿ ತಲುಪಿದರು.

ಐದು ಕಿ.ಮೀ. ಸಂಭ್ರಮದ ಓಟದಲ್ಲಿ ಮಕ್ಕಳು, ವೃದ್ಧರು ಸೇರಿ ವಿವಿಧ ವಯೋಮಾನದವರು ಪಾಲ್ಗೊಂಡಿದ್ದರು. ಹಿರಿಯ ನಾಗರಿಕರಿಗೆ ಐದು ಕಿ.ಮೀ. ನಡಿಗೆಯೂ ಇತ್ತು. ಹರ್ಷೋದ್ಗಾರದೊಂದಿಗೆ ಜನರು ಹೆಜ್ಜೆ ಹಾಕಿದರು.

ಐದು ಕಿ.ಮೀ. ರಿಲೆ ಹಾಗೂ 10 ಕಿ.ಮೀ. ಓಟದಲ್ಲಿ 50 ಅಂಧರು ಕೂಡ ಭಾಗವಹಿಸಿದ್ದು ವಿಶೇಷ. ಸಹಾಯಕರೊಂದಿಗೆ ಅವರು ಓಡಿದರು. ನಾಲ್ಕು ಗಂಟೆಗಳ ಕಾಲ ನಡೆದ ಓಟದ ಈ ಕಾರ್ಯಕ್ರಮದಲ್ಲಿ ಡೊಳ್ಳು ಕುಣಿತವು ಜನಸಮೂಹವನ್ನು ರಂಜಿಸಿತು. ಸಂಗೀತ ಬ್ಯಾಂಡ್‌ಗಳು, ನೃತ್ಯ ಪ್ರದರ್ಶನಗಳು ಓಟದ ಸಂಭ್ರಮಕ್ಕೆ ಮೆರುಗು ನೀಡಿದವು. ಓಟಗಾರರನ್ನು ಪ್ರೋತ್ಸಾಹಿಸಲು ಮಾರ್ಗ ಮಧ್ಯೆ ಮನರಂಜನೆ ಮತ್ತು ಪ್ರದರ್ಶನಗಳು ಸಹ ಇದ್ದವು.



ಸಂತ ಫ್ರಾನ್ಸಿಸ್ ಕಾಲೇಜಿನ ಎನ್‌ಸಿಸಿ ಘಟಕ ಆಯೋಜಿಸಿದ್ದ ‘ಫ್ರಾನ್ಸಿಸ್ ರನ್’ನಲ್ಲಿ ಓಟಗಾರರು ಭಾಗವಹಿಸಿದ್ದರು

ಫ್ರಾನ್ಸಿಸ್ ರನ್: 1,300 ಮಂದಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜಿನ ಎನ್.ಸಿ.ಸಿ ಘಟಕದ ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಫ್ರಾನ್ಸಿಸ್ ರನ್’ನಲ್ಲಿ 1,300 ಮಂದಿ ಪಾಲ್ಗೊಂಡಿದ್ದರು.

‘ಬದಲಾವಣೆಗಾಗಿ ಓಟ, ಶಕ್ತಿಗಾಗಿ ಓಟ’ ಉದ್ದೇಶದಡಿ ಈ ಓಟವನ್ನು ಆಯೋಜಿಸಲಾಗಿತ್ತು. ಕರ್ನಾಟಕ-1 ಬೆಟಾಲಿಯನ್‌ನ ಎನ್.ಸಿ.ಸಿ ಕಮಾಂಡಿಂಗ್ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ವಿಜಯ್ ಫೆಡ್ರಿಕ್ಸ್ ಅವರು ಓಟಕ್ಕೆ ಚಾಲನೆ ನೀಡಿದರು. ಈ ಸ್ಪರ್ಧೆಯ ಮಹಿಳಾ ವಿಭಾಗದಲ್ಲಿ ದೇವಂಗಿ, ಪುರುಷರ ವಿಭಾಗದಲ್ಲಿ ಭೀಮಾಶಂಕರ್ ಅವರು ಪ್ರಥಮ ಬಹುಮಾನ ಪಡೆದರು. ಓಟಕ್ಕೆ ಸಂಬಂಧಿಸಿದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಇದೇ ವೇಳೆ ಬಹುಮಾನ ವಿತರಿಸಲಾಯಿತು.

ಕಾಲೇಜಿನ ನಿರ್ದೇಶಕರಾದ ಟೈಟಸ್ ಆಂಟೊ, ಎನ್.ಸಿ.ಸಿ ಘಟಕದ ಲೆಫ್ಟಿನೆಂಟ್ ಅಮರೇಗೌಡ ಮತ್ತು ಕಾಲೇಜಿನ ಸಿಬ್ಬಂದಿ ಪಾಲ್ಗೊಂಡಿದ್ದರು.

ಬ್ಯಾಟರಾಯನಪುರ 14 ವಾರ್ಡ್‌ಗಳಲ್ಲಿ ಗೆಲ್ಲುವ ವಿಶ್ವಾಸ

ಬೆಂಗಳೂರು: ‘ಬ್ಯಾಟರಾಯನಪುರ ಕ್ಷೇತ್ರದ ಪ್ರತಿ ಗ್ರಾಮ, ಬಡಾವಣೆ, ಬೂತ್ ಮಟ್ಟದಲ್ಲಿ ಬಿಜೆಪಿಯ ಬಲವರ್ಧನೆ ನಮ್ಮ ಉದ್ದೇಶವಾಗಿದೆ. ಮುಂಬರುವ ನಗರ ಪಾಲಿಕೆ ಚುನಾವಣೆಯಲ್ಲಿ ಬ್ಯಾಟರಾಯನಪುರ ಕ್ಷೇತ್ರದ 14 ವಾರ್ಡ್‌ಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ’ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್ ಗೌಡ ವಿಶ್ವಾಸ ವ್ಯಕ್ತಪಡಿಸಿದರು

ಬ್ಯಾಟರಾಯನಪುರ ಕ್ಷೇತ್ರದ ಕೋಗಿಲು ವಾರ್ಡ್ ವ್ಯಾಪ್ತಿಯಲ್ಲಿ ವಿಜಯ ಸಂಕಲ್ಪ ಶೀರ್ಷಿಕೆಯ ಅಡಿಯಲ್ಲಿ ಭಾನುವಾರ ಆಯೋಜಿಸಿದ್ದ ಪಕ್ಷದ ಪ್ರಮುಖರ ಸಭೆ ಮತ್ತು ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಸದಾಶಿವನಗರದಲ್ಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೇಂದ್ರ ಕಚೇರಿಯಲ್ಲಿ ಭಾನುವಾರ ರಾತ್ರಿ ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಚನಾನಂದ ಸ್ವಾಮೀಜಿ ಅವರು ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು

ಅಂತಿಮ ದರ್ಶನ ಪಡೆದ ಗಣ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಅವರ ಅಭಿಮಾನಿಗಳು, ಪಕ್ಷದ ಮುಖಂಡರು ಅಧಿಕ ಸಂಖ್ಯೆಯಲ್ಲಿ ಸ್ಪರ್ಶ ಆಸ್ಪತ್ರೆಯತ್ತ ಧಾವಿಸಿದರು.

ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆಯ ಸುತ್ತ ಬಿಗಿಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಬಂದಿದ್ದರೂ, ಆಸ್ಪತ್ರೆಯ ಒಳಗೆ ಯಾರನ್ನೂ ಬಿಡಲಿಲ್ಲ. ಪೊಲೀಸರು ಎಲ್ಲರನ್ನೂ ಹೊರಗೆ ನಿಲ್ಲಿಸಿ, ಕುಟುಂಬದವರಿಗೆ ಅಷ್ಟೇ ಒಳಗೆ ಹೋಗಲು ಅವಕಾಶ ಮಾಡಿಕೊಟ್ಟಿದ್ದರು.

ಶಾಮನೂರು ಶಿವಶಂಕರಪ್ಪ ಅವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಭಾನುವಾರ ರಾತ್ರಿ 11 ಗಂಟೆ ಸುಮಾರಿಗೆ ಸದಾಶಿವನಗರದಲ್ಲಿ ಇರುವ ಅಖಿಲ ಭಾರತ ವೀರಶೈವ ಮಹಾಸಭಾ ಕಚೇರಿಗೆ ತರಲಾಯಿತು. ಅಲ್ಲಿ ಸೇರಿದ್ದ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು.

ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಚನಾನಂದ ಶ್ರೀ, ಸಚಿವ ವಿ.ಸೋಮಣ್ಣ, ಸಂಸದ ಬಸವರಾಜ ಬೊಮ್ಮಾಯಿ, ಶಾಸಕರಾದ ಎಂ.ಕೃಷ್ಣಪ್ಪ, ಅಶ್ವತ್ಥನಾರಾಯಣ ಸೇರಿದಂತೆ ವಿವಿಧ ಮಠಾಧೀಶರು, ರಾಜಕೀಯ ಪಕ್ಷದ ಮುಖಂಡರು ಅಂತಿಮ ದರ್ಶನ ಪಡೆದರು. ಬಳಿಕ ಪಾರ್ಥಿವ ಶರೀರವನ್ನು ದಾವಣಗೆರೆಗೆ ತೆಗೆದುಕೊಂಡು ಹೋಗಲಾಯಿತು.

ಹೊಸ ವರ್ಷಾಚರಣೆ ನಗರದಲ್ಲಿ ಕಟ್ಟೆಚ್ಚರ

ಬೆಂಗಳೂರು: ಹೊಸ ವರ್ಷಾಚರಣೆಗೆ ಕೆಲವೇ ದಿನಗಳು ಬಾಕಿ ಇದ್ದು, ನಗರದಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಪಬ್, ರೆಸ್ಟೋರೆಂಟ್ ಹಾಗೂ ಹೊಸ ವರ್ಷಕ್ಕೆ ಪಾರ್ಟಿ ಮಾಡಲು ನಿಗದಿ ಪಡಿಸಿರುವ ಸ್ಥಳ ಪರಿಶೀಲನೆ ನಡೆಸುತ್ತಿರುವ ಪೊಲೀಸರು, ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಕ್ರಮ ಕೈಗೊಂಡಿದ್ದಾರೆ.

ದೆಹಲಿ ಸ್ಫೋಟ ಹಾಗೂ ಗೋವಾದ ನೈಟ್ ಕ್ಲಬ್ ದುರಂತದಿಂದಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲ, ಟ್ರಿನಿಟಿ ಸೇರಿದಂತೆ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ತಪಾಸಣೆ ಕೈಗೊಂಡಿದ್ದಾರೆ. ಕಾರ್ಯಕ್ರಮ ಆಯೋಜಕರಿಗೂ ಕೆಲವು ಸೂಚನೆಗಳನ್ನು ನೀಡುತ್ತಿದ್ದಾರೆ.

ಆಯಕಟ್ಟಿನ ಸ್ಥಳಗಳ ಬಗ್ಗೆ ಮಾಹಿತಿ ಪಡೆದುಕೊಂಡಿರುವ ಹಿರಿಯ ಅಧಿಕಾರಿಗಳು, ಜಿಬಿಎ, ಅಗ್ನಿಶಾಮಕ ಹಾಗೂ ಪೊಲೀಸ್ ಇಲಾಖೆ ನಿಯಮಗಳ ಪಾಲನೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಕೆಲ ಪ್ರದೇಶಗಳಿಗೆ ಪೊಲೀಸ್ ಅಧಿಕಾರಿಗಳೇ ಖುದ್ದು ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದ್ದಾರೆ.

ನಗರದಲ್ಲಿ ಇಂದು

‘ಶ್ರೀಮದ್ಭಾಗವತ’ ಪ್ರವಚನ: ವಾದಿರಾಜಾಚಾರ್ ಮಣ್ಣೂರು, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ, ಐದನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ ಎರಡನೇ ಹಂತ, ಸಂಜೆ 6

ಮಾರ್ಗಶೀರ್ಷೋತ್ಸವ-2025: ನಾಮಸಂಕೀರ್ತನೆ: ಶೀರ್ಕಾಳೀ ಸಟ್ಟನಾಥ ಭಾಗವತರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30ರಿಂದ

‘ಗುರುಗುಣಸ್ತವನ’ ಧಾರ್ಮಿಕ ಪ್ರವಚನ: ಗುರುಪ್ರಸಾದಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ನಿಧನ ವಾರ್ತೆ

ಗೋಪಾಲಕೃಷ್ಣ



ಪೀಣ್ಯದಾಸರಹಳ್ಳಿ: ನೆಲಗದರನಹಳ್ಳಿ ನಗರಸಭೆ ಮಾಜಿ ಸದಸ್ಯ ಗೋಪಾಲಕೃಷ್ಣ(63) ಅನಾರೋಗ್ಯದಿಂದ ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು ಮತ್ತು ಪುತ್ರಿ ಇದ್ದಾರೆ. ಶಿವಪುರ ಕೆರೆ ಹತ್ತಿರ ಅವರ ಜಮೀನಿನಲ್ಲಿ ಸೋಮವಾರ 12 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಗಂಗಬೈಲಯ್ಯ



ನೆಲಮಂಗಲ: ಪಟ್ಟಣದ ಸುಭಾಷ್ ನಗರ ನಿವಾಸಿ ಗಂಗಬೈಲಯ್ಯ (99) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಲೇಖಕ ಚೌಡಯ್ಯ ಸೇರಿದಂತೆ ಮೂವರು ಪುತ್ರರು, ಪುತ್ರಿ ಇದ್ದಾರೆ. ಭಾನುವಾರ ತೋಟನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

ದೆಹಲಿಯಲ್ಲೂ ಬಣಗಳ ಶಕ್ತಿ ಪ್ರದರ್ಶನ

ಸಿದ್ದರಾಮಯ್ಯ, ಡಿಕೆಶಿ ಪರ ಘೋಷಣೆ ಮೊಳಗಿಸಿದ ಬೆಂಬಲಿಗರು

ಪ್ರಜಾವಾಣಿ ವಾರ್ತೆ

ನವದೆಹಲಿ: ಮತ ಕಳವು ವಿರುದ್ಧ ರ‍್ಯಾಲಿಯಲ್ಲಿ ಭಾಗವಹಿಸಲು ರಾಷ್ಟ್ರ ರಾಜಧಾನಿಗೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ-ಮಂತ್ರಿ ಡಿ.ಕೆ. ಶಿವಕುಮಾರ್ ಬಣದವರು ಇಲ್ಲಿ ಶಕ್ತಿ ಪ್ರದರ್ಶನ ನಡೆಸಿದರು.

ಕರ್ನಾಟಕ ಭವನದಲ್ಲಿ ಸೇರಿದ್ದ ಶಿವಕುಮಾರ್ ಬೆಂಬಲಿಗರು, ‘ಶಿವಕುಮಾರ್ ಅವರೇ ಮುಂದಿನ ಮುಖ್ಯಮಂತ್ರಿ’ ಎಂದು ಘೋಷಣೆ ಕೂಗಿದರು. ‘ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ’ ಎಂದು ಮುಖ್ಯಮಂತ್ರಿ ಬೆಂಬಲಿಗರು ಘೋಷಣೆಗಳನ್ನು ಮೊಳಗಿಸಿದರು.

ಕಾಂಗ್ರೆಸ್ ಹೈಕಮಾಂಡ್ ಸೂಚನೆ ಮೇರೆಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಪರಸ್ಪರರಿಗೆ ಏರ್ಪಡಿಸಿದ್ದ ಉಪಾಹಾರ ಕೂಟದ ಬಳಿಕ ಬಣ ರಾಜಕೀಯ ತಣ್ಣಗಾಗಿತ್ತು. ಬೆಳಗಾವಿಯಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ್ದ ವಿಧಾನ ಪರಿಷತ್ ಸದಸ್ಯ ಯತೀಂದ್ರ, ‘ಶಿವಕುಮಾರ್ ಬೇಡಿಕೆಯನ್ನು ಹೈಕಮಾಂಡ್ ಒಪ್ಪಿಲ್ಲ. ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿ’ ಎಂದು ಹೇಳಿದ್ದರು. ಅದಾದ ಬಳಿಕ ಮತ್ತೆ ರಾಜಕೀಯ ಚಟುವಟಿಕೆ ಬಿರುಸು ಪಡೆದಿತ್ತು. ಅಧಿವೇಶನದ ಸಂದರ್ಭದಲ್ಲಿ ಎರಡೂ ಬಣದವರು ಔತಣ ಕೂಟಗಳನ್ನು ನಡೆಸಿದ್ದರು.

ಮತ ಕಳವು ವಿರುದ್ಧದ ರ‍್ಯಾಲಿಯಲ್ಲಿ ಭಾಗಿಯಾಗಲು ಬಂದಿದ್ದ ಸಚಿವರಾದ ಆರ್.ಬಿ. ತಿಮ್ಮಾಪುರ, ಮಾಂಕಾಳ ವೈದ್ಯ, ಮಾಜಿ ಸಚಿವ ತನ್ವಿರ್ ಸೇಠ್, ಶಾಸಕರಾದ ಅಲ್ಲಮಪ್ರಭು ಪಾಟೀಲ, ಆನೇಕಲ್ ಶಿವಣ್ಣ, ಎ.ಸಿ ಶ್ರೀನಿವಾಸ್, ಪ್ರದೀಪ್ ಈಶ್ವರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಮ್ ಅಹ್ಮದ್, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಮಂಜುನಾಥ್ ಭಂಡಾರಿ, ವಸಂತಕುಮಾರ್, ಬಸನಗೌಡ ಬಾದರ್ಲಿ, ಶ್ರೀನಿವಾಸ್, ಪರಿಷತ್‌ನ ಮಾಜಿ ಸದಸ್ಯ ಯು.ಬಿ. ವೆಂಕಟೇಶ್ ಮತ್ತಿತರರು ಶಿವಕುಮಾರ್ ಅವರನ್ನು ಕರ್ನಾಟಕ ಭವನದಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಬಳಿಕ ಡಿಕೆಶಿ ಜತೆಗೆ ಉಪಾಹಾರ ಸೇವಿಸಿದರು.

ಭೋಜನಕೂಟಕ್ಕೆ ಸಿಎಂ ಗೈರು: ಖರ್ಗೆ ಆಯೋಜಿಸಿದ್ದ ಭೋಜನಕೂಟದಲ್ಲಿ ಸಿದ್ದರಾಮಯ್ಯ ಭಾಗಿಯಾಗಲಿಲ್ಲ. ಅವರು ಮಧ್ಯಾಹ್ನ 12.30ಕ್ಕೆ ಬರಬೇಕಿತ್ತು. ವಿಮಾನ ವಿಳಂಬವಾಗಿದ್ದರಿಂದ ಅವರು ಬರುವಾಗ 1.30 ಆಗಿತ್ತು. ಕರ್ನಾಟಕ ಭವನಕ್ಕೆ ಅವರು 2 ಗಂಟೆಗೆ ತಲುಪಿದರು. ಅಲ್ಲಿ ಭೋಜನ ಸ್ವೀಕರಿಸಿ ರಾಮ್‌ಲೀಲಾ ಮೈದಾನಕ್ಕೆ ತೆರಳಿದರು.

ರಾಹುಲ್ ಭೇಟಿಯಾದ ಡಿ.ಕೆ.ಶಿವಕುಮಾರ್

ರಾಹುಲ್ ಗಾಂಧಿ ಅವರನ್ನು ಡಿ.ಕೆ. ಶಿವಕುಮಾರ್ ಭಾನುವಾರ ಭೇಟಿ ಮಾಡಿ ಚರ್ಚಿಸಿದರು.

ಪಕ್ಷದ ಪ್ರಮುಖ ನಾಯಕರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇಂದಿರಾ ಭವನದಲ್ಲಿ ಆಯೋಜಿಸಿದ್ದ ಔತಣಕೂಟದಲ್ಲಿ ಉಪಮುಖ್ಯಮಂತ್ರಿ ಭಾಗಿಯಾದರು. ಈ ವೇಳೆ ರಾಹುಲ್ ಅವರನ್ನು ಭೇಟಿ ಮಾಡಿ ಸುಮಾರು ಎರಡು ನಿಮಿಷ ಸಮಾಲೋಚಿಸಿದರು. ‘ರಾಜ್ಯದ ಗೊಂದಲವನ್ನು ಶೀಘ್ರ ಬಗೆಹರಿಸು-ತ್ತೇವೆ’ ಎಂದು ರಾಹುಲ್ ಭರವಸೆ ನೀಡಿದರು ಎಂದು ಶಿವಕುಮಾರ್ ಆಪ್ತ ಮೂಲಗಳು ತಿಳಿಸಿವೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಶಿವಕುಮಾರ್ ಅವರಲ್ಲಿ ಪ್ರಶ್ನಿಸಿದಾಗ, ‘ಅದನ್ನೆಲ್ಲ ನಿಮಗೆ ಹೇಳಲು ಆಗುವುದಿಲ್ಲ’ ಎಂದರು. ಆ ಬಳಿಕ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಅವರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು.


ಭೋಜನಕೂಟದಲ್ಲಿ ರಾಹುಲ್ ಗಾಂಧಿ ಜತೆಗೆ ಡಿ.ಕೆ. ಶಿವಕುಮಾರ್

ಕಳೆದ ತಿಂಗಳು 2 ಬಾರಿ ರಾಷ್ಟ್ರ ರಾಜಧಾನಿಗೆ ಬಂದಿದ್ದ ಶಿವಕುಮಾರ್ ಅವರು ರಾಹುಲ್ ಭೇಟಿಗೆ ಪ್ರಯತ್ನಿಸಿ-ದ್ದರು. ಆದರೆ, ರಾಹುಲ್ ಕಾಲಾವಕಾಶ ಕೊಟ್ಟಿರಲಿಲ್ಲ.

ಸಿ.ಎಂ–ಡಿಸಿಎಂಗೆ ಸಿಗದ ಅವಕಾಶ

ಮತ ಕಳವು ವಿರುದ್ಧ ಆಯೋಜಿಸಿದ್ದ ರ‍್ಯಾಲಿಯಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರಿಗೆ ಭಾಷಣ ಮಾಡಲು ಅವಕಾಶ ಸಿಗಲಿಲ್ಲ.

ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಸುಖ್‌ವಿಂದರ್ ಸಿಂಗ್ ಸುಖು, ರಾಜಸ್ಥಾನದ ಮಾಜಿ ಉಪಮುಖ್ಯಮಂತ್ರಿ ಸಚಿನ್ ಪೈಲಟ್, ಹರಿಯಾಣದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ, ಛತ್ತೀಸಗಢದ ಮಾಜಿ ಉಪಮುಖ್ಯಮಂತ್ರಿ ಟಿ.ಎಸ್.ಸಿಂಗ್ ದೇವ್ ಮತ್ತಿತರರು ರ‍್ಯಾಲಿಯಲ್ಲಿ ಭಾಷಣ ಮಾಡಿದರು.

ಮತ ಕಳವು: ‘ಕೈ’ ರಣಕಹಳೆ

ಒಂದನೇ ಪುಟದಿಂದ...

ಸರಣಿ ಮಾಧ್ಯಮಗೋಷ್ಠಿಗಳನ್ನು ನಡೆಸಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ಹರಿಯಾಣ ಚುನಾವಣೆಗಳಲ್ಲಿನ ಮತ ಕಳವಿನ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡಿದ್ದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಆಯೋಗದ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದರು. ಮತ ಕಳವಿನ ವಿರುದ್ಧ ದೇಶದಾದ್ಯಂತ 5.5 ಕೋಟಿಗೂ ಅಧಿಕ ಸಹಿ ಸಂಗ್ರಹಿಸಿದ ಬಳಿಕ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್ ಅವರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಇಬ್ಬರು ಚುನಾವಣಾ ಆಯುಕ್ತರಿಗೆ ನೇರ ಎಚ್ಚರಿಕೆ ನೀಡಿದರು. ನಾವು ಅಧಿಕಾರಕ್ಕೆ ಬಂದ ಕೂಡಲೇ ಕಾನೂನು ತಿದ್ದುಮಾಡಿ ನಿಮ್ಮನ್ನು ಶಿಕ್ಷೆಗೆ ಗುರಿಪಡಿಸುತ್ತೇವೆ ಎಂದೂ ಎಚ್ಚರಿಸಿದರು.

ಭಾವನಾತ್ಮಕವಾಗಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ನಾನು ಮಗನ ಶಸ್ತ್ರಚಿಕಿತ್ಸೆಗೆ ಬೆಂಗಳೂರಿಗೆ ಹೋಗಬೇಕಿತ್ತು. ಆದರೆ, ಸಂಸತ್ ಅಧಿವೇಶನ ಹಾಗೂ ರ‍್ಯಾಲಿಯ ಕಾರಣಕ್ಕೆ ಅಲ್ಲಿಗೆ ಹೋಗಲಿಲ್ಲ. ನನ್ನ ಮಗನಿಗೆ ಏನಾದರೂ ಆಗಬಹುದು. 140 ಕೋಟಿ ಜನರನ್ನು ಉಳಿಸುವ ಹೋರಾಟಕ್ಕೆ ಇಲ್ಲಿಗೆ ಬಂದಿದ್ದೇನೆ’ ಎಂದು ಹೇಳಿದಾಗ ರಾಹುಲ್ ಹಾಗೂ ಇತರ ನಾಯಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು. ಅನಾರೋಗ್ಯದ ನಡುವೆಯೂ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ರ‍್ಯಾಲಿಯಲ್ಲಿ ಭಾಗಿಯಾದರು.

ಮಗನ ಶಸ್ತ್ರಚಿಕಿತ್ಸೆಗೆ ಹೋಗದ ಖರ್ಗೆ

ಒಂದನೇ ಪುಟದಿಂದ...

‘ದೇಶದ ಗಡಿಯನ್ನು ರಕ್ಷಿಸುವ ಸೈನಿಕರು ಇದ್ದಾರೆ. ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ದೇಶಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಸೋನಿಯಾ ಗಾಂಧಿ ಈ ದೇಶಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದ್ದಾರೆ. ಸಂಸತ್ ಮತ್ತು ದೊಡ್ಡ ರ‍್ಯಾಲಿ ಬಿಟ್ಟು ದೆಹಲಿಯಿಂದ ಹೊರ ಹೋಗುವುದು ಸರಿಯಲ್ಲ ಎಂದು ತೀರ್ಮಾನಿಸಿದೆ’ ಎಂದರು.

‘ಮತ ಕಳವು ಅತ್ಯಂತ ದೊಡ್ಡ ದೇಶದ್ರೋಹ. ಈ ದೇಶವು ಮತಕಳ್ಳರಿಗೆ ಕಠಿಣ ಪಾಠ ಕಲಿಸಲಿದೆ. ಕಾಂಗ್ರೆಸ್ ಸಿದ್ಧಾಂತ ಮಾತ್ರ ದೇಶವನ್ನು ಉಳಿಸಬಲ್ಲದು. ಆರ್‌ಎಸ್‌ಎಸ್ ಸಿದ್ಧಾಂತವು ದೇಶವನ್ನು ನಾಶ ಮಾಡುತ್ತದೆ’ ಎಂದು ಅವರು ವಾಗ್ದಾಳಿ ನಡೆಸಿದರು.

‘ಬಿಜೆಪಿ-ಆರ್‌ಎಸ್‌ಎಸ್‌ನವರು ಸಂವಿಧಾನವನ್ನು ಕೊನೆಗೊಳಿಸುವ ಪ್ರಯತ್ನಗಳಲ್ಲಿ ತೊಡಗಿದ್ದಾರೆ. ಅವರು ಬಡವರನ್ನು ಮತ್ತೆ ಗುಲಾಮರನ್ನಾಗಿ ಮಾಡಲು ಬಯಸುತ್ತಾರೆ. ಈ ಬಿಜೆಪಿ-ಆರ್‌ಎಸ್‌ಎಸ್‌ನವರು ಅಧಿಕಾರಕ್ಕೆ ಬಂದಿರುವುದೇ ಮತ ಕಳ್ಳತನ ಮತ್ತು ದ್ರೋಹದ ಮೂಲಕ. ನಮ್ಮ ಹೋರಾಟ ಈ ದೇಶದ್ರೋಹಿಗಳ ವಿರುದ್ಧ. ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲಿಲ್ಲ. ಕಳೆದ 11 ವರ್ಷಗಳಿಂದ ಬಿಜೆಪಿ-ಆರ್‌ಎಸ್‌ಎಸ್ ದೇಶದ ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಯನ್ನು ದುರ್ಬಲಗೊಳಿಸುವ ಕೆಲಸವನ್ನಷ್ಟೇ ಮಾಡಿದೆ’ ಎಂದು ಅವರು ದೂರಿದರು.

‘ನಾವು ಹಲವು ಚುನಾವಣೆಗಳಲ್ಲಿ ಸೋತಿದ್ದೇವೆ. ಆದರೆ, ನಮ್ಮ ಸಿದ್ಧಾಂತ ಜೀವಂತವಾಗಿದೆ. ಮೋದಿ ಚುನಾವಣೆಯಲ್ಲಿ ಸೋತ ದಿನ, ಅವರ ಹೆಸರು ಮತ್ತು ಕುರುಹು ಅಳಿಸಿಹೋಗುತ್ತದೆ’ ಎಂದು ಅವರು ಹೇಳಿದರು.

‘ಮತ ಪತ್ರ ಮೂಲಕ ಚುನಾವಣೆ ಎದುರಿಸಿ’

ಒಂದನೇ ಪುಟದಿಂದ...

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಹೆಸರುಗಳನ್ನು ದೇಶ ಎಂದಿಗೂ ಮರೆಯುವುದಿಲ್ಲ. ಅವರು ದೇಶದ ಪ್ರಜಾಪ್ರಭುತ್ವದ ಮೇಲೆ ದಾಳಿ ಮಾಡುತ್ತಿದ್ದಾರೆ. ಅವರನ್ನು ರಕ್ಷಿಸಲು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಆ ಪ್ರಯತ್ನ ಸಫಲ ಆಗುವುದಿಲ್ಲ ಎಂದು ಅವರು ಹೇಳಿದರು.

ಬಿಜೆಪಿ ಒಮ್ಮೆ ಬ್ಯಾಲೆಟ್ ಪೇಪರ್‌ನಲ್ಲಿ ನ್ಯಾಯಯುತ ಚುನಾವಣೆಯಲ್ಲಿ ಸ್ಪರ್ಧಿಸಬೇಕು. ಬಿಜೆಪಿ ಮತ್ತೆ ಗೆಲ್ಲುವುದೇ ಇಲ್ಲ. ಬಿಜೆಪಿಗೂ ಈ ಸತ್ಯ ತಿಳಿದಿದೆ ಎಂದರು.

‘ಇತಿಹಾಸದಲ್ಲಿ ಮೊದಲ ಬಾರಿಗೆ, ಇಡೀ ವಿರೋಧ ಪಕ್ಷಗಳು ಚುನಾವಣಾ ಆಯೋಗದ ಮೇಲೆ ನಂಬಿಕೆ ಇಲ್ಲ ಎಂದು ಒಕ್ಕೊರಲಿನಿಂದ ಹೇಳಿವೆ. ಚುನಾವಣಾ ವೇಳಾಪಟ್ಟಿ ಘೋಷಣೆ, ಮತದಾರರ ಪಟ್ಟಿ ಪರಿಷ್ಕರಣೆ, ಮಾದರಿ ನೀತಿ ಸಂಹಿತೆ, ಪ್ರಚಾರ, ಮತದಾನ, ಎಣಿಕೆ, ಇವಿಎಂಗಳು ಮತ್ತು ಫಲಿತಾಂಶಗಳಿಂದ ಹಿಡಿದು ಪ್ರತಿಯೊಂದು ಹೆಜ್ಜೆಯನ್ನೂ ಚುನಾವಣಾ ಆಯುಕ್ತರು ಅನುಮಾನಾಸ್ಪದವಾಗಿಸಿದ್ದಾರೆ ಎಂದು ಪ್ರಿಯಾಂಕಾ ದೂಷಿಸಿದರು.

‘ಬಿಜೆಪಿಯು ಮತ ಕಳವಿನಲ್ಲಿ ತೊಡಗಿದ್ದ ಕಾರಣಕ್ಕೆ ರಾಹುಲ್ ಅವರು ಬಿಹಾರದಲ್ಲಿ ಯಾತ್ರೆ ನಡೆಸಿದರು. ಇದೀಗ ಉತ್ತರ ಪ್ರದೇಶದಲ್ಲೂ ಇಂತಹುದೇ ಕಳವು ನಡೆಯುತ್ತಿದೆ. ರಾಜ್ಯದಲ್ಲಿ ಮೂರು ಕೋಟಿ ಮತದಾರರನ್ನು ಪಟ್ಟಿಯಿಂದ ಅಳಿಸಿ ಹಾಕುವ ಷಡ್ಯಂತ್ರ ನಡೆದಿದೆ’ ಎಂದು ಅವರು ಆರೋಪಿಸಿದರು.

‘ಕರ್ನಾಟಕ, ಮಹಾರಾಷ್ಟ್ರ ಹಾಗೂ ಹರಿಯಾಣದ ಮತ ಕಳವಿನ ಬಗ್ಗೆ ರಾಹುಲ್ ಪುರಾವೆಗಳನ್ನು ನೀಡಿದರು. ಬಿಹಾರದಲ್ಲಿ 65 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕಿತ್ತು ಹಾಕಲಾಯಿತು. ಇಷ್ಟೇ ಅಲ್ಲದೇ, ಮಾದರಿ ನೀತಿ ಸಂಹಿತೆ ಸಮಯದಲ್ಲಿ ಜನರ ಬ್ಯಾಂಕ್ ಖಾತೆಗೆ ತಲಾ ₹10 ಸಾವಿರ ವರ್ಗಾಯಿಸಲಾಯಿತು. ಇದು ಮತ ಕಳ್ಳತನ ಅಲ್ಲದಿದ್ದರೆ ಮತ್ತೇನು’ ಎಂದು ಪ್ರಶ್ನಿಸಿದರು.

‘ಸತ್ಯದಿಂದ ಸರ್ಕಾರ ಕಿತ್ತೆಸೆಯುತ್ತೇವೆ’

ಒಂದನೇ ಪುಟದಿಂದ...

ಮೂವರು ಚುನಾವಣಾ ಆಯುಕ್ತರ ಹೆಸರನ್ನು ಉಲ್ಲೇಖಿಸಿದ ಅವರು, ‘ಕೇಂದ್ರದ ಬಿಜೆಪಿ ಸರ್ಕಾರ ವಹಿಸಿದ ಎಲ್ಲ ಕೆಲಸಗಳನ್ನು ಆಯೋಗ ಮಾಡುತ್ತಿದೆ. ಸರ್ಕಾರವು 2023ರಲ್ಲಿ ಕಾನೂನು ತಿದ್ದುಪಡಿ ತಂದು ಅವರಿಗೆ ವಿನಾಯಿತಿಗಳನ್ನು ನೀಡಿದೆ. ಆದಾಗ್ಯೂ, ಕಾಂಗ್ರೆಸ್ ಪಕ್ಷವು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕಾನೂನನ್ನು ಬದಲಿಸಲಿದೆ ಮತ್ತು ಈ ಮೂವರ ವಿರುದ್ಧ ಕ್ರಮ ಕೈಗೊಳ್ಳುತ್ತದೆ’ ಎಂದು ಅವರು ಎಚ್ಚರಿಸಿದರು.

‘ನಾವು ಸತ್ಯದ ಪರವಾಗಿ ನಿಲ್ಲುತ್ತೇವೆ ಮತ್ತು ನರೇಂದ್ರ ಮೋದಿ-ಆರ್‌ಎಸ್‌ಎಸ್ ಸರ್ಕಾರವನ್ನು ಅಧಿಕಾರದಿಂದ ಕಿತ್ತು ಹಾಕುತ್ತೇವೆ. ಅವರ ಬಳಿ ಅಧಿಕಾರ ಇದೆ ಮತ್ತು ಅವರು ‘ಮತ ಚೋರಿ’ಯಲ್ಲಿ ತೊಡಗಿದ್ದಾರೆ. ಮತ ಕಳವು ಅವರ ಡಿಎನ್‌ಎಯಲ್ಲೇ ಇದೆ. ಚುನಾವಣಾ ಆಯೋಗವು ಭಾರತದ ಚುನಾವಣಾ ಆಯೋಗವೇ ಹೊರತು ಮೋದಿ ಅವರ ಚುನಾವಣಾ ಆಯೋಗವಲ್ಲ ಎಂಬುದನ್ನು ಮರೆಯಬಾರದು’ ಎಂದರು.

‘ಮೋದಿಯವರ ಮುಖ ನೋಡಿ, ಅವರ ಆತ್ಮವಿಶ್ವಾಸ ಖಾಲಿಯಾಗಿದೆ ಎಂದು ನಿಮಗೆ ಅರಿವಾಗುತ್ತದೆ. ಅಧಿಕಾರದಲ್ಲಿರುವವರೆಗೆ ಮಾತ್ರ ಅವರು ಧೈರ್ಯಶಾಲಿಗಳು. ಅಧಿಕಾರ ಹೋದ ದಿನವೇ ಅವರ ಧೈರ್ಯ ಉಡುಗಿ ಹೋಗುತ್ತದೆ’ ಎಂದು ಅವರು ವ್ಯಂಗ್ಯವಾಡಿದರು.

ಕ್ಷಮಾದಾನ ಅರ್ಜಿ ತಿರಸ್ಕರಿಸಿದ ರಾಷ್ಟ್ರಪತಿ

ನವದೆಹಲಿ (ಪಿಟಿಐ): ಮಹಾ-ರಾಷ್ಟ್ರದಲ್ಲಿ 2012ರಲ್ಲಿ ಎರಡು ವರ್ಷದ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿ ಕೊಂದ ಪ್ರಕರಣದಲ್ಲಿ ಶಿಕ್ಷೆಗೊಳಗಾದ ವ್ಯಕ್ತಿ ಕ್ಷಮಾದಾನ ಕೋರಿ ಸಲ್ಲಿಸಿದ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

2022ರ ಜುಲೈ 25ರಂದು ಅಧಿಕಾರ ವಹಿಸಿಕೊಂಡ ಬಳಿಕ ಮುರ್ಮು ಅವರು ತಿರಸ್ಕರಿಸಿದ ಮೂರನೇ ಕ್ಷಮಾದಾನ ಅರ್ಜಿ ಇದಾಗಿದೆ. ಅಪರಾಧಿ ರವಿ ಅಶೋಕ್ ಘುಮಾರೆಗೆ ವಿಧಿಸಿದ್ದ ಮರಣ ದಂಡನೆಯನ್ನು ಸುಪ್ರೀಂ ಕೋರ್ಟ್ 2019ರ ಅಕ್ಟೋಬರ್ 3ರಂದು ಎತ್ತಿಹಿಡಿದಿತ್ತು.

ಬಾಲಕಿಯ ಅತ್ಯಾಚಾರ ಹಾಗೂ ಕೊಲೆ ಘಟನೆಯು ಮಹಾರಾಷ್ಟ್ರದ ಜಲ್ನಾ ನಗರದ ಇಂದಿರಾನಗರ ಪ್ರದೇಶದಲ್ಲಿ 2012ರ ಮಾರ್ಚ್ 6ರಂದು ನಡೆದಿತ್ತು.

ಕೇರಳದ ಹಲವೆಡೆ ಹಿಂಸಾಚಾರ

ಕೋಯಿಕ್ಕೊಡ್ (ಕೇರಳ) (ಪಿಟಿಐ): ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯ ಫಲಿತಾಂಶ ಹೊರಬಿದ್ದ ಬೆನ್ನಲ್ಲೇ ಕೇರಳದ ಹಲವು ಜಿಲ್ಲೆಗಳಲ್ಲಿ ಶನಿವಾರ ರಾತ್ರಿಯಿಡೀ ಹಿಂಸಾಚಾರ ವರದಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೋಯಿಕ್ಕೋಡ್ ಜಿಲ್ಲೆಯ ಏರಾಮಲದಲ್ಲಿ ಕಾಂಗ್ರೆಸ್ ಕಚೇರಿ ಇಂದಿರಾ ಗಾಂಧಿ ಭವನದ ಮೇಲೆ ಸಿಪಿಎಂ ಕಾರ್ಯಕರ್ತರು ದಾಳಿ ಮಾಡಿದ ಆರೋಪ ಕೇಳಿಬಂದಿದ್ದರಿಂದ ರಾತ್ರಿಯಿಡೀ ಉದ್ವಿಗ್ನತೆ ನೆಲೆಸಿತ್ತು.

ಸುಮಾರು 200 ಮಂದಿಯ ಗುಂಪು ಮಾರಕಾಸ್ತ್ರಗಳನ್ನು ಹಿಡಿದು ಕಾಂಗ್ರೆಸ್ ಕಚೇರಿಯತ್ತ ಮೆರವಣಿಗೆ ನಡೆಸಿ ಕಟ್ಟಡಕ್ಕೆ ಹಾನಿ ಉಂಟುಮಾಡಿದೆ. ಇದರಿಂದ ಸುಮಾರು ₹5 ಲಕ್ಷ ನಷ್ಟ ಉಂಟಾಗಿದೆ ಎಂದು ಎಡಚೇರಿ ಠಾಣೆಯಲ್ಲಿ ದಾಖಲಾದ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪ್ರತಿಮೆಗೂ ಹಾನಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸುದ್ದಿ ಹರಡಿದ ಬೆನ್ನಲ್ಲೇ ಯುಡಿಎಫ್ ಕಾರ್ಯಕರ್ತರು ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಉದ್ವಿಗ್ನತೆ ನೆಲೆಸಿತು. ಸ್ಥಳಕ್ಕೆ ಇನ್ನಷ್ಟು ಪೊಲೀಸರನ್ನು ಕರೆಸಿ ಪರಿಸ್ಥಿತಿಯನ್ನು ನಿಯಂತ್ರಿಸಲಾಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕಣ್ಣೂರು ಜಿಲ್ಲೆಯ ಪಾನೂರಿನಲ್ಲಿ ಮುಸ್ಲಿಂ ಲೀಗ್‌ನ ಹಲವು ಕಾರ್ಯಕರ್ತರ ಮನೆಗಳನ್ನು ಗುರಿಯಾಗಿಸಿ ಸಿಪಿಎಂ ಕಾರ್ಯಕರ್ತರು ದಾಳಿ ನಡೆಸಿದ್ದಾಗಿ ಆರೋಪಿಸಲಾಗಿದೆ. ಮನೆಗಳ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ಹಾನಿಗೊಳಿಸಿದ್ದಾರೆ. ಕಣ್ಣೂರಿನ ಪಯ್ಯನೂರಿನಲ್ಲಿ ಸಿಪಿಎಂ ಕಾರ್ಯಕರ್ತನೊಬ್ಬ ಗಾಂಧಿ ಪ್ರತಿಮೆಯನ್ನು ವಿರೂಪಗೊಳಿಸಿದ್ದಾನೆ ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಆರೋಪಿಸಿದ್ದಾರೆ.

> **ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ತಮಗೆ ಭಾರಿ ಯಶಸ್ಸು ಲಭಿಸಿದೆ ಎಂದು ಹೇಳುವ ಮೂಲಕ ಬಿಜೆಪಿ ಸುಳ್ಳು ಸಂಕಥನವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ**
> **ಕೆ.ಸಿ. ವೇಣುಗೋಪಾಲ್**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

ಹಲವರ ವಿರುದ್ಧ ಪ್ರಕರಣ

- ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿಯಲ್ಲಿ ಯುಡಿಎಫ್ ಕಾರ್ಯಕರ್ತ ಮತ್ತು ಆತನ ಕುಟುಂಬ ಸದಸ್ಯರು ಪ್ರಯಾ-ಣಿಸುತ್ತಿದ್ದ ಕಾರಿನ ಮೇಲೆ ಸಿಪಿಎಂ ಕಾರ್ಯಕರ್ತರು ದಾಳಿ ನಡೆಸಿದ್ದಾಗಿ ಆರೋಪಿಸಲಾಗಿದೆ. 40 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ
- ಸುಲ್ತಾನ್ ಬತ್ತೇರಿಯಲ್ಲಿ ಸಿಪಿಎಂ ಕಾರ್ಯಕರ್ತನ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಕೆಲವು ಯುಡಿಎಫ್ ಕಾರ್ಯಕರ್ತರ ವಿರುದ್ಧವೂ ಪ್ರಕರಣ ದಾಖಲಾಗಿದೆ
- ಕಣ್ಣೂರು ಜಿಲ್ಲೆಯ ಉಳಿಕ್ಕಲ್‌ನಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ಕಾರ್ಯಕರ್ತರ ಮಧ್ಯೆ ಸಂಘರ್ಷ ನಡೆದಿದೆ
- ಕಾಸರಗೋಡು ಜಿಲ್ಲೆಯ ಬೇಡಗಂನಲ್ಲಿ ಎಲ್‌ಡಿಎಫ್ ವಿಜ-ಯೋತ್ಸವಕ್ಕೆ ಯುಡಿಎಫ್ ಕಾರ್ಯಕರ್ತರು ಅಡ್ಡಿಪಡಿಸಿದ ಘಟನೆ ನಡೆದಿದೆ
- ತಿರುವನಂತಪುರದ ನೆಯ್ಯಾಟ್ಟಿನ್‌ಕರದಲ್ಲಿ ಸಿಪಿಎಂ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಸಂಘರ್ಷ ನಡೆದಿದೆ

ಕಾಂಗ್ರೆಸ್ ಕಟ್ಟಾಳು ಶಾಮನೂರು... ಆಮಿಷಕ್ಕೆ ಒಳಗಾಗದ ಪಕ್ಷನಿಷ್ಠೆ

ಜೀವನೋತ್ಸಾಹದ ಉದ್ಯಮಿ, ರಾಜಕಾರಣಿ

• ಸಿದ್ದಯ್ಯ ಹಿರೇಮಠ

ದಾವಣಗೆರೆ: 60ನೇ ವಯಸ್ಸು ಯಾವುದೇ ಒಬ್ಬ ವ್ಯಕ್ತಿಯ ನಿವೃತ್ತ ಜೀವನ ಆರಂಭವಾಗುವಂಥದ್ದು. ‘ಜೀವನದಲ್ಲಿ ಇನ್ನೇನಿದೆ?, ಎಲ್ಲವೂ ಮುಗಿಯಿತು’ ಎಂಬ ಭಾವ ಆವರಿಸುವ ವಯಸ್ಸೂ ಹೌದು. 60ಕ್ಕೆ ಅರಳುಮರುಳು ಶುರುವಾಗುವುದೂ ಉಂಟು.

ಆದರೆ, ಭಾನುವಾರ ಸಂಜೆ ನಿಧನರಾದ ಹಿರಿಯ ರಾಜಕಾರಣಿ ಶಾಮನೂರು ಶಿವಶಂಕರಪ್ಪ ಅವರಿಗೆ ಈ ಮಾತು ಅನ್ವಯಿಸುವುದಿಲ್ಲ. ತಮ್ಮ 38ನೇ ವಯಸ್ಸಿಗೆ ಮೊದಲ ಬಾರಿಗೆ ದಾವಣಗೆರೆ ನಗರಸಭೆ ಸದಸ್ಯರಾಗುವ ಮೂಲಕ ಸ್ಥಳೀಯ ರಾಜಕಾರಣಕ್ಕೆ ಅಡಿ ಇಟ್ಟ ಇವರು ರಾಜ್ಯಮಟ್ಟದ ರಾಜಕೀಯ ಜೀವನ ಆರಂಭಿಸಿದ್ದೇ 60ರ ನಂತರ.

1994ರಲ್ಲಿ ಮೊತ್ತಮೊದಲ ಬಾರಿಗೆ ಅವರು ವಿಧಾನಸಭೆ ಪ್ರವೇಶಿಸಿದಾಗ ಅವರ ವಯಸ್ಸು 63. 2023ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅವರು ಎಂದೂ ‘ಇದು ನನ್ನ ಕೊನೆಯ ಚುನಾವಣೆ’ ಎಂದು ಹೇಳಿದವರೇ ಅಲ್ಲ. ಬದಲಿಗೆ, ‘ಜೀವ ಇರುವವರೆಗೂ ಸ್ಪರ್ಧಿಸುವೆ’ ಎಂದೇ ಹೇಳುವ ಮೂಲಕ ಜೀವನೋತ್ಸಾಹಕ್ಕೆ ನಿದರ್ಶನ ಎಂಬಂತೆ ನಡೆದುಕೊಂಡರು.

ವ್ಯಾಪಾರ, ಉದ್ಯಮದ ಜೊತೆಜೊತೆಗೆ ರಾಜ-ಕಾರಣದಲ್ಲೂ ತಮ್ಮದೇ ಛಾಪು ಮೂಡಿಸಿರುವ ಶಾಮನೂರು 2013ರಲ್ಲಿ ಮೊದಲ ಬಾರಿಗೆ ಸಚಿವರಾದಾಗ ಅವರಿಗೆ 83ರ ಹರೆಯ.

ಕಾಂಗ್ರೆಸ್ ಕಟ್ಟಾಳು: ಒಟ್ಟು 6 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಶಾಮನೂರು ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದೇ ಇಲ್ಲ. 1998ರಲ್ಲಿ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿ ಸಂಸತ್‌ಗೆ ತೆರಳಿದ್ದ ಇವರು, 13 ತಿಂಗಳ ಬಳಿಕ ಮತ್ತೆ 1999ರಲ್ಲಿ ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಬಿಜೆಪಿಯ ಜಿ.ಮಲ್ಲಿಕಾರ್ಜುನಪ್ಪ ಅವರ ವಿರುದ್ಧ ಸೋಲನುಭವಿಸಿದರು. ಇಡೀ ರಾಜಕೀಯ ಜೀವನದಲ್ಲಿ ಇದೊಂದೇ ಅವರಿಗೆ ಎದುರಾದ ಸೋಲು.

ರಾಜಕೀಯ ಜೀವನದ ಆರಂಭದಿಂದಲೂ ಕಾಂಗ್ರೆಸ್ ಪಕ್ಷದ ಕಟ್ಟಾಳುವಿನಂತೆ ಇದ್ದ ಅವರು ಕೊನೆಯ ಉಸಿರಿರುವವರೆಗೂ ಪಕ್ಷಾಂತರ ಮಾಡಿದವರಲ್ಲ. ಅವರು ಮಾತ್ರವಲ್ಲ, ಅವರ ಕುಟುಂಬದ ಯಾವ ಸದಸ್ಯರೂ ಕಾಂಗ್ರೆಸ್ ಪಕ್ಷ ಬಿಟ್ಟು ಬೇರೆ ಪಕ್ಷದತ್ತ ಒಲವು ತೋರಿಲ್ಲ. ಹಾಗಂತ ಕಾಂಗ್ರೆಸ್ ಪಕ್ಷದಲ್ಲೂ ಇವರು ಮುಖಂಡರನ್ನು ಓಲೈಸಿದವರಲ್ಲ. ‘ಹೈಕಮಾಂಡ್ ಗೀಕಮಾಂಡ್ ನನಗಿಲ್ಲ. ನಮ್ಮದೇನಿದ್ದರೂ ಪಕ್ಷನಿಷ್ಠೆ ಮಾತ್ರ’ ಎಂದು ಬಹಿರಂಗ ಹೇಳಿಕೆ ನೀಡಿದ್ದ ಇವರು, ‘ಪಕ್ಷ ಅಧಿಕಾರಕ್ಕೆ ಬರಬೇಕೆಂದರೆ ನಾವು ಕೇಳಿದವರಿಗೆ ಟಿಕೆಟ್ ಕೊಡಬೇಕು. ನಮ್ಮ ಮನೆಯಲ್ಲೇ ನಾಲ್ಕೈದು ಜನ ಸ್ಪರ್ಧಿಸಿದರೂ ಟಿಕೆಟ್ ಕೊಡಲೇಬೇಕು. ಪಕ್ಷ ಅಧಿಕಾರಕ್ಕೆ ಬರುವಂತಿದ್ದರೆ ಗೆಲ್ಲುವವರಿಗೇ ಟಿಕೆಟ್ ಹಂಚಬೇಕು’ ಎಂದು ವಿಧಾನಸಭೆಯ ಕಳೆದ ಚುನಾವಣೆ ವೇಳೆಯೂ ಹೇಳಿದ್ದರು.



ಅಪರೂಪದ ಸಂಗಮ.. ದಾವಣಗೆರೆಯ ರೇಣುಕಾ ಮಂದಿರದಲ್ಲಿ ನಡೆದಿದ್ದ ವೀರಶೈವ ಪೀಠಾಚಾರ್ಯರು ಹಾಗೂ ಶಿವಾಚಾರ್ಯರ ಶೃಂಗ ಸಮ್ಮೇಳನದಲ್ಲಿ ಶಾಮನೂರು ಶಿವಶಂಕರಪ್ಪ (ಸಂಗ್ರಹ ಚಿತ್ರಗಳು)

> **ಸಾರ್ವಜನಿಕ ಜೀವನದಲ್ಲಿ ಅಪವಾದ, ಆರೋಪಗಳಿಂದ ದೂರವಿದ್ದು ದೊರೆತ ಅಧಿಕಾರವನ್ನು ಜನರ ಕಲ್ಯಾಣಕ್ಕಾಗಿ ಮೀಸಲಾಗಿಟ್ಟ ಅಪರೂಪದ ನಾಯಕ ಶಾಮನೂರು ಶಿವಶಂಕರಪ್ಪ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನುಡಿ ನಮನ

ನೇರ ನಡೆ, ನುಡಿಗೆ ಹೆಸ-ರುವಾಸಿಯಾಗಿದ್ದ ಶಾಮನೂರು ಯಾವುದೇ ಮುಲಾಜಿಗೆ ಒಳಗಾದವ-ರಲ್ಲ. ಸಂಬಂಧಿಗಳೇ ಇರಲಿ, ಸ್ವಪಕ್ಷದವ-ರೇ ಇರಲಿ ಸಂದರ್ಭಗಳಿಗೆ ಅನುಸಾರ ಅವರ ಕುರಿತು ಟೀಕೆ–ಟಿಪ್ಪಣಿ ಮಾಡಲು ಹಿಂಜರಿದವರೇ ಅಲ್ಲ. ಕಂಡದ್ದನ್ನು ಕಂಡಹಾಗೆ ಹೇಳುವುದಕ್ಕೆ ಹೆಸರಾಗಿದ್ದ ಇವರು, ‘ರಾಜಕಾರಣದಲ್ಲಿ ನೈತಿಕತೆ ಮರೆಯಾಗಿ ವರ್ಷಗಳೇ ಕಳೆದುಹೋಗಿವೆ. ರಾಜಕಾರಣವು ದುಡ್ಡಿನ ಮೇಲೆ ನಡೆಯುತ್ತಿದೆ. ಯುವಜನರು ದುಡ್ಡು ಮಾಡುವ ಉದ್ದೇಶದಿಂದ ಈ ಕ್ಷೇತ್ರಕ್ಕೆ ಬರಬೇಡಿ. ಜನರ ಸುಲಿಗೆ ಮಾಡಬೇಡಿ. ಸೂಕ್ತ ಮಾರ್ಗದಲ್ಲೇ ನಡೆಯಿರಿ’ ಎಂದು ಸದಾ ಕಿವಿಮಾತು ಹೇಳುತ್ತಿದ್ದರು.

ಅಜಾತಶತ್ರು: ಉಪ ಮುಖ್ಯಮಂತ್ರಿ ಸೇರಿದಂತೆ ದೊಡ್ಡಮಟ್ಟದ ಹುದ್ದೆ, ಸ್ಥಾನಮಾನಗಳ ಆಮಿಷ ಬಂದರೂ ಕಾಂಗ್ರೆಸ್ ತ್ಯಜಿಸುವ ಮನಸ್ಸು ಮಾಡದ ಇವರು, ಇತರ ಪಕ್ಷಗಳ ಮುಖಂಡರು, ಕಾರ್ಯಕರ್ತರೊಂದಿಗೆ ಸ್ನೇಹದಿಂದಲೇ ಇದ್ದರು. ಯಾರೊಂದಿಗೂ ವೈರತ್ವ ಸಾಧಿಸದೆ ಸಮಾನವಾಗಿ ಕಂಡು ಜಾತ್ಯತೀತ ನಿಲುವಿಗೆ ಅಂಟಿಕೊಂಡಿದ್ದರು.

ಉಚಿತವಾಗಿ ಲಸಿಕೆ ನೀಡಿದ್ದರು: 2020ರಲ್ಲಿ ಮೊದಲ ಅಲೆಯಲ್ಲೇ ಕೊರೊನಾ ಸೋಂಕಿಗೆ ಒಳಗಾಗಿದ್ದ ಶಿವಶಂಕರಪ್ಪ ಅವರು ತಮ್ಮ ಕ್ಷೇತ್ರ ವ್ಯಾಪ್ತಿಯ ಜನರಿಗೆ ಉಚಿತವಾಗಿ ಲಸಿಕೆ ಹಂಚಿದ್ದರು. 2 ಲಕ್ಷ ಜನರಿಗೆ ಲಸಿಕೆ ಕೊಡಲು ₹ 18 ಕೋಟಿ ವೆಚ್ಚವಾಗಲಿದೆ ಎಂದು ಸರ್ಕಾರ ತಿಳಿಸಿದಾಗ ₹ 9 ಕೋಟಿ ಕೊಡಲು ಸಮ್ಮತಿ ಸೂಚಿಸಿದ್ದರಲ್ಲದೆ, ಸರ್ಕಾರ ಮೊದಲು ಆ ಹಣವನ್ನು ಜಿಲ್ಲಾಧಿಕಾರಿಯವರಿಗೆ ನೀಡುವಂತೆ ತಿಳಿಸಿದ್ದರಿಂದ ಬೇಸತ್ತು ಸರ್ಕಾರದ ಉಸಾಬರಿ ಬೇಡ ಎಂದು ತಾವೇ ಲಸಿಕೆ ಖರೀದಿಸಿ ಜನರಿಗೆ ಕೊಡಿಸಿದ್ದರು. ಜಿಲ್ಲೆಯ ಬಡಜನರಿಗೆ ಕೋವಿಡ್ ಸಂದರ್ಭ ಉಚಿತ ಆಹಾರ, ಔಷಧ ಕಿಟ್ಟನ್ನೂ ಹಂಚುವ ಮೂಲಕ ಕಳಕಳಿ ವ್ಯಕ್ತಪಡಿಸಿದ್ದರು.


ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಅವರೊಂದಿಗೆ ಶಾಮನೂರು ಶಿವಶಂಕರಪ್ಪ

ದಾವಣಗೆರೆ ಅಭಿವೃದ್ಧಿ: ಹತ್ತಿ ಗಿರಣಿಗಳಿಂದಾಗಿ ‘ಕರ್ನಾಟಕದ ಮ್ಯಾಂಚೆಸ್ಟರ್’ ಎಂದು ಹೆಸರಾಗಿದ್ದ ದಾವಣಗೆರೆಗೆ ಜಿಲ್ಲಾ ಕೇಂದ್ರದ ಸ್ಥಾನಮಾನ ಸಿಗುವ ಹೊತ್ತಿಗೆ ಹತ್ತಿ ಗಿರಣಿಗಳು ನೇಪಥ್ಯಕ್ಕೆ ಸರಿಯಲಾರಂಭಿಸಿದ್ದವು. ಮಧ್ಯ ಕರ್ನಾಟಕದ ಈ ಪ್ರಮುಖ ನಗರಿ ದಿವಾಳಿಯ ಅಂಚನ್ನು ತಲುಪಿತು ಎಂದು ಕೆಲವರು ಟೀಕಿಸಿದ್ದರು. ಇದನ್ನೇ ಸವಾಲಾಗಿ ಸ್ವೀಕರಿಸಿ, ಈ ನಗರವನ್ನು ವಿದ್ಯಾಕಾಶಿಯಾಗಿ ಮಾಡುವ ಪಣ ತೊಟ್ಟು ತಮ್ಮ ನೇತೃತ್ವದ ಬಾಪೂಜಿ ಶಿಕ್ಷಣ ಸಂಸ್ಥೆಯ ಮೂಲಕ ಬಿಬಿಎ, ಎಂಬಿಎ, ಪಾಲಿಟೆಕ್ನಿಕ್, ಎಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಒಳಗೊಂಡ ಅರೆ ವೈದ್ಯಕೀಯ ಕೋರ್ಸ್‌ಗಳನ್ನು ಆರಂಭಿಸಿ, ವಿದ್ಯಾರ್ಥಿಗಳನ್ನು ಆಕರ್ಷಿಸಿದರು.

ಬೇರೆಯವರೂ ಸಿಇಟಿ, ಜೆಇಇ, ಎನ್‌ಇಇಟಿ ತರಬೇತಿ ನೀಡುವ ಅನೇಕ ಕಾಲೇಜುಗಳ ಸ್ಥಾಪನೆಗೆ ಬೆನ್ನುತಟ್ಟಿದ್ದರಿಂದ ಅವರು ಅಂದುಕೊಂಡಂತೆಯೇ ನಗರವು ಶಿಕ್ಷಣಕ್ಕೆ ಹೆಸರಾಗಿದೆ.

ದುಡಿಮೆಗೆ ಮಹತ್ವ: ಹದಿಹರೆಯದಿಂದಲೇ ದುಡಿಮೆಗೆ ಮಹತ್ವ ನೀಡುತ್ತಲೇ ಬಂದಿದ್ದ ಶಾಮನೂರು ಶಿವಶಂಕರಪ್ಪ ಅನಾರೋಗ್ಯದಿಂದಾಗಿ ಕಳೆದ ತಿಂಗಳು ಆಸ್ಪತ್ರೆಗೆ ದಾಖಲಾಗುವವರೆಗೂ ವ್ಯಾಪಾರ– ವಹಿವಾಟಿನ ಬಗ್ಗೆ ಗಮನ ಹರಿಸಿದ್ದರು. ಸಕ್ಕರೆ ಕಾರ್ಖಾನೆ ವಹಿವಾಟು, ಅಕ್ಕಿ, ತೊಗರಿಬೇಳೆ, ಕಡ್ಲೆ ಬೇಳೆ ವ್ಯಾಪಾರಸ್ಥರಾಗಿದ್ದ ಇವರು ನಿತ್ಯವೂ ಕಲ್ಲೇಶ್ವರ ರೈಸ್ ಮಿಲ್‌ಗೆ ತೆರಳಿ ಒಂದೆರಡು ಗಂಟೆ ಇದ್ದು ಬರುತ್ತಿದ್ದರು.

ನಿತ್ಯ ಅನೇಕ ದೇವಸ್ಥಾನಗಳಿಗೆ ಭೇಟಿ ನೀಡಿ, ಆರಾಧ್ಯ ದೈವಕ್ಕೆ ನಮಿಸಿಯೇ ದಿನವನ್ನು ಆರಂಭಿಸುತ್ತಿದ್ದ ಇವರು, ಶಿವನ ಆರಾಧಕರೂ ಹೌದು. ನೇಪಾಳದ ಕಠ್ಮಂಡುವಿನಲ್ಲಿ ಇರುವ ಪಶುಪತಿನಾಥ ದೇವಸ್ಥಾನವನ್ನು ಬಾಪೂಜಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ 2022ರಲ್ಲಿ ನಿರ್ಮಿಸಿದ್ದರ-ಲ್ಲದೆ, ಶಿವನ ಮತ್ತೊಂದು ದೇಗುಲವನ್ನೂ ಅದೇ ಆವರಣದ ಇನ್ನೊಂದು ಬದಿಯಲ್ಲಿ ಮೊದಲೇ ನಿರ್ಮಿಸಿ ಶಿವರಾತ್ರಿಯಂದು ಜಾಗರಣೆ ಮಾಡುತ್ತಿದ್ದರು.

ಪಂಚಪೀಠ ಒಗ್ಗೂಡಿಸಿದ್ದರು: 2016ರಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮದ ಕೂಗು ಕೇಳಿಸಿದಾಗ ಅದು ‘ವೀರಶೈವ ಲಿಂಗಾಯತ ಧರ್ಮ’ ಎಂದು ಪ್ರತಿಪಾದಿಸಿ, ಪಂಚಪೀಠಾಧೀಶರಿಗೆ ಬೆಂಬಲವಾಗಿ ನಿಂತಿದ್ದ ಶಾಮನೂರು ಶಿವಶಂಕರಪ್ಪ, ವೀರಶೈವ ಲಿಂಗಾಯತ ಮಹಾಸಭಾ ನೇತೃತ್ವ ಬಿಟ್ಟುಕೊಟ್ಟವರಲ್ಲ.

ವೀರಶೈವ ಪೀಠಾಚಾರ್ಯರ ಹಾಗೂ ಶಿವಾಚಾರ್ಯರ ಶೃಂಗ ಸಮ್ಮೇಳನದ ಮೂಲಕ ಪಂಚಪೀಠಾಧ್ಯಕ್ಷರನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿದ್ದರು. ಜುಲೈ 21, 22ರಂದು ದಾವಣಗೆರೆಯಲ್ಲಿ ನಡೆದ ‘ವೀರಶೈವ ಪೀಠಾಚಾರ್ಯರ ಶೃಂಗ’ದಲ್ಲಿ ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಉಜ್ಜಯಿನಿಯ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲ ಮಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿ ಪೀಠದ ಮಲ್ಲಿಕಾರ್ಜುನ ವಿಶ್ವಾರಾಧ್ಯ ಸ್ವಾಮೀಜಿ ಹಾಗೂ ಕೇದಾರ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ 16 ವರ್ಷಗಳ ಬಳಿಕ ಒಂದೇ ವೇದಿಕೆಗೆ ಬಂದಿದ್ದು ಐತಿಹಾಸಿಕ.

ಚಿತ್ರ ನಿರ್ಮಾಣ

ಲಾಭ–ನಷ್ಟದ ಲೆಕ್ಕಾಚಾರದಲ್ಲಿ ಚತುರರಾಗಿದ್ದ ಶಾಮನೂರು ಶಿವಶಂಕರಪ್ಪ ಜನಪ್ರಿಯತೆಯ ಬೆನ್ನು ಹತ್ತಿದವರಲ್ಲ. ವ್ಯಾಪಾರದ ಭಾಗವಾಗಿಯೇ ಬಹಳ ಹಿಂದೆ ‘ಬೆಂಗಳೂರಿಗೆ ಬಂದ ಬೋರೇಗೌಡ’ ಮತ್ತು ‘ಬೆತ್ತಲೆಸೇವೆ’ ಚಲನಚಿತ್ರಗಳನ್ನು ಇತರರೊಡನೆ ಸೇರಿ ನಿರ್ಮಿಸಿದ್ದ ಇವರು, ಆ ಚಿತ್ರಗಳು ಯಶಸ್ಸು ಕಾಣದಿದ್ದಾಗ, ‘ಈ ಕ್ಷೇತ್ರ ನನ್ನದಲ್ಲ’ ಎಂದು ತಿಳಿಸಿ ಚಿತ್ರೋದ್ಯಮದಿಂದಲೇ ದೂರ ಸರಿದಿದ್ದರು.

ಅಂತ್ಯಕ್ರಿಯೆ ಇಂದು

ದಾವಣಗೆರೆ: ಶಿವಶಂಕರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ನಗರದ ಹೈಸ್ಕೂಲ್ ಮೈದಾನದಲ್ಲಿ ವ್ಯವಸ್ಥೆ ಮಾಡಲಾಗಿದೆ. ಸೋಮವಾರ ಬೆಳಿಗ್ಗೆ 10.30ರಿಂದ ದರ್ಶನ ಪಡೆಯಬಹುದಾಗಿದ್ದು, ಕಲ್ಲೇಶ್ವರ ಮಿಲ್ ಆವರಣದಲ್ಲಿ ಸಂಜೆ 4ಕ್ಕೆ ಅಂತ್ಯಕ್ರಿಯೆ ನಡೆಯಲಿದೆ.

ಪಾರ್ಥಿವ ಶರೀರವನ್ನು ರಸ್ತೆ ಮಾರ್ಗವಾಗಿ ದಾವಣಗೆರೆಗೆ ತರಲಾಗುತ್ತಿದೆ. ಸೋಮವಾರ ನಸುಕಿನ 4.30ಕ್ಕೆ ಎಂಸಿಸಿ ಬಡಾವಣೆಯಲ್ಲಿರುವ ಸಚಿವ ಮಲ್ಲಿಕಾರ್ಜುನ್ ಅವರ ನಿವಾಸ ತಲುಪಲಿದೆ. ಕುಟುಂಬದ ಸದಸ್ಯರು ಹಾಗೂ ಸಂಬಂಧಿಕರಿಗೆ ಮಾತ್ರ ಇಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.


ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಎನ್. ತಿಪ್ಪಣ್ಣ

ಶಾಮನೂರು ಜೀವನದ ಪಕ್ಷಿ ನೋಟ

- 1931 ಜೂನ್ 16ರಂದು ಶಾಮನೂರು ಕಲ್ಲಪ್ಪ–ಸಾವಿತ್ರಮ್ಮ ದಂಪತಿ ಪುತ್ರರಾಗಿ ಜನನ
- ಇಂಟರ್ ಮಿಡಿಯಟ್ ವರೆಗೆ ಶಿಕ್ಷಣ
- ತಂದೆಯ ‘ಶಾಮನೂರು ಕಲ್ಲಪ್ಪ ಅಂಡ್ ಸನ್ಸ್’ ಅಂಗಡಿಯಲ್ಲಿ ವ್ಯಾಪಾರ, ಉದ್ಯಮಿಯಾಗಿ ಬೆಳವಣಿಗೆ
- 1954ರಲ್ಲಿ ಚನ್ನಗಿರಿ ತಾಲ್ಲೂಕಿನ ವಡ್ನಾಳ್ ಗ್ರಾಮದ ಪಾರ್ವತಮ್ಮ ಅವರೊಂದಿಗೆ ವಿವಾಹ
- ಶಾಮನೂರು ದಂಪತಿಗೆ ಮೂವರು ಪುತ್ರರು, ನಾಲ್ವರು ಪುತ್ರಿಯರು
- 1969ರಲ್ಲಿ ನಗರಸಭಾ ಸದಸ್ಯರಾಗಿ ಮೊದಲ ಬಾರಿಗೆ ಆಯ್ಕೆ
- 1971 ರಲ್ಲಿ ನಗರಸಭೆ ಸದಸ್ಯರಾಗಿ ಪುನರಾಯ್ಕೆ
- 1972ರಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ
- 1971ರಿಂದ 73ರವರೆಗೆ ದಾವಣಗೆರೆ ನಗರಸಭೆ ಅಧ್ಯಕ್ಷ
- 1978-80 ಕಾಂಗ್ರೆಸ್ ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷ
- 1994-1998 ದಾವಣಗೆರೆ ಕ್ಷೇತ್ರದ ವಿಧಾನಸಭಾ ಸದಸ್ಯ
- 1998-99 ದಾವಣಗೆರೆ ಲೋಕಸಭಾ ಸದಸ್ಯ
- 1999 ಲೋಕಸಭಾ ಚುನಾವಣೆಯಲ್ಲಿ ಸೋಲು
- 2004 ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ
- 2008 ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ
- 2013 ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಆಯ್ಕೆ
- ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ತೋಟಗಾರಿಕೆ, ಎಪಿಎಂಸಿ ಸಚಿವ
- 2018ರಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆ
- 2023ರಲ್ಲಿ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆ
- ಕೆಪಿಸಿಸಿ ಖಾಯಂ ಖಜಾಂಚಿಯಾಗಿ ಬಹು ವರ್ಷ ಸೇವೆ


ಶಾಮನೂರು ಶಿವಶಂಕರಪ್ಪ ಅವರು ವಿವಿಧ ಮುಖಂಡರ ಜೊತೆಗೆ

ಶಾಸಕ ಶಾಮನೂರು ಶಿವಶಂಕರಪ್ಪ ನಿಧನ

ಒಂದನೇ ಪುಟದಿಂದ...

1969ರಲ್ಲಿ ನಗರಸಭೆಗೆ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶಿಸಿದ ಶಾಮನೂರು ಶಿವಶಂಕರಪ್ಪ ಬಳಿಕ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. 1994ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಸ್ಪರ್ಧಿಸಿ ಆಯ್ಕೆಯಾದರು. ಶಾಸಕರಾಗಿ, ಸಂಸದರಾಗಿ ನಿರಂತರವಾಗಿ ಆಯ್ಕೆಯಾದ ಇವರು ವರ್ಷ ಕಳೆದಂತೆ ರಾಜಕಾರಣದಲ್ಲಿ ಮೇಲೇರಿದ್ದರು.

2012ರಿಂದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಾಗಿದ್ದರು. ಲಿಂಗಾಯತ ಪ್ರತ್ಯೇಕ ಧರ್ಮದ ಕೂಗು ಎದ್ದಾಗ ‘ವೀರಶೈವ–ಲಿಂಗಾಯತ’ ಎರಡೂ ಒಂದೇ ಎಂದು ಪ್ರಬಲವಾಗಿ ಪ್ರತಿಪಾದಿಸಿದ ಪಂಚ ಪೀಠಾಧೀಶ್ವರರ ಬೆಂಬಲಕ್ಕೆ ನಿಂತಿದ್ದರು. ಇವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿಯೇ ವೀರಶೈವ ಮಹಾಸಭಾದ ಹೆಸರು ‘ವೀರಶೈವ–ಲಿಂಗಾಯತ ಮಹಾಸಭಾ’ ಎಂಬುದಾಗಿ ಬದಲಾಯಿತು.

ವೀರಶೈವ ಲಿಂಗಾಯತ ಮಠಾಧೀಶರನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಶಾಮನೂರು ಪ್ರಯತ್ನ ಆರಂಭಿಸಿದ್ದರು. ಇದರ ಮೊದಲ ಹೆಜ್ಜೆಯಾಗಿ ಪಂಚಪೀಠ ಮಠಾಧೀಶರ ಸಮ್ಮೇಳನವನ್ನು ಆಯೋಜಿಸಿ ಯಶಸ್ಸು ಕಂಡಿದ್ದರು. ವಿರಕ್ತ ಮತ್ತು ಗುರುಪರಂಪರೆ ಒಗ್ಗೂಡಿದರೆ ಸಮಾಜ ಇನ್ನಷ್ಟು ಸಬಲವಾಗುತ್ತದೆ ಎಂಬ ನಂಬಿಕೆ ಅವರದಾಗಿತ್ತು.

4 ವರ್ಷದಲ್ಲಿ ಒಂದೇ ಸಾಹಿತ್ಯ ಸಮ್ಮೇಳನ

ಕಸಾಪ ರಾಜ್ಯ ಘಟಕದಿಂದ ಬೆಂಗಳೂರು ನಗರ ಜಿಲ್ಲಾ ಘಟಕಕ್ಕೆ ಸಿಗದ ಅನುದಾನ

● ವರುಣ ಹೆಗಡೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಘಟಕದಿಂದ ಸೂಕ್ತ ಅನುದಾನ, ಸಹಕಾರ ಹಾಗೂ ಪ್ರೋತ್ಸಾಹ ಸಿಗದ ಕಾರಣ ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕವು ನಾಲ್ಕು ವರ್ಷಗಳ ಅವಧಿಯಲ್ಲಿ ಕೇವಲ ಒಂದೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದೆ.

ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿದ್ದ ಎಂ.ಪ್ರಕಾಶಮೂರ್ತಿ ನೇತೃತ್ವದ ಕಾರ್ಯಕಾರಿ ಸಮಿತಿ ನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿದೆ. ಅಗತ್ಯ ಅನುದಾನ ಸೇರಿ ಆಡಳಿತಾತ್ಮಕ ಸಂಗತಿಗಳಿಗೆ ಕಸಾಪ ಕೇಂದ್ರ ಘಟಕದ ಜತೆಗೆ ನಿರಂತರ ಸಂಘರ್ಷದಿಂದಾಗಿ ರಾಜಧಾನಿಯಲ್ಲಿ 17ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಾಕಾರವಾಗಿಲ್ಲ.

16ನೇ ಜಿಲ್ಲಾ ಸಾಹಿತ್ಯ ಸಮ್ಮೇಳನವು 2023ರ ಮಾರ್ಚ್ ತಿಂಗಳಲ್ಲಿ ವಸಂತನಗರದ ಡಾ.ಬಿ. ಆರ್. ಅಂಬೇಡ್ಕರ್ ಭವನದಲ್ಲಿ ನಡೆದಿತ್ತು. ಲೇಖಕಿ ಎಚ್.ಎಸ್. ಶ್ರೀಮತಿ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು. ಕಸಾಪ ಕೇಂದ್ರ ಘಟಕವು ಅಗತ್ಯ ಅನುದಾನ ನೀಡದಿರುವುದು ಹಾಗೂ ಕೋಶಾಧಿಕಾರಿ ನೇಮಕಾತಿ ರದ್ದುಪಡಿಸಿದ ಪರಿಣಾಮ, ಆ ಸಮ್ಮೇಳನದ ವೆಚ್ಚವನ್ನು ಪೂರ್ಣ ಪ್ರಮಾಣದಲ್ಲಿ ಭರಿಸಲು ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕಕ್ಕೆ ಈವರೆಗೂ ಸಾಧ್ಯವಾಗಿಲ್ಲ.

ಅನುದಾನ ಕಡಿತ: 15ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2021ರ ಮಾರ್ಚ್ ತಿಂಗಳಿನಲ್ಲಿ ಹೆಬ್ಬಾಳದಲ್ಲಿ ನಡೆಸಲಾಗಿತ್ತು. ಕೋವಿಡ್ ಕಾರಣ 2022ರಲ್ಲಿ ಸಮ್ಮೇಳನ ನಡೆದಿರಲಿಲ್ಲ. 16ನೇ ಸಾಹಿತ್ಯ ಸಮ್ಮೇಳನಕ್ಕೆ ಘಟಕವು ಸುಮಾರು ₹12 ಲಕ್ಷವನ್ನು ವೆಚ್ಚ ಮಾಡಿತ್ತು. ಈ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಕಸಾಪ ರಾಜ್ಯ ಘಟಕ ನೀಡಬೇಕಾಗಿದ್ದ ₹5 ಲಕ್ಷ ಅನುದಾನದಲ್ಲಿ, ₹4 ಲಕ್ಷ ಮಾತ್ರ ಬಿಡುಗಡೆ ಮಾಡಿತ್ತು. ಇದರಿಂದಾಗಿ ಸಮ್ಮೇಳನದ ಪೂರ್ಣ ವೆಚ್ಚ ಭರಿಸಲು ಸಾಧ್ಯವಾಗದೆ, ಸ್ಮರಣ ಸಂಚಿಕೆ, ಸಮ್ಮೇಳನಾಧ್ಯಕ್ಷರ ಭಾಷಣ ಪ್ರತಿಗಳು ಹಾಗೂ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಪೂರ್ಣ ಹಣ ಪಾವತಿಸಿಲ್ಲ.

ಪರಿಷತ್ತಿನ ಜಿಲ್ಲಾ ಘಟಕಗಳಿಗೆ ಮೊದಲಿನಿಂದಲೂ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತಲಾ ₹5 ಲಕ್ಷ ಅನುದಾನವನ್ನು ಸರ್ಕಾರಗಳು ಕಸಾಪ ರಾಜ್ಯ ಘಟಕದ ಮೂಲಕ ಒದಗಿಸುತ್ತಿವೆ. ಸಭಾಂಗಣಗಳ ಬಾಡಿಗೆ ಸೇರಿ ವಿವಿಧ ವೆಚ್ಚಗಳು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿರುವುದರಿಂದ ಹೆಚ್ಚುವರಿ ಅನುದಾನವನ್ನು ಜಿಲ್ಲಾ ಘಟಕಗಳು ದಾನಿಗಳು ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಸಂಗ್ರಹಿಸುತ್ತಿವೆ. 16ನೇ ಬೆಂಗಳೂರು ನಗರ ಜಿಲ್ಲಾ ಸಮ್ಮೇಳನಕ್ಕೂ ಕೆಲ ದಾನಿಗಳಿಂದ ಅನುದಾನ ಸಂಗ್ರಹಿಸಲಾಗಿತ್ತು. ಇದರಿಂದ ಆರ್ಥಿಕ ಹೊರೆ ಸ್ವಲ್ಪಮಟ್ಟಿಗೆ ಇಳಿದಿತ್ತು

ಆರು ಘಟಕಗಳಲ್ಲಿ ಕನ್ನಡದ ಹಬ್ಬ

ಕಸಾಪ ಜಿಲ್ಲಾ ಘಟಕಗಳು ತಾಲ್ಲೂಕು ಮಟ್ಟದಲ್ಲಿಯೂ ಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿವೆ. ಪ್ರತಿ ತಾಲ್ಲೂಕಿನಲ್ಲಿ ನಡೆಸುವ ಸಮ್ಮೇಳನಕ್ಕೆ ರಾಜ್ಯ ಘಟಕವು ತಲಾ ₹1 ಲಕ್ಷ ಅನುದಾನ ಒದಗಿಸುತ್ತಿತ್ತು. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನಸಭೆ ಕ್ಷೇತ್ರವಾರು ಕಸಾಪ ಘಟಕಗಳು ಇವೆ. ರಾಜರಾಜೇಶ್ವರಿ ನಗರ, ಆನೇಕಲ್, ಬ್ಯಾಟರಾಯನ ಪುರ, ಯಶವಂತಪುರ, ಗಾಂಧಿ ನಗರ ಹಾಗೂ ದಾಸರಹಳ್ಳಿ ಕಸಾಪ ಘಟಕಗಳಿಂದ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ತಲಾ ಒಂದು ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲಾಗಿದೆ. ಈ ಸಮ್ಮೇಳನಗಳ ವೆಚ್ಚವನ್ನು ದಾನಿಗಳ ನೆರವಿನಿಂದಲೇ ಭರಿಸಲಾಗಿದೆ.



16ನೇ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ವೇಳೆ ನಡೆದಿದ್ದ ಮೆರವಣಿಗೆ

‘ಇದೇ ತಿಂಗಳು ಸಮ್ಮೇಳನ’




ಪ್ರಕಾಶಮೂರ್ತಿ

‘17ನೇ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಇದೇ ತಿಂಗಳು ನಡೆಸಲು ಮುಂದಾಗಿದ್ದೇವೆ. ಅನುದಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಕಸಾಪ ಆಡಳಿತಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ. ಕೋಶಾಧಿಕಾರಿ ರದ್ದತಿಯನ್ನು ತೆರವು ಗೊಳಿಸಿದ್ದು, ಲಭ್ಯವಿರುವ ಅನುದಾನವನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಕಳೆದ ಸಮ್ಮೇಳನವು ನಮಗೆ ಹೊರೆಯಾಗಿ ಪರಿಣಮಿಸಿತ್ತು. ನಮ್ಮ ಮೇಲಿನ ವಿಶ್ವಾಸ ಹಾಗೂ ಕನ್ನಡದ ಮೇಲಿನ ಪ್ರೀತಿಯಿಂದ ಬಾಕಿ ಹಣ ಪಾವತಿಸದಿದ್ದರೂ ಕೆಲವರು ಸುಮ್ಮನಿದ್ದಾರೆ’ ಎಂದು ಕಸಾಪ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ತಿಳಿಸಿದರು.

‘ಎರಡು ತಿಂಗಳಲ್ಲಿ ಮ್ಯಾಜಿಕ್ ಮಾಡ್ತೀರಾ?’

ಮೆಟ್ರೊ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಬೆಂಗಳೂರು: ‘ಎರಡು ವರ್ಷಗಳಲ್ಲಿ ಪಿಲ್ಲರ್ ನಿರ್ಮಿಸಲು ಸಾಧ್ಯವಾಗಿಲ್ಲ. ಎರಡು ತಿಂಗಳಲ್ಲಿ ಮ್ಯಾಜಿಕ್ ಮಾಡ್ತೀರಾ?’

ನಮ್ಮ ಮೆಟ್ರೊ ನಾಗವಾರ ನಿಲ್ದಾಣದಿಂದ ಬಾಗಲೂರು ಕ್ರಾಸ್ ನಿಲ್ದಾಣದವರೆಗಿನ ಎರಡನೇ ಹಂತದ ಕಾಮಗಾರಿಯನ್ನು ಭಾನುವಾರ ಪರಿಶೀಲಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಮೆಟ್ರೊ ಅಧಿಕಾರಿಗಳನ್ನು ಮತ್ತು ಎನ್‌ಸಿಸಿ ಗುತ್ತಿಗೆಕಂಪನಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪರಿ ಇದು.

‘ನನಗೆ ಪಿಲ್ಲರ್ ಕಾಣಿಸುತ್ತಿಲ್ಲ. ನಾನೇನು ಕುರುಡ ಅಂದುಕೊಂಡ್ರಾ? ಒಂದು ಪಿಲ್ಲರ್ ನಿರ್ಮಿಸಲು ಎರಡು ವರ್ಷ ಬೇಕಾ’ ಎಂದು ಪ್ರಶ್ನಿಸಿದರು.

ಮೆಟ್ರೊ ಕಾಮಗಾರಿಯ ತ್ಯಾಜ್ಯವನ್ನು ಪಾದಚಾರಿ ರಸ್ತೆ ಮೇಲೆ ಹಾಕಿರುವುದನ್ನು ಗಮನಿಸಿದ ಸಚಿವರು ಸಿಡಿಮಿಡಿಗೊಂಡರು. ಕೂಡಲೇ ತ್ಯಾಜ್ಯವನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಿಬ್ಬಂದಿಯನ್ನು ಕರೆಸಿ ಸಚಿವರ ಎದುರೇ ಅಧಿಕಾರಿಗಳು ತ್ಯಾಜ್ಯವನ್ನು ತೆರವು ಗೊಳಿಸಿದರು.

‘ಎಲ್ಲೋ ನಿರ್ಮಾಣ ಕಾರ್ಯ ನಡೆಯುತ್ತಿದ್ದರೆ ಇನ್ನೆಲ್ಲೋ ಯಾಕೆ ರಸ್ತೆ ಬಂದ್ ಮಾಡ್ತೀರಿ. ಜನರಿಗೆ ತೊಂದರೆ ಕೊಡ್ತೀರಿ? ಪಾದಚಾರಿ ರಸ್ತೆಯೂ ಇಲ್ಲ. ವಾಹನ ಸಂಚಾರಕ್ಕೂ ತೊಡಕು. ಯಾಕೆ ಹೀಗೆ ಮಾಡ್ತೀರಿ? ಕೂಡಲೇ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಿ’ ಎಂದು ಸೂಚಿಸಿದರು.

ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡಿರುವುದನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದರು.

ನಾಗವಾರ, ವೀರಣ್ಣಪಾಳ್ಯ, ಹೆಬ್ಬಾಳ, ಎಸ್ಟೀಮ್ ಮಾಲ್ ಜಂಕ್ಷನ್, ಅಲ್ಲಾಳಸಂದ್ರ, ಜಕ್ಕೂರು ವಾಯುನೆಲೆ ಪ್ರದೇಶ, ಬ್ಯಾಟರಾಯನಪುರ, ಕೊಡಿಗೆಹಳ್ಳಿಯಲ್ಲಿ ಮೆಟ್ರೊ ಕಾಮಗಾರಿಯನ್ನು ವೀಕ್ಷಣೆ ಮಾಡಿದರು.

ಬೆಂಗಳೂರು ಉತ್ತರ ಪಾಲಿಕೆ ಆಯುಕ್ತ ಸುನೀಲ್ ಕುಮಾರ್, ಮೆಟ್ರೊ ಮುಖ್ಯ ಎಂಜಿನಿಯರ್, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧಿಕಾರಿಗಳು ಹಾಗೂ ಬೆಸ್ಕಾಂ ಅಧಿಕಾರಿಗಳು ಜೊತೆಗಿದ್ದರು



ಕನ್ನಡ ಡಿಂಡಿಮ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಹಸ್ರ ಕಂಠ ಗಾನ ವೈಭವ ಸಮಾರಂಭದಲ್ಲಿ ನಟ ಶಿವರಾಜ್ ಕುಮಾರ್ ಮತ್ತು ಗೀತಾ ದಂಪತಿ ‘ಕನ್ನಡ ಡಿಂಡಿಮ ಪ್ರಶಸ್ತಿ’ಯನ್ನು ಸ್ವೀಕರಿಸಿದರು. ದಿವಂಗತ ಚಿತ್ರನಟ ರಾಜ್‌ಕುಮಾರ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ವಿಶ್ವ ಸಂತೋಷ ಭಾರತಿ ಸ್ವಾಮೀಜಿ, ವಿನಯ್ ಗುರೂಜಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು ವಲಯ ಮಟ್ಟದ ‘ಪ್ರಜಾವಾಣಿ’ ರಸಪ್ರಶ್ನೆ ಇಂದು

ಬೆಂಗಳೂರು: ಬೆಂಗಳೂರು ವಲಯ ಮಟ್ಟದ ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ ಡಿಸೆಂಬರ್ 15ರಂದು ಬೆಳಿಗ್ಗೆ 10ಕ್ಕೆ ಜಯನಗರದಲ್ಲಿರುವ ರಾಷ್ಟ್ರೀಯ ವಿದ್ಯಾಲಯದ ಆರ್.ವಿ. ಆಡಿಟೋರಿಯಂನಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಹೆಸರು ನೋಂದಾಯಿಸಿಕೊಳ್ಳಬಹುದು.

ORCHIDS The International School Presents ಪ್ರಜಾವಾಣಿ QUIZ CHAMPIONSHIP 2025

ಕ್ಯೂ ಆರ್ ಕೋಡ್

ಬೆಂಗಳೂರು ನಗರ, ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳ 7ರಿಂದ 10ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದು.

ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು. ಒಂದು ಶಾಲೆಯಿಂದ ಎಷ್ಟು ತಂಡಗಳು ಬೇಕಾದರೂ ಇರಬಹುದು. ಸ್ಪರ್ಧೆ ನಡೆಯುವ ಸ್ಥಳದಲ್ಲೂ ಹೆಸರನ್ನು ನೋಂದಾಯಿಸಲು ಅವಕಾಶವಿದ್ದು, ಬೆಳಿಗ್ಗೆ 9ರ ವೇಳೆಗೆ ಹಾಜರಿದ್ದು ನೋಂದಣಿ ಮಾಡಿಕೊಳ್ಳಬೇಕು.

ಮಾಹಿತಿಗೆ ದೂರವಾಣಿ ಸಂಖ್ಯೆ 7338018541.

ಅಧ್ಯಕ್ಷರಾಗಿ ರಾಚಯ್ಯ ಆಯ್ಕೆ

ಬೆಂಗಳೂರು: ಬೆಂಗಳೂರು ವೃತ್ತ ಪತ್ರಿಕಾ ನೌಕರರ ಸಂಘದ (ಬಿಎನ್‌ಇಯು) 2025–28ನೇ ಸಾಲಿನ ಅವಧಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ರಾಚಯ್ಯ ಎಂ. ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ರವಿಶೇಖರ್ ಕೆ., ಪ್ರಧಾನ ಕಾರ್ಯದರ್ಶಿಯಾಗಿ ನವೀನ್ ಆರ್.ಪಿ., ಸಹ ಕಾರ್ಯದರ್ಶಿಯಾಗಿ ಲಕ್ಷ್ಮೀನಾರಾಯಣ ಸಿ.ಆರ್., ಖಜಾಂಚಿಯಾಗಿ ಮಲ್ಲೇಶಪ್ಪ ಎಂ., ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚಂದ್ರಶೇಖರ್ ಎನ್.ಜಿ., ಜಯಪ್ಪ ಬಿ. ದೊಡ್ಡಮನಿ, ಕೆಂಪೇಗೌಡ ಜೆ.ಕೆ., ಶ್ರೀಧರ್ ಬಿ.ಎನ್., ಮಾರುತಿ ಎ., ಪನ್ನೀರ್ ಕುಮಾರ್ ಅವರು ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

‘ನಾಮನಿರ್ದೇಶನ: ಜಿಬಿಎಗೆ ಸೇರುವ ಪ್ರದೇಶಕ್ಕೆ ಸೀಮಿತ’

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗುವ ಪ್ರದೇಶಗಳಿಗೆ ಸೀಮಿತವಾಗಿ ನಾಮ ನಿರ್ದೇಶಿತ ಸದಸ್ಯರನ್ನು ನೇಮಿಸಲಾಗುತ್ತದೆ ಎಂದು ನಗರಾಭಿವೃದ್ಧಿ ಇಲಾಖೆ ಸ್ಪಷ್ಟಪಡಿಸಿದೆ.

ವಿಧಾನಸಭೆಯಲ್ಲಿ ಮಂಡಿಸಿರುವ ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ - 2025ರಲ್ಲಿ ಪ್ರಕರಣ 30ಕ್ಕೆ ಪ್ರಸ್ತಾಪಿಸಿರುವ ತಿದ್ದುಪಡಿಯಂತೆ, ಜಿಬಿಎಗೆ ಸೇರುವ ಸ್ಥಳೀಯ ಪ್ರದೇಶದ ಸಾಮಾನ್ಯ ನಿವಾಸಿಯನ್ನು ಪ್ರತಿ 20 ಸಾವಿರ ಜನಸಂಖ್ಯೆಗೆ ಕನಿಷ್ಠ ಒಬ್ಬರಂತೆ, ನಿರ್ದಿಷ್ಟ ನಗರ ಪಾಲಿಕೆಗೆ ಹೆಚ್ಚುವರಿ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಾಮ ನಿರ್ದೇಶಿತ ಸದಸ್ಯ ಚುನಾಯಿತ ಪ್ರತಿನಿಧಿಯಲ್ಲದ ಕಾರಣ ಪಾಲಿಕೆಯಲ್ಲಿ ಮತದಾನ ಮಾಡುವ ಅಧಿಕಾರ ಹೊಂದಿರುವುದಿಲ್ಲ. ಅಲ್ಲದೆ ಚುನಾವಣೆ ನಡೆಸುವವರೆಗೆ ಮಾತ್ರ ನಾಮನಿರ್ದೇಶಿತ ಸದಸ್ಯನಾಗಿ ಮುಂದುವರಿಯಲು ಅವಕಾಶವಿರುತ್ತದೆ.

ಯಾವುದಾದರೂ ಪಂಚಾಯಿತಿ ಪ್ರದೇಶದ ಭಾಗವನ್ನು ಚಿಕ್ಕ ನಗರ ಪ್ರದೇಶದಲ್ಲಿ ವಿಲೀನಗೊಳಿಸಿದ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲ್ ಅನ್ನು ಪುನರ್ ರಚಿಸುವವರೆಗೆ ಅಂತಹ ಪ್ರದೇಶದ ಸಾಮಾನ್ಯ ನಿವಾಸಿಯಾಗಿರುವ ವ್ಯಕ್ತಿಯನ್ನು ಹೆಚ್ಚುವರಿ ಕೌನ್ಸಿಲರ್ ಆಗಿ ಸರ್ಕಾರವು ನಾಮ ನಿರ್ದೇಶನಗೊಳಿಸುವ ಬಗ್ಗೆ ಕರ್ನಾಟಕ ಮುನ್ಸಿಪಾಲಿಟಿ ಅಧಿನಿಯಮ, 1964ರ ಪ್ರಕರಣ 360 (ಡಿ) ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ರಾಜ್ಯ ಸರ್ಕಾರವು ಬದ್ಧವಾಗಿದೆ. ಒಟ್ಟು 369 ವಾರ್ಡ್‌ಗಳ ಪುನರ್ ವಿಂಗಡಣೆಯನ್ನು ಮಾಡಲಾಗಿದೆ. ಈ ರೀತಿ ವಾರ್ಡ್‌ಗಳಿಗೆ ನಾಮ ನಿರ್ದೇಶಿತ ಸದಸ್ಯರನ್ನು ನೇಮಕ ಮಾಡುವುದಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಅರಣ್ಯ ಇಲಾಖೆ ಬೋನಿಗೆ ಬಿದ್ದ ಚಿರತೆ

ದೊಡ್ಡಬಳ್ಳಾಪುರ: ಮೇಕೆ ಮತ್ತು ಸಾಕುನಾಯಿ ತಿಂದು ಪರಾರಿಯಾಗಿದ್ದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಭಾನುವಾರ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ತಾಲ್ಲೂಕಿನ ಹಾರೋನಹಳ್ಳಿ ಗ್ರಾಮದ ಹೊರವಲಯದಲ್ಲಿನ ಅರಣ್ಯ ಪ್ರದೇಶ ಅಂಚಿನಲ್ಲಿ ಶನಿವಾರ ರಾಮಕೃಷ್ಣಪ್ಪ ಅವರ ಸಾಕುನಾಯಿ ಹಾಗೂ ಮಾರೇಗೌಡರ ಮೇಕೆ ತಿಂದು ಪರಾರಿಯಾಗಿತ್ತು.

ಕೂಡಲೇ ಜಾಗೃತರಾದ ಅಧಿಕಾರಿಗಳು ಸಂಜೆಯ ವೇಳೆಗೆ ಬೋನ್ ಅಳವಡಿಸಿದ್ದರು. ಭಾನುವಾರ ಬೆಳಿಗ್ಗೆ ಚಿರತೆಯ ಆರ್ಭಟದ ಶಬ್ದ ಕೇಳಿ ಸ್ಥಳಕ್ಕೆ ಗ್ರಾಮಸ್ಥರು ತೆರಳಿದಾಗ ಚಿರತೆ ಬೋನಿನಲ್ಲಿ ಸೆರೆಯಾಗಿತ್ತು.

‘ರಕ್ಷಣಾತ್ಮಕ ಆಟ’: ಬಿಜೆಪಿಯಲ್ಲಿ ಬೇಸರ

ಸರ್ಕಾರ ಕಟ್ಟಿಹಾಕಲು ನಾಯಕರು ವಿಫಲ
ಸ್ವಪಕ್ಷೀಯರಿಂದಲೇ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆಯ ಗೊಂದಲ ಮುಂದುವರಿದಿದೆ. ಆದರೆ, ಪ್ರಮುಖ ವಿರೋಧ ಪಕ್ಷವಾಗಿ ನಾವು ವಿಧಾನಸಭೆಯಲ್ಲಿ ಸರ್ಕಾರವನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿಲ್ಲ’ ಎಂಬ ಅಸಮಾಧಾನ ಬಿಜೆಪಿ ಶಾಸಕರಿಂದಲೇ ವ್ಯಕ್ತವಾಗಿದೆ.

‘ಸಾಕಷ್ಟು ಜ್ವಲಂತ ಸಮಸ್ಯೆಗಳು, ವಿವಾದಗಳು ಇದ್ದರೂ ಮುಂದಿನ ಸಾಲಿನ ನಾಯಕರ ‘ರಕ್ಷಣಾತ್ಮಕ ಆಟ’ ಸರಿಯಲ್ಲ. ಉತ್ತರಕರ್ನಾಟಕದ ಕುರಿತ ಚರ್ಚೆ ಆರಂಭವಾಗಿದ್ದರೂ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಸಾಧ್ಯವಾಗಿಲ್ಲ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಇತರ ಸಚಿವರ ವಾಗ್ದಾಳಿಗೆ ಮುಂದಿನ ಸಾಲಿನ ನಾಯಕರು ದಿಟ್ಟವಾಗಿ ಉತ್ತರ ನೀಡುತ್ತಿಲ್ಲ’ ಎಂಬ ಬೇಸರ ಶಾಸಕರಲ್ಲಿ ಮನೆ ಮಾಡಿದೆ.

‘ಕಬ್ಬು–ಮೆಕ್ಕೆ ಜೋಳ ಬೆಳೆಗಾರರ ಸಮಸ್ಯೆ, ಮಳೆ ಮತ್ತು ಪ್ರವಾಹದಿಂದ ಉಂಟಾದ ನಷ್ಟಕ್ಕೆ ಸೂಕ್ತ ಪರಿಹಾರ ನೀಡದೇ ಇರುವುದು, ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಸೇರಿ ವಿವಿಧ ನೀರಾವರಿ ಯೋಜನೆಗಳಿಗೆ ಸಮರ್ಪಕ ಅನುದಾನ ಹಂಚಿಕೆ ಮಾಡದೇ ಇರುವ ವಿಷಯವನ್ನು ಉತ್ತರಕರ್ನಾಟಕದ ಸಮಸ್ಯೆಗಳ ಚರ್ಚೆಯಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ, ಇದನ್ನೇ ಪ್ರಧಾನ ಅಸ್ತ್ರವಾಗಿ ಬಳಸಲು ಇನ್ನೂ ಸಾಧ್ಯವಾಗಿಲ್ಲ. 2ನೇ ವಾರದಲ್ಲಾದರೂ ಈ ಕುರಿತು ಚರ್ಚೆ ಪರಿಣಾಮಕಾರಿಯಾಗಿ ನಡೆಯುತ್ತದೆಯೇ’ ಎಂಬ ಸಂಶಯ ಶಾಸಕರದು.

‘ಕಾಂಗ್ರೆಸ್‌ನ ನಾಯಕತ್ವ ಬದಲಾವಣೆ ವಿಷಯವನ್ನು ಅಶೋಕ ಅವರು ತಮ್ಮ ಭಾಷಣದ ಮಧ್ಯೆ ಪ್ರಸ್ತಾಪಿಸಿದ್ದಾರೆ. ಸೋಮವಾರದ ಬಳಿಕವಾದರೂ ಈ ಕುರಿತು ವಿಸ್ತೃತವಾಗಿ ಚರ್ಚೆ ನಡೆಸಲು ಅವಕಾಶ ಬಳಸಿಕೊಳ್ಳಬೇಕು. ಕಳೆದ ವಾರ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಬಣದ ಸದಸ್ಯರು ಬಹಿರಂಗ ಹೇಳಿಕೆಗಳ ಮೂಲಕ ಪರಸ್ಪರ ಕಿಡಿ ಹೊತ್ತಿಸಿದ್ದರು. ಔತಣ ಕೂಟಗಳ ಸಭೆಯೂ ನಡೆದಿತ್ತು. ಇದನ್ನು ಅಸ್ತ್ರವಾಗಿ ಪ್ರಯೋಗಿಸಬೇಕು’ ಎನ್ನುತ್ತಾರೆ ಅವರು.

ಬೆಳಗಾವಿ ಅಧಿವೇಶನ

ಕೃಷ್ಣಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಸೇರಿ ನೀರಾವರಿಯ ವಿವಿಧ ಯೋಜನೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಿಜೆಪಿ–ಜೆಡಿಎಸ್ ಪ್ರಸ್ತಾಪಿಸಲಿವೆ. ಇದಕ್ಕೆ ಕೇಂದ್ರ ಸರ್ಕಾರದ ಸಹಕಾರ ಸಿಗುತ್ತಿಲ್ಲ ಎಂಬ ಸಿದ್ಧ ಅಸ್ತ್ರವನ್ನು ಸರ್ಕಾರ ತನ್ನ ಬತ್ತಳಿಕೆಯಲ್ಲಿ ಇಟ್ಟುಕೊಂಡಿದೆ.

‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅದರಲ್ಲೂ ಪೊಲೀಸರೇ ಅಪರಾಧ ಕೃತ್ಯದಲ್ಲಿ ತೊಡಗಿರುವ ಪ್ರಕರಣಗಳು ಹೆಚ್ಚುತ್ತಿರುವುದನ್ನು ಪ್ರಸ್ತಾಪಿಸಲಾಗುವುದು’ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ. ಆದರೆ, ಇದಕ್ಕೆ ಪ್ರತಿಯಾಗಿ ಆಳಂದದಲ್ಲಿ ಮತಕಳ್ಳತನದ ಎಸ್‌ಐಟಿ ವರದಿಯನ್ನು ಮುಂದಿಟ್ಟುಕೊಂಡು ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ತಯಾರಿ ನಡೆಸಿದೆ. ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಮಸೂದೆಯನ್ನು ಬಿಜೆಪಿ–ಜೆಡಿಎಸ್ ಪಕ್ಷಗಳು ವಿರೋಧಿಸಲು ತೀರ್ಮಾನಿಸಿವೆ.

ಅಧ್ಯಕ್ಷ ಹುದ್ದೆ ಚರ್ಚೆ ಮುನ್ನೆಲೆಗೆ

ಬಿಜೆಪಿಯಲ್ಲಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಹುದ್ದೆಯನ್ನು ಸೃಷ್ಟಿಸಿ, ಬಿಹಾರ ಸಚಿವ ನಿತಿನ್ ನಬಿನ್ ಎಂಬುವರನ್ನು ನೇಮಕ ಮಾಡಿರುವುದು, ಉತ್ತರ ಪ್ರದೇಶದ ಬಿಜೆಪಿ ಅಧ್ಯಕ್ಷರನ್ನಾಗಿ ಪಂಕಜ್ ಚೌಧರಿ ಅವರನ್ನು ನೇಮಿಸಿದ ಬೆನ್ನಲ್ಲೇ ರಾಜ್ಯದಲ್ಲಿ ಪಕ್ಷದ ಅಧ್ಯಕ್ಷ ಹುದ್ದೆಯ ಚರ್ಚೆ ಆರಂಭವಾಗಿದೆ.

‘ಬಿ.ವೈ.ವಿಜಯೇಂದ್ರ ಅವರನ್ನೇ ಮುಂದುವರೆಸುತ್ತಾರೋ ಅಥವಾ ಹೊಸಬರನ್ನು ತರುತ್ತಾರೋ? ಹೊಸಬರನ್ನು ಮಾಡಿದರೆ ಯಾರನ್ನು ಮಾಡಬಹುದು’ ಎಂಬ ಲೆಕ್ಕಾಚಾರ ಶುರುವಾಗಿದೆ.

ತಮ್ಮನ್ನೇ ಮುಂದುವರಿಸುವ ಆದೇಶ ಹೊರಡಿಸಬಹುದು ಎಂಬ ವಿಶ್ವಾಸ ವಿಜಯೇಂದ್ರ ಅವರಿಗಿದೆ. ಒಮ್ಮೆ ತಮ್ಮನ್ನು ಅಧಿಕೃತಗೊಳಿಸಿದರೆ, ಇತರ ನಾಯಕರಲ್ಲಿರುವ ಅಸಮಾಧಾನವೂ ತಗ್ಗಿ ತಮಗೆ ಎಲ್ಲರ ಸಹಕಾರ ಸಿಗಬಹುದು ಎಂಬ ಭರವಸೆ ಅವರದು.

ಸದ್ಯವೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುವುದರಿಂದ ತಕ್ಷಣದಲ್ಲೇ ಅಧ್ಯಕ್ಷರನ್ನು ಬದಲಾಯಿಸುವ ಸಾಧ್ಯತೆ ಕಡಿಮೆ. ಈ ಚುನಾವಣೆಯಲ್ಲಿ ಅಧ್ಯಕ್ಷರ ಸಂಘಟನಾ ಚತುರತೆ ಮತ್ತು ಚುನಾವಣೆಯಲ್ಲಿ ಪಕ್ಷಕ್ಕೆ ಎಷ್ಟರ ಮಟ್ಟಿಗೆ ಗೆಲುವು ತಂದುಕೊಡಬಲ್ಲರು ಎಂಬುದರ ಪರೀಕ್ಷೆಯೂ ಆಗಲಿದೆ. ಇದರಿಂದ ಮುಂದಿನ ತೀರ್ಮಾನಕ್ಕೆ ವರಿಷ್ಠರು ಇದನ್ನು ಮಾನದಂಡವಾಗಿಯೂ ತೆಗೆದುಕೊಳ್ಳಬಹುದು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕಾರಾಗೃಹ ಸುಧಾರಣೆಗೆ ರಚಿಸಿದ್ದ ಉನ್ನತ ಮಟ್ಟದ ಸಮಿತಿ

ಜೈಲು ಅವ್ಯವಸ್ಥೆ: ಸರ್ಕಾರಕ್ಕೆ ಶೀಘ್ರವೇ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆ, ಕೈದಿಗಳಿಂದ ಮೊಬೈಲ್ ಬಳಕೆ, ಮದ್ಯ ಕುಡಿದು ನೃತ್ಯ ಮಾಡಿದ ವಿಡಿಯೊ ಹಾಗೂ ಜೈಲುಗಳಲ್ಲಿ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯು ಶೀಘ್ರದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅತ್ಯಾಚಾರ, ಸರಣಿ ಕೊಲೆ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊ ಸಹ ಜಾಲತಾಣದಲ್ಲಿ ಹರಿದಾಡಿತ್ತು.

ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯ ಕಲ್ಪಿಸಿರುವ ಕುರಿತು ತೀವ್ರ ಚರ್ಚೆಯಾಗಿತ್ತು. ಗೃಹ ಸಚಿವ ಜಿ.ಪರಮೇಶ್ವರ ಅವರು ಕಾರಾಗೃಹ ಹಾಗೂ ಸುಧಾರಣೆಗಳ ಇಲಾಖೆ ಹಾಗೂ ಪೊಲೀಸರ ಸಭೆ ನಡೆಸಿದ್ದರು. ಸಭೆಯ ಬಳಿಕ ಜೈಲುಗಳಲ್ಲಿ ವ್ಯವಸ್ಥೆಯ ಸುಧಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶಿಸಿದ್ದರು. ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದರು.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಅವರನ್ನು ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು. ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ, ಎಸ್‌ಪಿಗಳಾದ ಅಮರನಾಥ್ ರೆಡ್ಡಿ, ರಿಷ್ಯಾಂತ್ ಅವರನ್ನು ಒಳಗೊಂಡ ಅಧಿಕಾರಿಗಳು ಹಾಗೂ ರಾಜ್ಯದ ವಿವಿಧ ಜೈಲುಗಳ ತನಿಖೆ ನಡೆಸಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳನ್ನು ಸಮಿತಿಯ ಸಹ ಸದಸ್ಯರನ್ನಾಗಿ ನೇಮಿಸಲಾಗಿತ್ತು.

ಸಮಿತಿಯು ತಿಹಾರ್ ಜೈಲಿಗೆ ಭೇಟಿ ನೀಡಿ, ಅಲ್ಲಿನ ಅಧಿಕಾರಿಗಳ ಜತೆಗೆ ಚರ್ಚಿಸಿ ಕೈದಿಗಳಿಗೆ ನೀಡಿರುವ ಸೌಲಭ್ಯಗಳು ಹಾಗೂ ಸುಧಾರಣಾತ್ಮಕ ಅಂಶಗಳ ಬಗ್ಗೆ ಅಧ್ಯಯನ ನಡೆಸಿದೆ. ಜೈಲಿನ ಕೈಪಿಡಿ ಪ್ರಕಾರ ಕೈದಿಗಳಿಗೆ ಯಾವೆಲ್ಲಾ ಸೌಲಭ್ಯ ನೀಡಲಾಗುತ್ತಿದೆ? ಜೈಲಿನ ಆಡಳಿತ ಜಾರಿಗೆ ತಂದಿರುವ ಅಂಶಗಳ ಬಗ್ಗೆ, ಬಂದಿಗಳಿಗೆ ರೂಪಿಸಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದಿದೆ.

ರಾಜ್ಯದಲ್ಲಿರುವ ಇತರೆ ಕೇಂದ್ರ ಕಾರಾಗೃಹಗಳು ಹಾಗೂ ಜಿಲ್ಲಾ ಕಾರಾಗೃಹಗಳಿಗೂ ಈ ಸಮಿತಿ ಭೇಟಿ ನೀಡಿ ಅಧ್ಯಯನ ನಡೆಸಿ, ಮಾಹಿತಿ ಸಂಗ್ರಹಿಸಿದೆ. ಪರಪ್ಪನ ಅಗ್ರಹಾರದ ಜೈಲಿಗೂ ಸಮಿತಿ ಭೇಟಿ ನೀಡಿ, ಅಧಿಕಾರಿಗಳು ಮತ್ತು ಸಿಬ್ಬಂದಿಯ ಹೇಳಿಕೆ ದಾಖಲಿಸಿಕೊಂಡಿದೆ.

ಕೈದಿಗಳ ವಿಡಿಯೊ ಬಗ್ಗೆ ಪ್ರಾಥಮಿಕ ತನಿಖೆ ವರದಿಯನ್ನಾಧರಿಸಿ, ಪರಪ್ಪನ ಅಗ್ರಹಾರ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾಯಿಸಿ, ಜೈಲಿನ ಸೂಪರಿಂಟೆಂಡೆಂಟ್ ಇಮಾಮ್‌ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಲಾಗಿತ್ತು. ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ಶು ಕುಮಾರ್ ಅವರನ್ನು ನಿಯೋಜಿಸಿತ್ತು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಪೊಲೀಸ್ ಅಧೀಕ್ಷಕರು, ಮುಖ್ಯ ಅಧೀಕ್ಷಕರ ಕಚೇರಿ ಹಾಗೂ ಕಾರಾಗೃಹ ಅಧಿಕಾರಿಗಳು ಇತ್ತೀಚೆಗೆ ನಡೆಸಿದ ದೀಢಿರ್ ದಾಳಿಯ ವೇಳೆ 73 ಮೊಬೈಲ್‌ಗಳು, ಚಾರ್ಜರ್, ಸಿಮ್‌ಕಾರ್ಡ್ ಹಾಗೂ ನಗದು ವಶಪಡಿಸಿಕೊಂಡಿದ್ದರು. ಈ ಸಂಬಂಧ ಏಳು ಎಫ್‌ಐಆರ್ ದಾಖಲಿಸಲಾಗಿದೆ.

ರಾತ್ರಿ ಮನೆ ಬಳಿ ಬಂದ ಕಾಡಾನೆ!

ಆನೇಕಲ್: ಬನ್ನೇರುಘಟ್ಟ ಸಮೀಪದ ಕಾಡಂಚಿನ ಗ್ರಾಮದಲ್ಲಿ ನಾಲ್ಕೈದು ದಿನಗಳಿಂದ ಕಾಡಾನೆಗಳು ಓಡಾಟ ನಡೆಸಿದ್ದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಬನ್ನೇರುಘಟ್ಟ ಸಮೀಪದ ಬ್ಯಾಲದಮರದೊಡ್ಡಿ ಬಳಿ ಎರಡು ಕಾಡಾನೆಗಳು ನಾಲ್ಕೈದು ದಿನಗಳಿಂದ ನಿರಂತರವಾಗಿ ಓಡಾಟ ನಡೆಸಿವೆ. ಗ್ರಾಮದ ಕೃಷ್ಣ ಎಂಬುವರ ಮನೆ ಬಳಿ ಕಾಡಾನೆಗಳು ಓಡಾಟ ನಡೆಸಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಾಡಾನೆಗಳ ಓಡಾಟದಿಂದಾಗಿ ರೈತರಲ್ಲಿ ಆತಂಕ ಮೂಡಿದ್ದು,ಬೆಳೆಹಾನಿಯ ಜೊತೆಗೆ ಜೀವವನ್ನು ಕಾಪಾಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕಾಡಾನೆಗಳನ್ನು ನಿಯಂತ್ರಣ ಮಾಡಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು. ಕಾಡಾನೆಗಳು ನಾಡಿನತ್ತ ಬರುವುದನ್ನು ಕಡಿಮೆ ಮಾಡಬೇಕು ಎಂಬುದು ರೈತರು ಒತ್ತಾಯಿಸಿದ್ದಾರೆ.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

‘ರಸ್ತೆ ಗುಂಡಿ ಮುಚ್ಚಿ’



ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಕೊಟ್ಟಿಗೆಪಾಳ್ಯ ವಾರ್ಡ್ ಸಂಖ್ಯೆ 73ರ ಒಂಬತ್ತನೇಯ ಬ್ಲಾಕ್‌ಗೆ ಸಂಪರ್ಕಿಸುವ ರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದಿದೆ. ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಈ ಗುಂಡಿಯಲ್ಲಿ ಕಟ್ಟಿಗೆ, ಕಸ ಹಾಕಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಗುಂಡಿ ಮುಚ್ಚುವಂತೆ ಮನವಿ ಮಾಡಿದರೂ ಪಾಲಿಕೆಯ ಅಧಿಕಾರಿಗಳು ಸ್ಪಂದಿಸುತ್ತಿಲ್ಲ.

ರಾಮಣ್ಣ, ಕೊಟ್ಟಿಗೆಪಾಳ್ಯ

‘ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ’



ವಿದ್ಯಾರಣ್ಯಪುರದ ದೊಡ್ಡ ಬೊಮ್ಮಸಂದ್ರದ ಬಳಿ ಇರುವ ಭೀಮನಕಟ್ಟೆ ರಾಘವೇಂದ್ರ ಸ್ವಾಮಿ ಮಠದ ಹತ್ತಿರ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ವೃದ್ಧರು, ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ ಮಾಡುತ್ತಿವೆ. ಮಕ್ಕಳು, ವೃದ್ಧರು ಈ ಬೀದಿಯಲ್ಲಿ ಓಡಾಡಲು ಹೆದರುತ್ತಿದ್ದಾರೆ. ಈ ಬಗ್ಗೆ ದೂರು ನೀಡಿದರೂ ಪ್ರಯೋಜನವಾಗುತ್ತಿಲ್ಲ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಕೂಡಲೇ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಬೇಕು.

ಪುರೋಹಿತ್ ಮುರಳಿ, ದೊಡ್ಡಬೊಮ್ಮಸಂದ್ರ

‘ಕಸ ವಿಲೇವಾರಿ ಮಾಡಿ’



ಬಸವನಗುಡಿ ವಿಧಾನಸಭಾ ಕ್ಷೇತ್ರದ ವಿದ್ಯಾಪೀಠ ವಾರ್ಡ್ ಸಂಖ್ಯೆ 106ರ ಮಂಜುನಾಥ ಕಾಲೊನಿಯಲ್ಲಿ ಮನೆಯ ಹಿಂಭಾಗದಲ್ಲಿ ಕಸದ ರಾಶಿ ಹಾಕಲಾಗುತ್ತಿದೆ. ಇಲ್ಲಿ ಹಾಕಿರುವ ಕಸ ವಿಲೇವಾರಿ ಮಾಡಲು ಪಾಲಿಕೆ ಸಿಬ್ಬಂದಿ ಬರುತ್ತಿಲ್ಲ. ಪಾಲಿಕೆಯ ಮಾರ್ಷಲ್‌ಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ. ಮನೆಯ ಹಿಂಭಾಗದಲ್ಲಿ ಕಸ ಹಾಕುತ್ತಿರುವ ಕಾರಣ ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಸದ ರಾಶಿ ವಿಲೇವಾರಿ ಮಾಡಬೇಕು.

ಮಂಜುನಾಥ ಕಾಲೊನಿ ನಿವಾಸಿಗಳು



‘ಬಿಎಂಟಿಸಿ ಬಸ್ ವ್ಯವಸ್ಥೆ ಕಲ್ಪಿಸಿ’

ರಂಗ ಜಂಗಮ, ನಾಲ್ಕು ಕಂಬ ಕ್ರಾಸ್, ದೇವಗಿರಿ ಕ್ರಾಸ್ ಕಡೆಯಿಂದ ಕುಂಬಳಗೋಡಿಗೆ ತೆರಳಲು ಸರಿಯಾದ ಬಿಎಂಟಿಸಿ ಬಸ್‌ಗಳ ವ್ಯವಸ್ಥೆ ಇಲ್ಲ. ಈ ಭಾಗದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಿದ್ದು, ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿದೆ. ಕಾರ್ಖಾನೆಗೆ ತೆರಳುವ ನೌಕರರು ಸಮಸ್ಯೆ ಎದುರಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು.

ಆರ್. ಶಂಕರಮಣಿ, ಜ್ಯೋತಿಲಕ್ಷ್ಮಿ, ವರುಣ, ಪ್ರಯಾಣಿಕರು

‘ಒಳಚರಂಡಿ ಕಾಮಗಾರಿಗೆ ವೇಗ ನೀಡಿ’



ಕಮ್ಮನಹಳ್ಳಿ ವಾರ್ಡ್ ಸಂಖ್ಯೆ 28ರಲ್ಲಿ ಜಲಮಂಡಳಿಯಿಂದ ಸುಬ್ಬಯ್ಯನಪಾಳ್ಯದ ಅರಳಿಮರ ರಸ್ತೆಯ ಏಳನೇ ಅಡ್ಡರಸ್ತೆಯಿಂದ ಜೈಲಕ್ಷ್ಮಿ ಶಾಲೆ ರಸ್ತೆ ಹಾಗೂ ರಾಮಸ್ವಾಮಿಪಾಳ್ಯದ ಗ್ರಾಮಕ್ಕೆ ಸಂಪರ್ಕಿಸುವ ಒಳಚರಂಡಿ ಕಾಮಗಾರಿ ಪ್ರಾರಂಭಿಸಿ ಆರು ತಿಂಗಳು ಆಗಿದೆ. ಕಾಮಗಾರಿ ನಿಧಾನಗತಿಯಲ್ಲಿ ಸಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಕಾಮಗಾರಿಯ ವೇಗ ಹೆಚ್ಚಿಸುವಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಕಲೈವಣ್ಣನ್, ರಾಮಸ್ವಾಮಿಪಾಳ್ಯ

ಚಿಟಿಕೆ ಸುದ್ದಿ

ಗೂಡ್ಸ್ ವಾಹನ ಡಿಕ್ಕಿ: ಉದ್ಯೋಗಿ ಸಾವು

ಬೆಂಗಳೂರು: ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಹಳೆ ಮದ್ರಾಸ್ ರಸ್ತೆ ಬಳಿ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಮೃತಪಟ್ಟ ಘಟನೆ ಭಾನುವಾರ ಸಂಭವಿಸಿದೆ.

ಗಾಯತ್ರಿ ಲೇಔಟ್‌ನ 2ನೇ ಮುಖ್ಯರಸ್ತೆಯ ನಿವಾಸಿ, ಖಾಸಗಿ ಸಂಸ್ಥೆಯ ಉದ್ಯೋಗಿ ಕಿರಣ್ (38) ಮೃತ ವ್ಯಕ್ತಿ.

ಕಿರಣ್ ಅವರು ಬೈಕ್‌ನಲ್ಲಿ ಶನಿವಾರ ರಾತ್ರಿ 12.30ರ ವೇಳೆಗೆ ಮನೆಗೆ ತೆರಳುತ್ತಿದ್ದಾಗ, ಹೊಸಕೋಟೆಯಿಂದ ಕೆ.ಆರ್. ಪುರ ಕಡೆಗೆ ತೆರಳುತ್ತಿದ್ದ ಗೂಡ್ಸ್ ವಾಹನ, ಹಿಂದಿನಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ.

ಘಟನೆಯಲ್ಲಿ ಕಿರಣ್ ಅವರ ತಲೆಗೆ ತೀವ್ರ ಗಾಯಗಳಾಗಿದ್ದು, ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ವಾಹನದ ಚಾಲಕ ದಾವಣಗೆರೆಯ ವಿಜಯ್ ಎಂಬಾತನನ್ನು ಬಂಧಿಸಿ, ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕಲಿ ಪಿಎಸ್ಐ ಸೇರಿ ನಾಲ್ವರ ಸೆರೆ

ಪೊಲೀಸ್ ಸಮವಸ್ತ್ರದಲ್ಲಿ ಹಣ ಸುಲಿಗೆ

• ₹45 ಸಾವಿರ ನಗದು, ವಾಹನಗಳ ವಶ

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ್


ಪ್ರಮೋದ್


ವಿನಯ್


ಋತ್ವಿಕ್

ಬೆಂಗಳೂರು: ಪೊಲೀಸ್ ಸಮವಸ್ತ್ರ ಧರಿಸಿ ಮನೆಗೆ ಹೋಗಿ ಯುವಕನನ್ನು ಬೆದರಿಸಿ ಹಣ ಸುಲಿಗೆ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ನಕಲಿ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್ಐ) ಸೇರಿ ನಾಲ್ಕು ಆರೋಪಿಗಳನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮತ್ತೀಕೆರೆಯ ಮಲ್ಲಿಕಾರ್ಜುನ್, ಸ್ನೇಹಿತರಾದ ಪ್ರಮೋದ್, ವಿನಯ್ ಮತ್ತು ಬಾಗಲಗುಂಟೆ ನಿವಾಸಿ ಋತ್ವಿಕ್ ಎಂಬುವರನ್ನು ಬಂಧಿಸಿ, ₹45 ಸಾವಿರ ನಗದು, ಕೃತ್ಯಕ್ಕೆ ಬಳಸಿದ್ದ ಕಾರು ಮತ್ತು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಋತ್ವಿಕ್ ಹಾಗೂ ದೂರುದಾರ ನವೀನ್ ಸ್ನೇಹಿತರು. ವಿದ್ಯಾರಣ್ಯಪುರದ ಬಳಿಯ ನರಸೀಪುರ ಲೇಔಟ್ ನಿವಾಸಿ ನವೀನ್ ಬಳಿ ಹಣ ಹಾಗೂ ಚಿನ್ನಾಭರಣ ಇರುವುದನ್ನು ತಿಳಿದಿದ್ದ ಋತ್ವಿಕ್, ಇತರೆ ಆರೋಪಿಗಳ ಜತೆ ಸೇರಿ ಸುಲಿಗೆಯ ಸಂಚು ರೂಪಿಸಿದ್ದ. ಆರೋಪಿಗಳು ಡಿಸೆಂಬರ್ 7ರ ರಾತ್ರಿ ನರಸೀಪುರ ಲೇಔಟ್‌ನಲ್ಲಿನ ನವೀನ್ ಅವರ ಮನೆಗೆ ಹೋಗಿ, ತಾವು ಕ್ರೈಂ ಪೊಲೀಸರೆಂದು ಪರಿಚಯಿಸಿಕೊಂಡು, 'ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದೀಯಾ ಮತ್ತು ಗಾಂಜಾ ಮಾರಾಟ ಮಾಡುತ್ತಿದ್ದೀಯಾ ಎಂಬ ಮಾಹಿತಿಯಿದೆ. ಮನೆಯನ್ನು ಶೋಧ ಮಾಡಬೇಕು' ಎಂದು ನವೀನ್‌ಗೆ ಹೆದರಿಸಿ, ಮನೆ ಶೋಧ ನಡೆಸಿದ್ದರು.

ಅಪರಾಧ ಸುದ್ದಿ

ಅಲ್ಲದೆ, ಲಾಠಿ ಮತ್ತು ಕಬ್ಬಿಣದ ಸಲಾಕೆಯಿಂದ ನವೀನ್‌ಗೆ ಥಳಿಸಿದ್ದರು. ನಂತರ, ಬಂಧಿಸದಿರಲು ಹಣ ಕೊಡಬೇಕೆಂದು ಹೆದರಿಸಿ ಅಲ್ಮೇರಾದಲ್ಲಿದ್ದ ₹53 ಸಾವಿರ ಮತ್ತು ಪರ್ಸ್‌ನಲ್ಲಿದ್ದ ₹2 ಸಾವಿರ ನಗದು ಕಿತ್ತುಕೊಂಡಿದ್ದರು. ನವೀನ್ ಬ್ಯಾಂಕ್ ಖಾತೆಯಲ್ಲಿದ್ದ ₹87 ಸಾವಿರ ಅನ್ನು ಯುಪಿಐ ಮೂಲಕ ತಮ್ಮ ಖಾತೆಗೆ ವರ್ಗಾಯಿಸಿಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳು ಪ್ರಮೋದ್‌ನ ಬ್ಯಾಂಕ್ ಖಾತೆಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆಗೆ ಫೋನ್ ಪೇ ಮೂಲಕ ನವೀನ್‌ರಿಂದ ಹಣ ಹಾಕಿಸಿಕೊಂಡಿದ್ದರು. ಮೊಬೈಲ್ ಸಂಖ್ಯೆ ಜಾಡು ಹಿಡಿದು ತನಿಖೆ ಮಾಡಿದಾಗ ಆರೋಪಿ ಸಿಕ್ಕಿಬಿದ್ದ. ಆತನನ್ನು ವಶಕ್ಕೆ ತೆಗೆದು ಕೊಂಡು ವಿಚಾರಣೆ ನಡೆಸಿದಾಗ, ಇತರೆ ಆರೋಪಿಗಳ ಸುಳಿವು ಸಿಕ್ಕಿತು ಎಂದು ಪೊಲೀಸರು ತಿಳಿಸಿದರು.

ಪಿಎಸ್ಐ ಪರೀಕ್ಷೆಯಲ್ಲಿ ಫೇಲ್

ಬಳ್ಳಾರಿ ಜಿಲ್ಲೆಯ ಸಿರುಗುಪ್ಪದ ಮಲ್ಲಿಕಾರ್ಜುನ್ ಬಿ.ಎ. ಪದವೀಧರ. ಪಿಎಸ್ಐ ಹುದ್ದೆಯ ಆಕಾಂಕ್ಷಿಯಾಗಿದ್ದ. ಎರಡು ಬಾರಿ ಪರೀಕ್ಷೆ ಬರೆದರೂ ಉತ್ತೀರ್ಣರಾಗಿರಲಿಲ್ಲ. ಆದರೂ ತಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಬೆಂಗಳೂರಿನಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ಊರಿನವರಿಗೆ ಹೇಳಿದ್ದ.

ಸಬ್‌ಇನ್‌ಸ್ಪೆಕ್ಟರ್ ಸಮವಸ್ತ್ರ ಧರಿಸಿ ಜನರನ್ನು ಬೆದರಿಸಿ ಸುಲಿಗೆ ಮಾಡಲು ನಿರ್ಧರಿಸಿದ್ದ ಮಲ್ಲಿಕಾರ್ಜುನ್, ಅದಕ್ಕೆ ತಕ್ಕಂತೆ ಶೂ, ಬೆಲ್ಟ್ ಖರೀದಿಸಿದ್ದ. ಜತೆಗೆ, ಕಾಮಾಕ್ಷಿಪಾಳ್ಯದ ಟೇಲರ್ ಬಳಿ ಸಮವಸ್ತ್ರ ಹೊಲೆಸಿದ್ದ. ಪಿಎಸ್ಐ ನಂತೆ ಸಮವಸ್ತ್ರ, ಬೆಲ್ಟ್, ಶೂ ಧರಿಸಿ ಲಾಠಿ ಹಿಡಿದು ಫೋಟೊ ಶೂಟ್ ಮಾಡಿಸಿದ್ದ ಎಂದು ಪೊಲೀಸರು ತಿಳಿಸಿದರು. ಆರೋಪಿಗಳು ಹಣ ಸಂಪಾದನೆಗಾಗಿ ಸುಲಿಗೆಗೆ ಇಳಿದಿದ್ದರು. ತುಮಕೂರು ರಸ್ತೆಯ ಔಷಧ ಉತ್ಪಾದನಾ ಕಂಪನಿಯಲ್ಲಿ ಕೆಲಸಕ್ಕಿದ್ದ ಮಲ್ಲಿಕಾರ್ಜುನ್, ಮತ್ತಿಕೆರೆಯಲ್ಲಿ ವಾಸವಾಗಿದ್ದ. ಪ್ರಮೋದ್ ಮತ್ತು ಋತ್ವಿಕ್, ಆಟೊ ಚಾಲಕರು. ವಿನಯ್, ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿದ್ದ ಎಂದು ಹೇಳಿದ್ದಾರೆ.

ಅನಿಲ ಸೋರಿಕೆ: ಇಬ್ಬರಿಗೆ ಗಾಯ

ಬೆಂಗಳೂರು: ಸಂಪಂಗಿರಾಮ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಮುಂಜಾನೆ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಅಪ್ಪ, ಮಗ ಗಂಭೀರವಾಗಿ ಗಾಯಗೊಂಡಿದ್ದಾರೆ.

ಎಸ್.ಆರ್.ನಗರದ ಕರಗಪ್ಪ ಲೇಔಟ್ ನಿವಾಸಿ ವೆಂಕಟೇಶಪ್ಪ (60), ರಾಕೇಶ್ (24) ಗಾಯಗೊಂಡವರು. ಶೇಕಡ 35 ರಷ್ಟು ಗಾಯಗೊಂಡಿರುವ ಇಬ್ಬರೂ, ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯಗಳ ವಿಭಾಗದ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ವೆಂಕಟೇಶಪ್ಪ, ಮನೆ ಮುಂದೆಯೇ ಹೋಟೆಲ್ ನಡೆಸುತ್ತಿದ್ದರು. ಶನಿವಾರ ಹೋಟೆಲ್ ಬಂದ್ ಮಾಡಿ ತಡರಾತ್ರಿ ಮನೆಗೆ ಬಂದು ಮಲಗಿದ್ದರು. ಮುಂಜಾನೆ 2 ಗಂಟೆ ಸುಮಾರಿಗೆ ದೀಪದ ಸ್ವಿಚ್ ಆನ್ ಮಾಡುತ್ತಿದ್ದಂತೆ ಏಕಾಏಕಿ ಬೆಂಕಿ ಹೊತ್ತಿಕೊಂಡಿದೆ. ಇಬ್ಬರಿಗೂ ಸುಟ್ಟಗಾಯಗಳಾಗಿದ್ದು, ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಸಂಪಂಗಿರಾಮ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಅಪಘಾತ: ಯುವಕ ಸಾವು

ದಾಬಸ್ ಪೇಟೆ: ಮಧುಗಿರಿ ರಸ್ತೆಯ ನರಸೀಪುರ ತೋಪಿನ ಬಳಿ ಸಾರಿಗೆ ಸಂಸ್ಥೆ ಬಸ್ ಮತ್ತು ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿ ಯುವಕ ಮೃತಪಟ್ಟಿದ್ದಾನೆ.

ದೀಕ್ಷಿತ್ ಶೆಟ್ಟಿ (21) ಮೃತ ಯುವಕ. ಬೈಂದೂರಿನ ದೀಕ್ಷಿತ್, ಮತ್ತಿಕೆರೆಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಸಿ.ಎ ವ್ಯಾಸಂಗ ಮಾಡುತ್ತಿದ್ದರು. ಸ್ನೇಹಿತ ರೊಂದಿಗೆ ದೇವರಾಯನ ದುರ್ಗ ಬೆಟ್ಟಕ್ಕೆ ಬೈಕ್‌ನಲ್ಲಿ ಹೋಗುವಾಗ ಈ ಘಟನೆ ನಡೆದಿದೆ. ದಾಬಸ್ ಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂದ್ದಾರೆ.

ಗುತ್ತಿಗೆದಾರ ಬಂಧನ: ₹4 ಲಕ್ಷ ನಗದು ಜಪ್ತಿ

ಬೆಂಗಳೂರು: ಚಿನ್ನಾಭರಣ ಮಳಿಗೆಯ ಉದ್ಯೋಗಿಗಳ ಮೇಲೆ ಹಲ್ಲೆ ನಡೆಸಿ ₹6.50 ಲಕ್ಷ ದರೋಡೆ ಮಾಡಿದ್ದ ಪ್ರಕರಣ ಸಂಬಂಧ ಆರೋಪಿಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೊರಮಾವು ನಿವಾಸಿ, ಬೆಸ್ಕಾಂ ಗುತ್ತಿಗೆದಾರ ನಾರಾಯಣಮೂರ್ತಿ (40) ಎಂಬುವವರನ್ನು ಬಂಧಿಸಿ, ₹ 4 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ಮುಂದುವರಿದಿದೆ. ಆರೋಪಿ ತನ್ನ ಸಹಚರರ ಜತೆ ಸೇರಿ ಮೈಸೂರಿನ ಡಿಜಿಎಫ್ ಚಿನ್ನಾಭರಣ ಮಳಿಗೆಯ ಕೆಲಸಗಾರರ ಮೇಲೆ ಹಲ್ಲೆ ನಡೆಸಿ ಹಣ ದೋಚಿದ್ದ ಎಂದು ಪೊಲೀಸರು ಹೇಳಿದ್ದಾರೆ. ಆಗಸ್ಟ್‌ನಲ್ಲಿ ನಾರಾಯಣ ಮೂರ್ತಿ, ಡಿಜಿಎಫ್ ಮಳಿಗೆಗೆ ಆಭರಣಗಳನ್ನು ಮಾರಾಟ ಮಾಡಿದ್ದ. ಮಳಿಗೆಯವರು ಆಭರಣಗಳ ತೂಕ ಮತ್ತು ಖರೀದಿಯಲ್ಲಿ ಮೋಸ ಮಾಡಿದ್ದಾರೆ ಎಂದು ನಾರಾಯಣ ಮೂರ್ತಿ ಅಸಮಾಧಾನಗೊಂಡಿದ್ದ. ಅಲ್ಲದೆ, ಈ ವಿಚಾರವಾಗಿ ಡಿಜಿಎಫ್ ಮಳಿಗೆಗೆ ಹೋಗಿ ಜಗಳವಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಸೇಡು ತೀರಿಸಿಕೊಳ್ಳಲು ದರೋಡೆ ಸಂಚು ರೂಪಿಸಿದ್ದ ಆರೋಪಿ, ಮಳಿಗೆಯವರಿಗೆ ಕರೆ ಮಾಡಿ, ತನ್ನ ಬಳಿ ಮತ್ತಷ್ಟು ಆಭರಣಗಳಿವೆ. ಮಾರಾಟ ಮಾಡುತ್ತೇನೆ ಎಂದು ಸುಳ್ಳು ಹೇಳಿದ್ದ. ಇದನ್ನು ನಂಬಿದ ಮಳಿಗೆಯವರು ಆತನಿಂದ ಚಿನ್ನಾಭರಣ ಖರೀದಿಸಿಕೊಂಡು ಬರುವಂತೆ ಯೋಗೇಶ್ ಮತ್ತು ರಾಮಲಿಂಗ ಎಂಬ ಕೆಲಸಗಾರರನ್ನು ₹6.50 ಲಕ್ಷ ಹಣದೊಂದಿಗೆ ಡಿ. 9ರಂದು ಬೆಂಗಳೂರಿಗೆ ಕಳುಹಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ

ಯೋಗೇಶ್ ಮತ್ತು ರಾಮಲಿಂಗ, ಹೆಣ್ಣೂರು ಬಂಡೆಯ ಬಳಿ ನಾರಾಯಣಮೂರ್ತಿಯನ್ನು ಭೇಟಿಯಾಗಿದ್ದರು. ಆಗ ನಾರಾಯಣಮೂರ್ತಿ ಆಭರಣಗಳನ್ನು ಕೊಡದೆ ತಗಾದೆ ತೆಗೆದಿದ್ದ. ಹೀಗಾಗಿ, ಯೋಗೇಶ್ ಮತ್ತು ರಾಮಲಿಂಗ ಹಣದೊಂದಿಗೆ ಆಟೊದಲ್ಲಿ ವಾಪಸ್ ಹೊರಟಿದ್ದರು. ನಂತರ ನಾರಾಯಣಮೂರ್ತಿ, ಆತನ ಸಹಚರ ವಿನೋದ್ ಹಾಗೂ ಮತ್ತೊಬ್ಬ ಆರೋಪಿಯು ಬೈಕ್‌ನಲ್ಲಿ ಹಿಂಬಾಲಿಸಿ, ಹಲ್ಲೆ ನಡೆಸಿ, ಹಣ ದೋಚಿ ಪರಾರಿಯಾಗಿದ್ದರು.


ನಗರದ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ ಆಯೋಜಿಸಿದ್ದ 18ನೇ ವಾರ್ಷಿಕ ಅಜಿತ್‌ಕುಮಾರ್ ಸ್ಮಾರಕ 'ಅಜಿತಶ್ರೀ', 'ನಾಟ್ಯಶ್ರೀ', 'ಯೋಗಶ್ರೀ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಎಂ.ಎಸ್. ಶ್ಯಾಮಸುಂದರ್, ಬಾ.ಸು. ಅರವಿಂದ, ಎಚ್.ಎಸ್. ವೇಣುಗೋಪಾಲ್ ಅವರಿಗೆ ('ನಾಟ್ಯಶ್ರೀ' ಪ್ರಶಸ್ತಿ), ಗಣಪತಿ ಭಟ್ ಹಾಸಣಗಿ ಅವರಿಗೆ ('ಅಜಿತಶ್ರೀ' ಪ್ರಶಸ್ತಿ), ಪೂರ್ಣಿಮಾ ಕೆ. ಗುರುರಾಜ ಅವರಿಗೆ ('ನಾಟ್ಯಶ್ರೀ' ಪ್ರಶಸ್ತಿ), ಪದ್ಮಿನಿ ರವಿ ಮತ್ತು ಬಿ. ಜಯಶ್ರೀ ಅವರಿಗೆ 'ಅಜಿತಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯಮಂತ್ರಿ ಚಂದ್ರು, ಸುಧೀರ, ಶ್ರೀರಾಮಕೃಷ್ಣ, ಆರ್. ಮಾಧವ, ಕೆ. ಎಸ್. ನಾಗಶ್ರೀ, ಕೆ. ಆರ್. ಮುರಳೀಧರ, ಕೆ. ಆರ್. ಶ್ರೀನಿವಾಸ, ಬಿ.ವಿ.ರಾಜಾರಾಂ ಮತ್ತು ಜಿ. ಎಲ್. ವಿಶ್ವನಾಥ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕುಡಿದ ಮತ್ತಿನಲ್ಲಿ ಬಸ್ ಕದ್ದರು!

ಪ್ರಜಾವಾಣಿ ವಾರ್ತೆ

ಆನೇಕಲ್: ಕುಡಿದ ಅಮಲಿನಲ್ಲಿದ್ದ ನಾಲ್ವರು ಶನಿವಾರ ತಡರಾತ್ರಿ ರಸ್ತೆ ಬಳಿ ನಿಲ್ಲಿಸಿದ್ದ ಖಾಸಗಿ ಬಸ್ ಕದ್ದು ಪರಾರಿಯಾಗಲು ಯತ್ನಿಸಿದ್ದಾರೆ. ನಿಯಂತ್ರಣ ತಪ್ಪಿದ ಬಸ್ ವಿದ್ಯುತ್ ಕಂಬ ಹಾಗೂ ಪಾದಚಾರಿಗೆ ಡಿಕ್ಕಿ ಹೊಡೆದಿದೆ. ಅಡ್ಡಾದಿಡ್ಡಿ ಚಲಿಸುತ್ತಿದ್ದ ಬಸ್ ತಡೆದ ಸಾರ್ವಜನಿಕರು ಮದ್ಯದ ಮತ್ತಿನಲ್ಲಿ ತೂರಾಡುತ್ತಿದ್ದ ಯುವಕನನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಆನೇಕಲ್‌ನ ಥಳಿ ರಸ್ತೆಯಲ್ಲಿ ಬಸ್ ಏರಿದ ಮದ್ಯದ ಮತ್ತಿನಲ್ಲಿದ್ದ ನಾಲ್ವರು ಯುವಕರು ಬಸ್ ಓಡಿಸಿಕೊಂಡು ಹೋಗಿದ್ದಾರೆ. ನಿಯಂತ್ರಣ ತಪ್ಪಿದ ಬಸ್ ರಸ್ತೆಯಲ್ಲಿ ಅಡ್ಡಾದಿಡ್ಡಿ ಚಲಿಸಿ ರಸ್ತೆ ಬದಿಯ ಎರಡು ವಿದ್ಯುತ್ ಕಂಬಗಳಿಗೆ ಗುದ್ದಿದೆ. ಅದಕ್ಕೂ ಮುನ್ನ ಥಳಿ ರಸ್ತೆಯಲ್ಲಿ ನಡೆದು ಹೊರಟಿದ್ದ ಪಾದಚಾರಿಗೆ ಗುದ್ದಿ ಆತನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಅಡ್ಡಾದಿಡ್ಡಿ ಚಲಿಸುತ್ತಿದ್ದ ಬಸ್ ಕಂಡ ಸಾರ್ವಜನಿಕರು ಅಡ್ಡಗಟ್ಟಿ ನಿಲ್ಲಿಸಿದ್ದಾರೆ. ಬಸ್‌ನಲ್ಲಿದ್ದ ಮೂವರು ಪರಾರಿಯಾಗಿದ್ದಾರೆ. ಚಾಲನೆ ಮಡುತ್ತಿದ್ದ ಗುನ್ನಿ ಪಾಷಾ (26) ಎಂಬಾತನನ್ನು ಹಿಡಿದ ಸಾರ್ವಜನಿಕರು ಚೆನ್ನಾಗಿ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.


ನಜ್ಜುಗುಜ್ಜಾಗಿರುವ ಬಸ್

ತಡರಾತ್ರಿಯಾದ ಕಾರಣ ರಸ್ತೆಯಲ್ಲಿ ವಾಹನ ಹಾಗೂ ಜನಸಂಚಾರ ಕಡಿಮೆ ಇತ್ತು. ಹೀಗಾಗಿ ಭಾರಿ ಅನಾಹುತ ತಪ್ಪಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಆನೇಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಖಾಸಗಿ ಬಸ್ ಮಾಲೀಕರಾಗಲಿ ಇಲ್ಲವೇ ವಿದ್ಯುತ್ ಕಂಬ ಉರುಳಿ ಬಿದ್ದ ಕಾರಣ ಬೆಸ್ಕಾಂ ಅಧಿಕಾರಿಗಳು ದೂರು ನೀಡಿಲ್ಲ ಎಂದು ತಿಳಿದು ಬಂದಿದೆ.

ಕಾರು ಡಿಕ್ಕಿ: ಇಬ್ಬರು ಮಹಿಳೆಯರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ದಾಟುವ ವೇಳೆ ಕಾರು ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಮೃತಪಟ್ಟ ಘಟನೆ ನೈಸ್ ರಸ್ತೆಯಲ್ಲಿ ನಡೆದಿದೆ.

ಯಾದಗಿರಿಯವರಾದ ರಂಗಮ್ಮ (45), ಚೌಡಮ್ಮ (50) ಮೃತರು.

ಕೂಲಿ ಕಾರ್ಮಿಕರಾದ ಈ ಇಬ್ಬರೂ ರಾಜರಾಜೇಶ್ವರಿ ನಗರದಲ್ಲಿ ತಮ್ಮ ಕುಟುಂಬಗಳ ಜತೆ ವಾಸವಿದ್ದರು. ಏಜೆನ್ಸಿಯೊಂದರ ಮೂಲಕ ಹೊಸಕೆರೆಹಳ್ಳಿ ಟೋಲ್ ಸಮೀಪದ ನೈಸ್ ರಸ್ತೆಯಲ್ಲಿ ಮಣ್ಣು ತೆಗೆಯುವ ಕೆಲಸ ಮಾಡುತ್ತಿದ್ದರು. ಶುಕ್ರವಾರ ಕೆಲಸ ಮುಗಿಸಿ ರಸ್ತೆ ದಾಟುತ್ತಿದ್ದಾಗಲೇ ಮಾಗಡಿ ರಸ್ತೆ ಕಡೆ ತೆರಳುತ್ತಿದ್ದ ಕಾರೊಂದು ಇಬ್ಬರಿಗೂ ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಅಸು ನೀಗಿದರು ಎಂದು ಪೊಲೀಸರು ತಿಳಿಸಿದರು. ಕೆಂಗೇರಿ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ಪರಾರಿಯಾಗಿದ್ದ ಚಾಲಕ ಸತ್ಯನಾರಾಯಣ ಅವರನ್ನು ಬಂಧಿಸಿದ್ದಾರೆ.



ತರಗತಿಯಲ್ಲಿ ವಿದ್ಯಾರ್ಥಿಗಳು

ಕಲಿಕೆಗೆ ಸೇತುವಾದ 'ಕನೆಕ್ಟಿಂಗ್ ದಿ ಡಾಟ್ಸ್'



ಕರ್ನಾಟಕದ ಶಿಕ್ಷಣ ವ್ಯವಸ್ಥೆಗೆ ಹೋಲಿಸಿದರೆ ನಾವು ತಲುಪುತ್ತಿರುವ ಪ್ರಮಾಣ ಸಣ್ಣದು. ಆದರೆ, ಅದರ ಪರಿಣಾಮವು ಮಕ್ಕಳ ಮೇಲೆ ಆಗುತ್ತಿರುವುದನ್ನು ಹತ್ತಿರದಿಂದ ಕಂಡಿದ್ದೇವೆ. ಶಿಕ್ಷಣ ಸುಧಾರಣೆಯ ಈ ಕ್ರಮಕ್ಕೆ, ಇದೇ ದಿಸೆಯಲ್ಲಿ ಕೆಲಸ ಮಾಡುವ ಸಂಸ್ಥೆಗಳು ಹಾಗೂ ಹಲವು ವ್ಯಕ್ತಿಗಳು ಜತೆಯಾಗಿದ್ದಾರೆ.

ರಾಜೇಶ್ ಎ. ರಾವ್
'ಕನೆಕ್ಟಿಂಗ್ ದಿ ಡಾಟ್ಸ್'
ಕಲಿಕಾ ಕಾರ್ಯಕ್ರಮದ ಸಂಸ್ಥಾಪಕ

• ಉಮೇಶ ಭಟ್ಟ ಪಿ.ಎಚ್.

ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಎಂದರೆ ಹೆಚ್ಚಿನ ವಿದ್ಯಾರ್ಥಿಗಳಿಗೆ ಭಯ. ಎಷ್ಟು ಕೇಳಿಸಿಕೊಂಡರೂ ಅರ್ಥವಾಗುವುದಿಲ್ಲ ಎಂಬ ಭಾವನೆ. ಇಂತಹ ಆತಂಕವನ್ನು ಹೋಗಲಾಡಿಸುವ ದಿಸೆಯಲ್ಲಿ ಶ್ರಮಿಸುತ್ತಿದೆ 'ಕನೆಕ್ಟಿಂಗ್ ದಿ ಡಾಟ್ಸ್' ಎಂಬ ಸಂವಾದಾತ್ಮಕ ಕಲಿಕಾ ಕಾರ್ಯಕ್ರಮ.

ಬದಲಾದ ಕಾಲಘಟ್ಟದಲ್ಲಿ ಸಾಂಪ್ರದಾಯಿಕ ವಿಧಾನದ ಕಲಿಕೆಯ ಜತೆಗೆ ತಂತ್ರಜ್ಞಾನ ಆಧಾರಿತ ಕಲಿಕೆಯೂ ಮುಖ್ಯವಾಗುತ್ತದೆ. ಇದಕ್ಕೆ ಪೂರಕವಾಗಿ, ಸರ್ಕಾರಿ ಶಾಲೆಗಳ 6ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ ವಿಜ್ಞಾನ, ಗಣಿತ ಹಾಗೂ ಇಂಗ್ಲಿಷ್ ಸಂವಹನವನ್ನು ಆನ್‌ಲೈನ್ ತರಗತಿಗಳ ಮೂಲಕ ಪ್ರಯೋಗಾಲಯ ಕಿಟ್‌ಗಳನ್ನು ಬಳಸಿ ಇಲ್ಲಿ ಹೇಳಿಕೊಡಲಾಗುತ್ತಿದೆ. ಕಲಿಕೆಯನ್ನು ಪರಿಣಾಮಕಾರಿಯಾಗಿಸುವ ಉದ್ದೇಶದಿಂದ ಶಿಕ್ಷಕರಿಗೂ ತರಬೇತಿ ನೀಡಲಾಗುತ್ತಿದೆ.

ಐಐಟಿ ಮದ್ರಾಸ್‌ನಲ್ಲಿ ಪದವಿ ಮುಗಿಸಿ, ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆದು, ಎರಡು ದಶಕಗಳ ಕಾಲ ಎಂಜಿನಿಯರ್ ಆಗಿ ಕೆಲಸ ಮಾಡಿದ್ದ ಬೆಂಗಳೂರಿನ ರಾಜೇಶ್ ಎ. ರಾವ್ ಅವರಿಗೆ ಶಿಕ್ಷಣ ವಲಯದಲ್ಲಿ ಹೊಸದೇನನ್ನಾದರೂ ಮಾಡಬೇಕೆಂಬ ಹುಮ್ಮಸ್ಸಿತ್ತು. ಅದಕ್ಕಾಗಿ ಅವರು ಸಮಾನಮನಸ್ಕರೊಂದಿಗೆ ಸೇರಿ ರೂಪಿಸಿದ್ದೇ ಈ ಕಲಿಕಾ ಕಾರ್ಯಕ್ರಮ.

ಆಸಕ್ತ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿನ ಮಕ್ಕಳಿಗೆ ನಿರಂತರವಾಗಿ ತರಗತಿಗಳನ್ನು ನಡೆಸುವುದು, ಪ್ರಯೋಗಗಳನ್ನು ಆಯೋಜಿಸುವುದು ಇದರಲ್ಲಿ ಸೇರಿವೆ. 2013ರಲ್ಲಿ ಬೆಂಗಳೂರಿನ ಆಯ್ದ ಶಾಲೆಗಳಲ್ಲಿ ತರಗತಿ ಶುರು ಮಾಡಲಾಯಿತು. ನೇರ ಪಾಠಕ್ಕಿಂತ, ಒಂದು ಕಡೆ ಕುಳಿತು ಹಲವು ಶಾಲೆ, ಮಕ್ಕಳನ್ನು ತಲುಪುವ ವ್ಯವಸ್ಥೆ ರೂಪುಗೊಂಡಿತು. ನಗರದ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಚೇರಿಯೇ ಮುಖ್ಯ ಪಾಠದ ಮನೆ. ಅದು ಸುಸಜ್ಜಿತ ಸ್ಟುಡಿಯೊ. ಎದುರಿಗೆ ಕ್ಯಾಮೆರಾ, ಹಿಂದೆ ದೊಡ್ಡ ಹಲಗೆ. ಶಿಕ್ಷಕರು ಅಲ್ಲಿಂದ ಲೈವ್ ತರಗತಿಗಳನ್ನು ಆರಂಭಿಸಿದರೆ, ರಾಜ್ಯದ 17 ಜಿಲ್ಲೆಗಳ ಸುಮಾರು 100 ಸರ್ಕಾರಿ ಶಾಲೆಗಳ ಮಕ್ಕಳಿಗೆ ಏಕಕಾಲದಲ್ಲಿ ಇದು ತಲುಪುತ್ತದೆ. ಬೆಳಿಗ್ಗೆ 10ಕ್ಕೆ ಶುರುವಾದರೆ ಸಂಜೆ 4ರವರೆಗೂ ಮುಂದುವರಿಯುತ್ತದೆ. ಸಂಜೆಯ ನಂತರ ಶಿಕ್ಷಕರಿಗೆ ತರಬೇತಿ ಇರುತ್ತದೆ.



ಪ್ರಯೋಗನಿರತ ವಿದ್ಯಾರ್ಥಿಗಳು

ರಾಜ್ಯ ಶಿಕ್ಷಣ ಇಲಾಖೆ ರೂಪಿಸಿರುವ ಪಠ್ಯ ಆಧರಿಸಿ, ತರಗತಿಗಳಿಗೆ ಪರಸ್ಪರ ಅಡ್ಡಿಯಾಗದಂತೆ ಐದು ದಿನಗಳಿಗೆ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಸಂವಾದದ ರೀತಿಯಲ್ಲಿ ಪಾಠ ಇರುವುದರಿಂದ ಮಕ್ಕಳು ಖುಷಿಯಿಂದ ಭಾಗಿಯಾಗುತ್ತಾರೆ. ರಸಪ್ರಶ್ನೆಯನ್ನು ಆಯೋಜಿಸಿ ಮಕ್ಕಳ ಜ್ಞಾನಾರ್ಜನೆಗೆ ಇಂಬು ನೀಡುವ ಪ್ರಯತ್ನವೂ ಆಗುತ್ತಿದೆ.

ಶಾಲೆಯಲ್ಲೇ ಸ್ಟುಡಿಯೊ: ಲೈವ್ ತರಗತಿಯಲ್ಲಿ ಪಾಲ್ಗೊಳ್ಳಲು ಬೇಕಾದ ಕ್ಯಾಮೆರಾ, ಉಪಕರಣಗಳು, ಇಂಟರ್‌ನೆಟ್ ಸಂಪರ್ಕ, ಯುಪಿಎಸ್ ಸಹಿತ ಅಗತ್ಯ ಪರಿಕರಗಳನ್ನು ಸುಮಾರು ₹ 1 ಲಕ್ಷ ವೆಚ್ಚದಲ್ಲಿ ಶಾಲೆಗೆ ಒದಗಿಸಲಾಗುತ್ತದೆ. ವಿಜ್ಞಾನ ಹಾಗೂ ಗಣಿತ ಪ್ರಯೋಗಗಳಿಗೆ ಬೇಕಾದ ಉಪಕರಣಗಳನ್ನೂ ನೀಡಲಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಒಲವಿರುವ ಕಾರ್ಪೊರೇಟ್ ಸಂಸ್ಥೆಗಳ 'ಸಾಮಾಜಿಕ ಹೊಣೆಗಾರಿಕೆ ನಿಧಿ' (ಸಿಎಸ್‌ಆರ್) ಬಳಸುವುದರಿಂದ ಶಾಲೆಗಳಿಗೆ ಇವೆಲ್ಲವೂ ಉಚಿತವಾಗಿ ದೊರೆಯುತ್ತವೆ. ಇದರೊಟ್ಟಿಗೆ ಅರ್ಹ ಮಕ್ಕಳಿಗೆ ವಿದ್ಯಾರ್ಥಿವೇತನ, ಕಲಿಕೆಗೆ ಬೇಕಾದ ಆರ್ಥಿಕ ನೆರವನ್ನೂ ಒದಗಿಸಲಾಗುತ್ತದೆ.

ತರಗತಿ, ಪ್ರಯೋಗಗಳು ಹಾಗೂ ಇತರ ಚಟುವಟಿಕೆಗಳನ್ನು ಚಿತ್ರೀಕರಿಸಿ, ಸಂಗ್ರಹಿಸಿ ಇಟ್ಟುಕೊಳ್ಳುವ ಮೂಲಕ, ಏನಾದರೂ ಅನುಮಾನ ಇದ್ದವರಿಗೆ, ಇಲ್ಲವೇ ಗೈರುಹಾಜರಾಗಿದ್ದ ಮಕ್ಕಳಿಗೆ ಬಳಸಲು ಅವಕಾಶ ಮಾಡಿಕೊಡಲಾಗುತ್ತದೆ. ಇದಕ್ಕಾಗಿಯೇ ಆ್ಯಪ್ ಒಂದನ್ನು ರೂಪಿಸಿದ್ದು, ಅಲ್ಲಿ ಎಲ್ಲವೂ ಲಭ್ಯವಿರುತ್ತವೆ. ಮಕ್ಕಳಿಗೆ ಕಿರು ಪರೀಕ್ಷೆಗಳನ್ನು ಆಯೋಜಿಸಲಾಗುತ್ತದೆ. ಉನ್ನತ ಶಿಕ್ಷಣ ಪಡೆಯಲು ಬೇಕಾದ ಮಾರ್ಗದರ್ಶನವನ್ನೂ ಪ್ರೌಢಶಾಲೆ ಹಂತದಲ್ಲಿ ನೀಡಲಾಗುತ್ತದೆ.

ವಿಜ್ಞಾನದ ಪ್ರಾಯೋಗಿಕ ತರಗತಿಗಳು ಮಕ್ಕಳ ಕುತೂಹಲ ತಣಿಸಿವೆ. ಅನುಮಾನಗಳನ್ನು ಬಗೆಹರಿಸಿವೆ. ವಿಜ್ಞಾನ, ಗಣಿತ ಎಂದರೆ ಕಬ್ಬಿಣದ ಕಡಲೆ ಎನ್ನುವ ಭಾವನೆಯನ್ನು ದೂರ ಮಾಡಿವೆ. ಫಲಿತಾಂಶವೂ ಸುಧಾರಣೆ ಕಂಡಿದೆ. 39 ಶಿಕ್ಷಕರು ಹಾಗೂ ತಜ್ಞರ ತಂಡವು ಈ ಚಟುವಟಿಕೆಯ ಬೆನ್ನೆಲುಬಾಗಿದೆ. ❖

ಜವಾಬ್ದಾರಿ ಹೆಚ್ಚಿಸಿದ ಪ್ರಶಸ್ತಿ

ಇನ್ಫೊಸಿಸ್ ಪ್ರತಿಷ್ಠಾನವು 'ಆರೋಹಣ ಸೋಷಿಯಲ್ ಇನೊವೇಷನ್' ಪ್ರಶಸ್ತಿಯನ್ನು ನೀಡುತ್ತದೆ. ವಿಭಿನ್ನ ಪರಿಕಲ್ಪನೆಯ ಮೂಲಕ ಸಮುದಾಯಗಳ ಬದುಕು ಉತ್ತಮಪಡಿಸುವ ಸಾಮಾಜಿಕ ಕಾರ್ಯ ಮಾಡುತ್ತಿರುವ ವ್ಯಕ್ತಿ ಹಾಗೂ ತಂಡವನ್ನು ಗುರುತಿಸಿ ಪ್ರಶಸ್ತಿ ಘೋಷಿಸಲಾಗುತ್ತದೆ.

2025ನೇ ಸಾಲಿನಲ್ಲಿ ಈ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದಾಗ, ದೇಶದ ನಾನಾ ಭಾಗಗಳಿಂದ 2 ಸಾವಿರ ಅರ್ಜಿಗಳು ಬಂದಿದ್ದವು. ಇದರಲ್ಲಿ ಕೊನೆಗೆ ಆಯ್ಕೆಯಾಗಿದ್ದು 'ಕನೆಕ್ಟಿಂಗ್ ದಿ ಡಾಟ್ಸ್' ಕಾರ್ಯಕ್ರಮ. ರಾಜೇಶ್ ರಾವ್, ರವೀಂದ್ರ ರಾವ್, ದೀಪಾ ರಾಜೀವ್ ಅವರ ತಂಡಕ್ಕೆ ₹ 10 ಲಕ್ಷ ನಗದು ಮೊತ್ತದ ಪ್ರಶಸ್ತಿ ಲಭ್ಯವಾಗಿರುವುದು ಇನ್ನಷ್ಟು ಉತ್ತೇಜನ ನೀಡಿದೆ.



ಎಂ.ಎಸ್. ಜಯಕರ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ

ಪ್ರದರ್ಶನ ಕಲೆ ಉನ್ನತ ಶಿಕ್ಷಣದ ನೆಲೆ

• ಖಲೀಲಅಹ್ಮದ ಶೇಖ

ಕಲಾ ಪ್ರಕಾರಗಳು ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿರದೆ, ಅಧ್ಯಯನ, ಸಂಶೋಧನೆ ಮತ್ತು ಶೈಕ್ಷಣಿಕವಾಗಿಯೂ ತೊಡಗಿಕೊಳ್ಳುವಂತೆ ಮಾಡುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ.

ಈ ವಿಭಾಗವನ್ನು 1973ರಲ್ಲಿ ಪ್ರಾರಂಭಿಸಲಾಗಿದೆ. ಸಂಗೀತ, ನೃತ್ಯ, ನಾಟಕ ಪ್ರಕಾರಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿಎಚ್.ಡಿ ಶಿಕ್ಷಣವನ್ನು ಇಲ್ಲಿ ನೀಡಲಾಗುತ್ತಿದೆ. ಸಾಂಪ್ರದಾಯಿಕ ಶಿಕ್ಷಣದ ರೀತಿಯಲ್ಲೇ ವಿದ್ಯಾರ್ಥಿಗಳು ಎರಡು ವರ್ಷದ ನಾಲ್ಕು ಸೆಮಿಸ್ಟರ್‌ಗಳಲ್ಲಿ 26 ವಿಷಯಗಳ ಕುರಿತು ಅಧ್ಯಯನ ನಡೆಸಿ ಸ್ನಾತಕೋತ್ತರ ಪದವಿ ಪಡೆದುಕೊಳ್ಳಬಹುದು.

ನೃತ್ಯ, ನಾಟಕ, ಸಂಗೀತದಲ್ಲಿ ಸ್ನಾತಕೋತ್ತರ ಪದವಿ ನೀಡುತ್ತಿರುವ ರಾಜ್ಯದ ಏಕೈಕ ಸರ್ಕಾರಿ ವಿಶ್ವವಿದ್ಯಾಲಯ

ಸಂಗೀತ ಮತ್ತು ನೃತ್ಯ ವಿಷಯಗಳಲ್ಲಿ ಕರ್ನಾಟಕ ಸಂಗೀತ ಹಾಗೂ ಭರತನಾಟ್ಯದ ವಿಸ್ತೃತ ಅಧ್ಯಯನಕ್ಕೆ ಅವಕಾಶವಿದೆ. ಇತಿಹಾಸ, ಸ್ವರ, ರಾಗ, ತಾಳ, ಗಮಕಗಳು, ವರ್ಣ, ಕೃತಿ, ಜಾವಳಿ, ತಿಲ್ಲಾನ, ಪದಗಳು, ಮನೋಧರ್ಮ, ರಾಗ ಪ್ರಕಾರಗಳು, ನೃತ್ಯ, ಅಭಿನಯ, ಅಷ್ಟಪದಿ, ತರಂಗದ ಕುರಿತು ವಿದ್ಯಾರ್ಥಿಗಳು ಅಧ್ಯಯನ ಮಾಡಬಹುದು.

ನಾಟಕ ವಿಷಯದಲ್ಲಿ ಕನ್ನಡ ರಂಗಭೂಮಿಯ ಇತಿಹಾಸ, ಜನಪದ ರಂಗಭೂಮಿ, ಪಾಶ್ಚಿಮಾತ್ಯ ರಂಗಭೂಮಿ, ರಂಗಭೂಮಿಯ ಪ್ರಕಾರಗಳು, ಅಭಿನಯ, ಧ್ವನಿ, ವಸ್ತ್ರವಿನ್ಯಾಸ, ಪ್ರಸರಣ, ಹಿನ್ನೆಲೆ ಸಂಗೀತ, ರಂಗಸಜ್ಜಿಕೆ, ನಾಟಕ ಕೃತಿಗಳ ಅಧ್ಯಯನವು ಪಠ್ಯದ ಭಾಗವಾಗಿವೆ.

'ಎಲ್ಲಾ ವಿದ್ಯಾರ್ಥಿಗಳಿಗೆ ತರಗತಿ ಶಿಕ್ಷಣದ ಜೊತೆಗೆ ಪ್ರಾಯೋಗಿಕವಾಗಿಯೂ ತರಬೇತಿ ನೀಡಲಾಗುತ್ತದೆ. ಉಪನ್ಯಾಸ ಮಾಲಿಕೆ, ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕೋರ್ಸ್ ಮುಗಿದ ಬಳಿಕ ರಂಗಪ್ರವೇಶ ಕಾರ್ಯಕ್ರಮವನ್ನು ವಿಭಾಗದ ವತಿಯಿಂದಲೇ ನಡೆಸಲಾಗುತ್ತದೆ. ಈ ಮೂಲಕ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ಮುಂದುವರಿಯಬಹುದು' ಎನ್ನುತ್ತಾರೆ ವಿಭಾಗದ ಮುಖ್ಯಸ್ಥೆ ಹಂಸಿಣಿ ನಾಗೇಂದ್ರ.

ಹೊಸ ತಂತ್ರಜ್ಞಾನಕ್ಕೆ ತಕ್ಕಂತೆ ಅಭಿವೃದ್ಧಿ



ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ ಹೊಸ ತಂತ್ರಜ್ಞಾನದ ಮೂಲಕ ಪ್ರದರ್ಶನ ಕಲಾ ವಿಭಾಗವನ್ನು ಅಭಿವೃದ್ಧಿಪಡಿಸಲಾಗಿದೆ. ಸ್ಮಾರ್ಟ್ ತರಗತಿಗಳು, ಬಯಲು ರಂಗಮಂದಿರ, ಸಭಾಂಗಣ, ನುರಿತ ಶಿಕ್ಷಕ ವರ್ಗವನ್ನು ನಾವು ಹೊಂದಿದ್ದೇವೆ. ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಕಥಕ್ ಮತ್ತು ಕೂಚಿಪುಡಿ ನೃತ್ಯಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಯೋಜನೆಯನ್ನು ರೂಪಿಸಲಾಗಿದೆ. ಶೀಘ್ರದಲ್ಲಿ ಇದಕ್ಕೆ ಸಂಬಂಧಿಸಿದ ಪಠ್ಯಕ್ರಮವನ್ನು ರಚಿಸಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಎಸ್.ಎಂ.ಜಯಕರ
ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್

• **ಮೋಷನ್ ಗ್ರಾಫಿಕ್ಸ್:** ಅಂಡರ್‌ಪಿನ್ ಸರ್ವೀಸಸ್ ಸಂಸ್ಥೆಯು ಮೋಷನ್ ಗ್ರಾಫಿಕ್ಸ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್ ಕುರಿತು ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಜನವರಿ 9ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್ ತಿಂಗಳಿಗೆ ₹ 10,000–₹ 15,000. ಸಂಪರ್ಕ: https://shorturl.at/rMOeC.

• **ವಿಡಿಯೊ ಎಡಿಟಿಂಗ್/ ಮೇಕಿಂಗ್:** ಎನ್‌ವಿಎಐ ಟೆಕ್ನಾಲಜೀಸ್ ಸಂಸ್ಥೆಯು ವಿಡಿಯೊ ಎಡಿಟಿಂಗ್/ ಮೇಕಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್, ಅಡೋಬ್ ಫೋಟೊಶಾಪ್ ಮತ್ತು ಡಾವಿನ್ಸಿ ರೆಸಾಲ್ವ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಜನವರಿ 3ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 15,000–20,000. ಸಂಪರ್ಕ– https://shorturl.at/yikYT.

• **ಸರ್ಚ್ ಎಂಜಿನ್ ಆಪ್ಟಿಮೈಸೇಷನ್:** ಸರ್ಪ್‌ಕ್ಲೈಂಬರ್ (Serpclimber) ಸಂಸ್ಥೆಯು ಸರ್ಚ್ ಎಂಜಿನ್ ಆಪ್ಟಿಮೈಸೇಷನ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಇ–ಮೇಲ್ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಆಪ್ಟಿಮೈಸೇಷನ್‌ನಲ್ಲಿ ಜ್ಞಾನ ಇರುವ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡುವ ಹಾಗೂ ಬರವಣಿಗೆಯ ಸಾಮರ್ಥ್ಯ ಇರುವವರು ಜನವರಿ 3ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 7,000. ಸಂಪರ್ಕ– https://shorturl.at/pElUg.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

• **ಸೋಷಿಯಲ್ ಮೀಡಿಯಾ & ಕಮ್ಯುನಿಟಿ ಎಂಗೇಜ್‌ಮೆಂಟ್:** ಪ್ರಸೂನ್ ರಾಮ್‌ದಾಸ್ ಕಂಪನಿಯು ಸೋಷಿಯಲ್ ಮೀಡಿಯಾ & ಕಮ್ಯುನಿಟಿ ಎಂಗೇಜ್‌ಮೆಂಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಕಂಟೆಂಟ್ ಮ್ಯಾನೇಜ್‌ಮೆಂಟ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್, ಕಮ್ಯುನಿಟಿ ಮ್ಯಾನೇಜ್‌ಮೆಂಟ್‌ನಲ್ಲಿ ಜ್ಞಾನ ಹಾಗೂ ಇಂಗ್ಲಿಷ್‌ನಲ್ಲಿ ಸಂವಹನ ಮತ್ತು ಬರವಣಿಗೆಯ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜನವರಿ 1 ಅರ್ಜಿ ಸಲ್ಲಿಕೆಗೆ ಕೊನೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 10,000. ಸಂಪರ್ಕ: https://tinyurl.com/4cet7999

• **ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್):** ಪೆಪಿಂಗ್.ಇನ್ (Peping.in) ಸಂಸ್ಥೆಯು ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಪರಿಣಾಮಕಾರಿ ಸಂವಹನ, ಇಂಗ್ಲಿಷ್‌ನಲ್ಲಿ ಬರವಣಿಗೆ ಮತ್ತು ಮಾತನಾಡುವ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಡಿಸೆಂಬರ್ 24 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸಂಪರ್ಕ– https://shorturl.at/SMfq7. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.2

14) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– ಕೊನೆಯ ಪದ (l)= 248

(...ಹಿಂದಿನ ಸಂಚಿಕೆಯಿಂದ)

$nth\ term = l$

$a+(n-1)d = 248$

$12+(n-1)(4) = 248$

$(n-1)4 = 248-12$

$(n-1)4 = 236$

$(n-1) = \frac{236}{4}$

$(n-1) = 59$

$n = 59+1 = 60$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

15) nನ ಯಾವ ಬೆಲೆಗೆ 63, 65, 67.... ಮತ್ತು 3, 10, 17 ... ಈ ಸಮಾಂತರ ಶ್ರೇಢಿಗಳ nನೇ ಪದಗಳು ಸಮವಾಗಿರುತ್ತವೆ?

ಪರಿಹಾರ:– ಮೊದಲ ಸಮಾಂತರ ಶ್ರೇಢಿ 63, 65, 67............

ಇಲ್ಲಿ a = 63 d = 65 – 63 = 2

nನೇ ಪದ = 63 + (n-1)2 $(\because a_n = a+(n-1)d)$

ಎರಡನೆ ಸಮಾಂತರ ಶ್ರೇಢಿ 3, 10, 17............

ಇಲ್ಲಿ a = 3 d = 3 – 10 = 7

nನೇ ಪದ = 3 + (n-1)7 $(\because a_n = a+(n-1)d)$

ಒಂದು ವೇಳೆ nನೇ ಪದ ಎರಡು ಸಮಾಂತರ ಶ್ರೇಢಿಗಳಲ್ಲಿ ಸಮವಾಗಿದ್ದರೆ

63 + (n - 1)2 = 3 + (n - 1) 7
(n-1)2 - (n-1)7 = 3 - 63
(n-1)(-5) = - 60
(n-1)= -60/-5
n-1 =12
n = 12 + 1 = 13
n = 13

ಹೀಗಾಗಿ 13 ಎರಡು ಸಮಾಂತರ ಪದಗಳ nನ ಬೆಲೆಯಾಗಿದೆ

16) ಮೂರನೇ ಪದ 16, 7ನೇ ಪದವು 5ನೇ ಪದಕ್ಕಿಂತ 12 ಹೆಚ್ಚಾಗಿರುವ ಸಮಾಂತರ ಶ್ರೇಢಿ ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

3ನೇ ಪದ = 16

a + (3 - 1)d = 16 $(\because a_n = a+(n-1)d)$

a + 2d = 16............... (1)

7ನೇ ಪದ = 5ನೇ ಪದ + 12

a + (7 - 1)d = a + (5-1)d +12
= a + 6 d = a + 4d + 12
= 6d - 4d = 12
=2d=12
d=12/2=6
d=6 ಅನ್ನು (1) ರಲ್ಲಿ ಹಾಕಿದಾಗ
a + 2(6) = 16
a + 12 = 16
a = 16 - 12 = 4

ಹೀಗಾಗಿ ಬೇಕಾಗಿರುವ ಸಮಾಂತರ ಶ್ರೇಢಿ

4, 4+6, 4+6+6, 4+6+6+6.................

i.e 4, 10, 16, 22..............

ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ

1) 8, 3, 2 ..... ಈ ಸಮಾಂತರ ಶ್ರೇಢಿಯ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ a = 8, b = 3 - 8 = -5, n = 22.

ನಮಗೆ ತಿಳಿದಿರುವಂತೆ

$S_n = \frac{n}{2}[2a+(n-1)d]$

$= \frac{22}{2}[16+21(-5)]$

11[16-(-105)]

= 11 (16 - 105)

= 11 (-89) = -979

ಹಾಗಾದರೆ, ಸಮಾಂತರ ಶ್ರೇಢಿಯ ಮೊದಲ 22 ಪದಗಳ ಮೊತ್ತವು –979 ಆಗಿದೆ

2) ಒಂದು ಸಮಾಂತರ ಶ್ರೇಢಿಯ ಮೊದಲ 14 ಪದಗಳ ಮೊತ್ತ 1050. ಅದರ ಮೊದಲನೇ ಪದ 10, ಅದರ 20ನೇ ಪದ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ S_{14} = 1050, n = 14, a = 10

$S_n = \frac{n}{2}[2a+(n-1)d]$

$1050 = \frac{14}{2}(20+13d)$

$1050 = 140 + 91d$

$910 = 91d$

∴ d = 10

ಆದ್ದರಿಂದ a_{20} = 10 + (20 – 1) 10 = 200 ಅಂದರೆ 20ನೇ ಪದ 200 ಆಗಿದೆ.

3) 24, 21, 18 .... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 78 ಆಗಿದೆ?

ಪರಿಹಾರ: $a = 24$, $d = 21\text{-}24 = -3$, $S_n = 78$

ನಾವು n ಕಂಡುಹಿಡಿಯ ಬೇಕಾಗಿದೆ

$S_n = \frac{n}{2}[2a+(n-1)d]$

$78 = \frac{n}{2}[48+(n-1)(-30)]$

$\Rightarrow = \frac{n}{2}[51-3n]$

$3n^2 - 51n + 156 = 0$

$n^2 - 17 + 52 = 0$

(n - 4) (n - 13) = 0

∴ n = 4 ಅಥವಾ 13

nನ ಎರಡೂ ಮೌಲ್ಯಗಳು ಸ್ವೀಕಾರಾರ್ಹ, ಆದ್ದರಿಂದ ಪದಗಳ ಸಂಖ್ಯೆ 4 ಅಥವಾ 13.

4) ಮೊತ್ತ ಕಂಡುಹಿಡಿಯಿರಿ:

(i) ಮೊದಲ 1000 ಧನ ಪೂರ್ಣಾಂಕಗಳು

(ii) ಮೊದಲ n ಧನ ಪೂರ್ಣಾಂಕಗಳು

ಪರಿಹಾರ:(i) S = 1 + 2 + 3 +...... + 1000 ಆಗಿರಲಿ

$S_n = \frac{n}{2}[a+l]$ ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ ಕಂಡುಹಿಡಿಯುವ ಸೂತ್ರ ಉಪಯೋಗಿಸಿದಾಗ ನಮಗೆ

$S_{1000} = \frac{1000}{2}[1+1000] = 500x1001 = 500500$

ಹಾಗಾದರೆ ಮೊದಲ 1000 ಪೂರ್ಣಾಂಕಗಳ ಮೊತ್ತವು 500500


ಪಿಯುಸಿ ಪರೀಕ್ಷೆ ದಿಕ್ಸೂಚಿ — PHYSICS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CURRENT ELECTRICITY

22. If each of the resistances in the network is R as shown in the fig, what is the resistance between A and B?



The given network can be reduced to the network shown below.




This is a balanced Wheatstone bridge. Hence the current through R between C and B is zero.

∴ Net resistance between A and B =

$$\frac{(R+R)(R+R)}{(R+R)+(R+R)} = \frac{4R^2}{4R} = R$$

23. Find the currents I_1, I_2 and I_3 in the network shown below.



Ans :- **Applying KCL to the junction D,**

$I_1 + I_3 = I_2$.........(i)

Applying voltage law to the mesh BADB,

$6I_3 + (I_1 + I_3)12 = -7$

$\Rightarrow 18I_3 + 12I_1 = -7$........(ii)

For the mesh BCDB

$2 \times I_1 + 12 \times I_2 = 8 \Rightarrow 2I_1 + 12(I_1 + I_3) = 8$

$\Rightarrow 14I_1 + 12I_3 = 8$ (or) $7I_1 + 6I_3 = 4$.....(iii)


Solving the eqns (ii) & (iii),

we get, $I_1 = \frac{19}{9}A$

From the eqn (iii), we get $I_3 = \frac{97}{54}A$

$\therefore I_2 = I_1 + I_3 = \frac{19}{9} - \frac{97}{54} = \frac{17}{54}A$

24. In the Wheatstone's bridge shown in the figure, P and Q are ratio arms. R is a unknown resistance. S is 100 Ω resistor. When S is shunted with 200 Ω the bridge is balanced. On interchanging P and Q the value of shunt resistance across S for the balance is 300 Ω. Find R and the ratio P : Q



From, Wheatstone's principle

$$\frac{P}{Q} = \frac{R}{\left(\frac{200 \times 100}{200+100}\right)}$$

$$\frac{P}{Q} = \frac{3R}{200} \text{..............(i)}$$

On interchanging P & Q, shunt across S for balance is 300Ω

$$\frac{Q}{P} = \frac{R}{\left(\frac{300 \times 100}{300+100}\right)}$$

$$\frac{Q}{P} = \frac{4R}{300} \text{..............(ii)}$$

(i) x (ii) $\rightarrow 1 = \frac{3R}{200} \times \frac{4R}{300}$

$\Rightarrow 12R^2 = 300 \times 200$

$\therefore R = 70.7\ \Omega$

From (i), $\frac{P}{Q} = \frac{3R}{200} = \frac{3 \times 70.7}{200}$

$= 1.0605 \simeq 1.06$


25. Obtain the condition for the balance of a Wheatstone's network by applying Kirchoff's law.

Ans:- The wheatstone's network is the arrangement of resistances used for measuring one of them in terms of the other three. The meter bridge is based on this principle.

Consider a wheatstone's network consisting of 4 resistances P, Q, R and S connected to form a quadrilateral ABCD is as shown in the figure. Across BD a galvanometer of resistance G is connected and across AC a cell of emf E is connected.

p

The currents in various parts of the circuit are as in the figure -



ಎಂಟು ತಿಂಗಳು: ಶೇ 50 ಅನುದಾನ ವೆಚ್ಚ

ಬಜೆಟ್‌ನಲ್ಲಿ 47 ಇಲಾಖೆಗಳಿಗೆ ₹ 4,09 ಲಕ್ಷ ಕೋಟಿ ಹಂಚಿಕೆ
ನಾಲ್ಕು ತಿಂಗಳಲ್ಲಿ ಉಳಿದ ಶೇ 50ರಷ್ಟು ಬಳಕೆ ಸವಾಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರ ಒದಗಿಸಿದ ಒಟ್ಟು ಅನುದಾನದಲ್ಲಿ, ವಿವಿಧ ಇಲಾಖೆಗಳು ಏಪ್ರಿಲ್‌ನಿಂದ ನವೆಂಬರ್ ಅಂತ್ಯದವರೆಗಿನ ಎಂಟು ತಿಂಗಳ ಅವಧಿಯಲ್ಲಿ ಶೇ 50ರಷ್ಟನ್ನು ವೆಚ್ಚ ಮಾಡಿವೆ.

ಬಜೆಟ್‌ನಲ್ಲಿ 47 ಇಲಾಖೆಗಳಿಗೆ ₹ 4,09,549.24 ಕೋಟಿ ಹಂಚಿಕೆ ಮಾಡಲಾಗಿದೆ. ಸರ್ಕಾರದ ಖಜಾನೆಯ ಲೆಕ್ಕದ ಪ್ರಕಾರ ನ. 30ರವರೆಗೆ ₹ 2,05,831.71 ಕೋಟಿ ಬಳಕೆ ಆಗಿದೆ.

ಈ ಪೈಕಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪಶು ಸಂಗೋಪನೆ, ಇಂಧನ, ಕಂದಾಯ, ಕೈಗಾರಿಕೆ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ತಮ್ಮ ಪಾಲಿನ ಅನುದಾನದಲ್ಲಿ ಶೇ 60ಕ್ಕೂ ಹೆಚ್ಚು ಮೊತ್ತವನ್ನು ಬಳಕೆ ಮಾಡಿವೆ.

ಯೋಜನೆ, ಸಾಂಖ್ಯಿಕ, ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಕಾರ್ಮಿಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕೈಮಗ್ಗ ಮತ್ತು ಜವಳಿ, ಸಣ್ಣ ನೀರಾವರಿ, ಮೀನುಗಾರಿಕೆ ಇಲಾಖೆಗಳಿಗೆ ಒದಗಿಸಿದ ಅನುದಾನದಲ್ಲಿ ಶೇ 30ಕ್ಕೂ ಕಡಿಮೆ ಮೊತ್ತವನ್ನು ವೆಚ್ಚ ಮಾಡಿವೆ.

ಆರ್ಥಿಕ ವರ್ಷ ಅಂತ್ಯವಾಗಲು ಇನ್ನೂ ನಾಲ್ಕು ತಿಂಗಳು (ಡಿಸೆಂಬರ್‌ನಿಂದ ಮಾರ್ಚ್‌ವರೆಗೆ) ಬಾಕಿ ಉಳಿದಿದೆ. ಉಳಿದಿರುವ ಶೇ 50 ರಷ್ಟು ಅನುದಾನವನ್ನು ಆಡಳಿತ ಇಲಾಖೆಗಳು ಮುಂದಿನ ಅವಧಿಯಲ್ಲಿ ಬಳಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಿದೆ ಎಂದು ಆರ್ಥಿಕ ಇಲಾಖೆಯನ್ನೂ ನಿಭಾಯಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

2025–26 ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಿದ ಅನುದಾನದಲ್ಲಿ ನ. 30 ರ ಅಂತ್ಯಕ್ಕೆ ಸರಾಸರಿ ಅರ್ಧದಷ್ಟು ವೆಚ್ಚವಾಗಿದೆ. ಆಯವ್ಯಯದಲ್ಲಿ ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡಿರುವ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿಯೇ ಬಳಕೆ ಮಾಡುವಂತೆ ಸೂಚನೆ ನೀಡಲಾಗಿದೆ ಎಂದೂ ಅವರು ಹೇಳಿದ್ದಾರೆ.

ಬಜೆಟ್ ಅನುದಾನ ಚಿತ್ರಣ

₹ **4,09** ಲಕ್ಷ ಕೋಟಿ
ಒದಗಿಸಿದ ಮೊತ್ತ

₹ **2,06** ಲಕ್ಷ ಕೋಟಿ
ನ. 30ರವರೆಗೆ ವೆಚ್ಚ

ಪಂಚ 'ಗ್ಯಾರಂಟಿ'ಗೆ ಬಳಕೆ

₹ **51,034** ಕೋಟಿ
ಒದಗಿಸಿದ ಅನುದಾನ

₹ **26,334** ಕೋಟಿ
ನ. 30ರವರೆಗೆ ಬಳಕೆ

'ಗ್ಯಾರಂಟಿ'ಗಳಿಗೆ ₹ 26,334 ಕೋಟಿ ವೆಚ್ಚ

ರಾಜ್ಯ ತನ್ನ ಮಹತ್ವಾಕಾಂಕ್ಷಿ 'ಪಂಚ ಗ್ಯಾರಂಟಿ 'ಯೋಜನೆಗಳಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ₹ 51,034 ಕೋಟಿ ಒದಗಿಸಿದೆ. ಅಲ್ಲದೆ, ಕಳೆದ ಆರ್ಥಿಕ ವರ್ಷದಲ್ಲಿ (2024–25) ಗ್ಯಾರಂಟಿ ಯೋಜನೆಗಳಿಗೆ ಹಂಚಿಕೆ ಮಾಡಿದ್ದ ಅನುದಾನದಲ್ಲಿ ವೆಚ್ಚವಾಗದೆ ಉಳಿಕೆಯಾಗಿದ್ದ ₹ 5,521 ಕೋಟಿಯನ್ನು 2025–26ನೇ ಸಾಲಿನಲ್ಲಿ ಪಾವತಿಸಲು ಆರ್ಥಿಕ ಇಲಾಖೆಗೆ ವರ್ಗಾಯಿಸಲಾಗಿದೆ. ಈ ಮೊತ್ತವೂ ಸೇರಿ ಗ್ಯಾರಂಟಿ ಯೋಜನೆಗಳಿಗೆ ಲಭ್ಯವಿದ್ದ ಅನುದಾನದಲ್ಲಿ ಖಜಾನೆಯ ಲೆಕ್ಕದ ಪ್ರಕಾರ ನ. 30ರವರೆಗೆ ₹ 26,334 ಕೋಟಿ ವೆಚ್ಚ ಆಗಿದೆ. ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ಆರ್ಥಿಕ ಇಲಾಖೆಯ ಮೂಲಗಳು ತಿಳಿಸಿವೆ.

ಯಾವ ಇಲಾಖೆಯಲ್ಲಿ ಅತೀ ಹೆಚ್ಚು ವೆಚ್ಚ
(₹ ಕೋಟಿಗಳಲ್ಲಿ)

ಇಲಾಖೆ	ಅನುದಾನ	ವೆಚ್ಚ	ಶೇಕಡ
ಶಾಲಾ ಶಿಕ್ಷಣ	34,437.56	26,105.46	76
ಪಶು ಸಂಗೋಪನೆ	3,342.28	2431.79	71
ಇಂಧನ	26,896.18	17,482.22	65
ಕಂದಾಯ	15,662.25	10,057.13	64
ಕೈಗಾರಿಕೆ	1,229.51	755.76	61
ಕಾನೂನು	2,536.51	1,520.30	60
ಒಳಾಡಳಿತ	13,045.37	7,635.29	59

ಯಾವ ಇಲಾಖೆಯಲ್ಲಿ ಅತೀ ಕಡಿಮೆ ವೆಚ್ಚ
(₹ ಕೋಟಿಗಳಲ್ಲಿ)

ಇಲಾಖೆ	ಅನುದಾನ	ವೆಚ್ಚ	ಶೇಕಡ
ಯೋಜನೆ, ಸಾಂಖ್ಯಿಕ, ವಿಜ್ಞಾನ, ತಂತ್ರಜ್ಞಾನ	3,903.18	421.12	11
ಐಟಿಬಿಟಿ	1,078.50	214.76	20
ಕಾರ್ಮಿಕ	1,078.50	214.76	29
ಆರ್‌ಡಿಪಿಆರ್	25,439.55	7,535.56	30
ಕೈಮಗ್ಗ ಮತ್ತು ಜವಳಿ	498.69	147.14	30
ಸಣ್ಣ ನೀರಾವರಿ	3,344.05	1,082.84	32
ಮೀನುಗಾರಿಕೆ	421.06	140.78	33

ಶೀತ ಗಾಳಿ: 14 ಜಿಲ್ಲೆಗಳಿಗೆ ಸೂಚನೆ

ಒಂದನೇ ಪುಟದಿಂದ...

ಮುಂದಿನ ಎರಡು ದಿನಗಳ ಅವಧಿಯಲ್ಲಿ ಒಳನಾಡಿನಲ್ಲಿ ಕನಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆಯಿಲ್ಲ. ನಂತರ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.



ಬೆಂಗಳೂರಿನಲ್ಲಿ ಮುಂಜಾನೆ ಕೆಲವೆಡೆ ದಟ್ಟ ಮಂಜು ಕವಿಯುವ ಸಾಧ್ಯತೆಯಿದ್ದು, ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 29 ಡಿಗ್ರಿ ಸೆಲ್ಸಿಯಸ್ ಮತ್ತು 14 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಉತ್ತರ ಒಳನಾಡಿನ ಬೀದರ್ ಮತ್ತು ದಕ್ಷಿಣ ಒಳನಾಡಿನ ಧಾರವಾಡ, ವಿಜಯಪುರ ಜಿಲ್ಲೆಯಲ್ಲಿ ಶೀತ ಗಾಳಿ ಬೀಸಿತ್ತು.

ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶವು ಗಣನೀಯವಾಗಿ ಕುಸಿತವಾಗುತ್ತಿದ್ದು, ವಾಡಿಕೆಗಿಂತ 5ರಿಂದ 6 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಕಡಿಮೆಯಾದ ಪರಿಣಾಮ ಚಳಿಯ ತೀವ್ರತೆ ಹೆಚ್ಚುತ್ತಿದೆ.

ಬೀದರ್: ಕನಿಷ್ಠ 7 ಡಿಗ್ರಿ ಸೆಲ್ಸಿಯಸ್

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶವು 7.4 ಡಿಗ್ರಿ ಸೆಲ್ಸಿಯಸ್‌ಗೆ ಕುಸಿತವಾಗಿತ್ತು. ಸಾಮಾನ್ಯವಾಗಿ 15.3 ಡಿಗ್ರಿ ಸೆಲ್ಸಿಯಸ್ ಇರುತ್ತಿದ್ದ ಉಷ್ಣಾಂಶ, 7.9 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಯಾಗಿತ್ತು. ಕನಿಷ್ಠ ಉಷ್ಣಾಂಶವು ಹಾಸನದಲ್ಲಿ 8.7 ಡಿಗ್ರಿ ಸೆಲ್ಸಿಯಸ್, ದಾವಣಗೆರೆಯಲ್ಲಿ 9 ಡಿಗ್ರಿ ಸೆಲ್ಸಿಯಸ್, ಧಾರವಾಡದಲ್ಲಿ 9.5 ಡಿಗ್ರಿ ಸೆಲ್ಸಿಯಸ್, ವಿಜಯಪುರದಲ್ಲಿ 10 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಲೇಖಕಿಯರ ಸಂಘಕ್ಕೆ ಸುನಂದಮ್ಮ ಅಧ್ಯಕ್ಷೆ


ಸುನಂದಮ್ಮ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಲೇಖಕಿ ಆರ್. ಸುನಂದಮ್ಮ ಜಯಶೀಲರಾಗಿದ್ದಾರೆ.

ನಿರ್ಮಲಾ ಸಿ. ಎಲಿಗಾರ್ ಪ್ರತಿಸ್ಪರ್ಧಿಯಾಗಿದ್ದರು. ಬೆಂಗಳೂರಿನ ಶಂಕರಪುರದಲ್ಲಿರುವ ಅಶೋಕ ಶಿಶುವಿಹಾರದಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಿತು. ಸುನಂದಮ್ಮ ಅವರು 471 ಮತ ಪಡೆದರೆ, ನಿರ್ಮಲಾ ಅವರು 282 ಮತಗಳನ್ನು ಗಳಿಸಿದರು. 189 ಮತಗಳ ಅಂತರದಿಂದ ಸುನಂದಮ್ಮ ಜಯಶೀಲರಾಗಿರುವುದಾಗಿ ಚುನಾವಣಾಧಿಕಾರಿ ಆರ್. ಪ್ರತಿಭಾ ಘೋಷಿಸಿದರು.

ಒಟ್ಟು 757 ಮಂದಿ ಮತದಾನ ಮಾಡಿದ್ದು, ನಾಲ್ಕು ಮತಗಳು ಅಸಿಂಧುಗೊಂಡಿದ್ದವು. ಬೆಂಗಳೂರು ಹೊರತುಪಡಿಸಿ ಇತರೆ ಜಿಲ್ಲೆಗಳಿಂದ ಅಂಚೆ ಮೂಲಕ ಮತದಾನ ಪ್ರಕ್ರಿಯೆ ನಡೆಸಲಾಗಿತ್ತು. ಬೆಂಗಳೂರಿನಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ಮತದಾನ ಪ್ರಕ್ರಿಯೆ ಭಾನುವಾರ ನಡೆಯಿತು.ಅಧ್ಯಕ್ಷರ ಅಧಿಕಾರ ಅವಧಿ ಮೂರು ವರ್ಷ ಇರುತ್ತದೆ.

ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಶೈಕ್ಷಣಿಕ ಕಾರ್ಯಗಳಿಗೆ ₹1.2 ಕೋಟಿ
ಸಿಗದ ಅನುದಾನ:ಕಾಮಗಾರಿ ಕುಂಠಿತ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಗಡಿಭಾಗದ ಪ್ರದೇಶಗಳಲ್ಲಿ ಕನ್ನಡ ಭಾಷೆ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ಗಡಿ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಲು ರಾಜ್ಯ ಸರ್ಕಾರವು ರಚಿಸಿದ್ದ 'ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ'ಕ್ಕೆ ಈಗ ಅನುದಾನ ಕೊರತೆ ಕಾಡುತ್ತಿದೆ. ಇದರಿಂದ ಕನ್ನಡ ಕಟ್ಟುವ ಕೆಲಸಕ್ಕೆ ಹಿನ್ನಡೆ ಆಗಿದೆ. ಗೋವಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು ಜೊತೆಗೆ ಕರ್ನಾಟಕದ 19 ಜಿಲ್ಲೆಗಳ 63 ತಾಲ್ಲೂಕು ಗಡಿ ಹಂಚಿಕೊಂಡಿವೆ. ಗಡಿಭಾಗ ಮತ್ತು ಹೊರರಾಜ್ಯಗಳ ಕನ್ನಡ ಶಾಲೆಗಳಲ್ಲಿ ಕೊಠಡಿ ನಿರ್ಮಾಣ, ಮೂಲಸೌಲಭ್ಯ ಕಲ್ಪಿಸುವಿಕೆ, ಸಾಂಸ್ಕೃತಿಕ ಭವನ, ಬಯಲು ರಂಗಮಂದಿರ ನಿರ್ಮಾಣ, ಸ್ಮಾರ್ಟ್‌ಕ್ಲಾಸ್‌ಗೆ ಪರಿಕರ, ಕನ್ನಡ ಪುಸ್ತಕ ಪೂರೈಕೆ ಸೇರಿ ವಿವಿಧ ಕಾರ್ಯಗಳನ್ನು ಪ್ರಾಧಿಕಾರ ಕೈಗೊಳ್ಳುತ್ತದೆ.

2018–19ರಲ್ಲಿ ಪ್ರಾಧಿಕಾರಕ್ಕೆ ₹89 ಕೋಟಿ ಅನುದಾನ ನೀಡಲಾಗಿತ್ತು. 2022–23ರಲ್ಲಿ ₹40 ಕೋಟಿ ಅನುದಾನ ಬಂದಿತ್ತು. ವಿವಿಧ ಚಟುವಟಿಕೆಗಳಿಗೆ ವಾರ್ಷಿಕ ₹100 ಕೋಟಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ಆದರೆ, 2025–26ನೇ ಸಾಲಿನಲ್ಲಿ ₹16 ಕೋಟಿಯಷ್ಟೇ ಅನುದಾನ ನೀಡಲಾಗಿದೆ. ಅದರಲ್ಲಿ ಗೋವಾದಲ್ಲಿ ಕನ್ನಡ ಭವನ ನಿರ್ಮಾಣದ ನಿವೇಶನಕ್ಕಾಗಿಯೇ ₹5.25 ಕೋಟಿ ವ್ಯಯಿಸಲಾಗಿದೆ.

'ಪ್ರಸ್ತುತ ಪ್ರಗತಿಯಲ್ಲಿರುವ ಹಳೇ ಕಾಮಗಾರಿಗಳಿಗೆ ₹34 ಕೋಟಿ ಬೇಕಿದೆ. ಗೋವಾದಲ್ಲಿ ಕನ್ನಡ ಭವನ ನಿರ್ಮಿಸಲು ನಿವೇಶನಕ್ಕೆ ವ್ಯಯಿಸಿದ ಹಣ ಹೊರತುಪಡಿಸಿ, ಬಾಕಿ ಉಳಿದ ₹10.75 ಕೋಟಿ ಅನುದಾನದಲ್ಲಿ ಎಲ್ಲ ಕಾಮಗಾರಿ ಮುಗಿಸುವುದು ಕಷ್ಟ. ಅತ್ಯಲ್ಪ ಅನುದಾನದಲ್ಲಿ ಗಡಿ ಕನ್ನಡಿಗರ ಸಮಸ್ಯೆಗೆ ಸ್ಪಂದಿಸಲಾಗುತ್ತಿಲ್ಲ' ಎಂದು ಪ್ರಾಧಿಕಾರದ ಸದಸ್ಯರು ತಿಳಿಸಿದರು.

ಕಾಮಗಾರಿ ಸ್ಥಗಿತ: ಗಡಿಭಾಗ ಮತ್ತು ಹೊರರಾಜ್ಯಗಳಲ್ಲಿ ಪ್ರಾಧಿಕಾರ ಕೈಗೊಂಡಿದ್ದ ವಿವಿಧ ಕಾಮಗಾರಿಗಳು ಸ್ಥಗಿತಗೊಂಡಿವೆ. ಕಾಸರಗೋಡಿನ ಕಲ್ಲಕಳಿಯ ಬತ್ತೇರಿಯಲ್ಲಿ ಕಯ್ಯಾರ ಕಿಞ್ಞಣ್ಣ ರೈ ಸಾಂಸ್ಕೃತಿಕ ಭವನ, ಮಹಾರಾಷ್ಟ್ರದ ಅಕ್ಕಲಕೋಟೆಯಲ್ಲಿ ಜಯದೇವಿ ತಾಯಿ ಲಿಗಾಡೆ ಸಾಂಸ್ಕೃತಿಕ ಭವನ ನಿರ್ಮಾಣ ಮತ್ತಿತರ ಕಾಮಗಾರಿ ಒಳಗೊಂಡಂತೆ ಹಲವು ಕಾಮಗಾರಿಗಳು ಪೂರ್ಣಗೊಂಡಿಲ್ಲ.

ಗಡಿ ಭಾಗದ ಶಾಲೆಗಳಲ್ಲಿ ಸೌಲಭ್ಯ ಕೊರತೆ

ಗಡಿ ಪ್ರದೇಶಗಳಲ್ಲಿ 17 ಸಾವಿರ, ಹೊರರಾಜ್ಯದಲ್ಲಿ 658 ಕನ್ನಡ ಶಾಲೆಗಳಿವೆ. ಅನೇಕ ಕಡೆ ಶಾಲೆಗಳಲ್ಲಿ ಕನಿಷ್ಠ ಸೌಲಭ್ಯಗಳು ಇಲ್ಲ. ಈ ವರ್ಷ ಪ್ರಾಧಿಕಾರಕ್ಕೆ ಹಂಚಿಕೆಯಾಗಿ ₹16 ಕೋಟಿ ಅನುದಾನದಲ್ಲಿ ₹1.20 ಕೋಟಿ ಮಾತ್ರ ಶೈಕ್ಷಣಿಕ ಚಟುವಟಿಕೆಗೆ ಬಳಸಲು ಸೂಚಿಸಲಾಗಿದೆ.

'ಅನುದಾನವನ್ನು ಸಮನಾಗಿ ಹಂಚಿಕೆ ಮಾಡಿದರೆ, ಪ್ರತಿ ತಾಲ್ಲೂಕಿಗೆ ₹2 ಲಕ್ಷಕ್ಕಿಂತ ಕಡಿಮೆ ದೊರೆಯುತ್ತದೆ. ಅಷ್ಟು ಹಣದಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವುದಾದರೂ ಹೇಗೆ' ಎಂಬುದು ಪ್ರಾಧಿಕಾರದ ಸದಸ್ಯರೊಬ್ಬರ ಪ್ರಶ್ನೆ.



ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ಸಿಕ್ಕರೆ, ಗಡಿಯಲ್ಲಿ ಬೇಡಿಕೆಯಂತೆ ಚಟುವಟಿಕೆ ಕೈಗೊಳ್ಳಬಹುದು. ಬಾಕಿ ಕಾಮಗಾರಿ ಕೆಲಸ ಪೂರ್ಣಗೊಳಿಸಬಹುದು
ಸೋಮಣ್ಣ ಬೇವಿನಮರದ, ಅಧ್ಯಕ್ಷ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ



ಸರ್ಕಾರಕ್ಕೆ ಗಡಿಭಾಗದ ಬಗ್ಗೆ ನಿಜವಾಗಿ ಬದ್ಧತೆ ಇದ್ದರೆ, ಪ್ರಾಧಿಕಾರಕ್ಕೆ ವಾರ್ಷಿಕ ₹100 ಕೋಟಿ ಅನುದಾನ ಕೊಡಬೇಕು. ಪ್ರಾಧಿಕಾರಕ್ಕೆ ಪ್ರೋತ್ಸಾಹ ನೀಡಬೇಕು
ಅಶೋಕ ಚಂದರಗಿ, ಸದಸ್ಯ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ

ಕೊರಗರಲ್ಲಿ ಮೊದಲ ಎಂ.ಡಿ. ಪದವೀಧರೆ

ಒಂದನೇ ಪುಟದಿಂದ...

ಸಹೋದರಿ ಸಾಕ್ಷಿ, ಗುಜರಾತ್‌ನ ಎನ್‌ಎಸ್‌ಡಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಸ್ನೇಹಾ ಅವರು ಅಂಕೋಲಾ ಮತ್ತು ಕುಂದಾಪುರದಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಪಿಯು ಪೂರ್ಣಗೊಳಿಸಿದ್ದರು. ನಂತರ ಮಂಗಳೂರಿನ ಎ.ಜೆ. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದರು.

ವೈದ್ಯಕೀಯ ಪದವಿ ಶಿಕ್ಷಣದ ಬಳಿಕ ಅವರು ಕೋಟ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 18 ತಿಂಗಳು ಕಾರ್ಯನಿರ್ವಹಿಸಿದ್ದರು.

'ಮಗಳಿಂದ ಸಮಾಜಕ್ಕೆ ಕೊಡುಗೆ ನೀಡಲು ಸಾಧ್ಯವಾಗಲಿದೆ ಎಂಬುದು ನಮಗೆ ಖುಷಿಯ ವಿಚಾರ' ಎಂದು ಸ್ನೇಹಾ ಅವರ ತಂದೆ ಗಣೇಶ್ ತಿಳಿಸಿದರು.

ಹೋರಿ ಹಿಡಿಯುವ ಸ್ಪರ್ಧೆ


ಪ್ರಜಾವಾಣಿ ಚಿತ್ರ: ಇಂದ್ರಕುಮಾರ್ ದಸ್ತೇನವರ



ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಕಣಿವೆಮನೆ ಗ್ರಾಮದಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

ಹರಿಕಥೆ ಕುರಿತು ಹಗುರ ಮಾತು ಸ್ಪೀಕರ್ ಕ್ಷಮೆಗೆ ಶಾಸಕ ಆಗ್ರಹ

ಪ್ರಜಾವಾಣಿ ವಾರ್ತೆ


ಯಶ್‌ಪಾಲ್ ಸುವರ್ಣ

ಉಡುಪಿ: 'ವಿಧಾನಸಭೆ ಅಧಿವೇಶನದ ವೇಳೆ ಉಡುಪಿ ಪರ್ಯಾಯಕ್ಕೆ ಅನುದಾನ ಕೇಳಿದ್ದಕ್ಕಾಗಿ ಸಭಾಧ್ಯಕ್ಷರು ಟೀಕಿಸಿರುವುದು ಸರಿಯಲ್ಲ. ಪೀಠಕ್ಕೆ ಗೌರವ ನೀಡಿ ಮೌನವಾಗಿದ್ದೆ. ಸ್ಪೀಕರ್ ಯು.ಟಿ. ಖಾದರ್ ಅವರು ಹರಿಕಥೆ ಬಗ್ಗೆ ಹಗುರವಾಗಿ ಮಾತನಾಡಿದ್ದು ನೋವುಂಟು ಮಾಡಿದೆ' ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

'ನಾನು ದಾರಿ ತಪ್ಪುವ ಚರ್ಚೆ ಮಾಡಿಲ್ಲ. ಅನೇಕ ಶಾಸಕರು ಒಂದೊಂದು ಗಂಟೆ ಮಾತನಾಡುತ್ತಾರೆ. ಉಡುಪಿ ಹಿಂದುತ್ವದ ಜಿಲ್ಲೆ ಎಂಬುದು ಖಾದರ್ ಅವರಿಗೆ ಗೊತ್ತಿದೆ. ಅಭಿವೃದ್ಧಿ, ಪರ್ಯಾಯ ಮಹೋತ್ಸವದ ವಿಚಾರ ಬಂದಾಗ ಅವರು ಟೀಕೆ ಮಾಡಿರುವುದು ಸರಿಯಲ್ಲ' ಎಂದೂ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನಾನು ಕಾರ್ಯಕರ್ತನಾಗಿದ್ದು, ಶಾಸಕನಾಗಿದ್ದೇನೆ. ಅವರು ತಂದೆಯ ಹೆಸರಲ್ಲಿ ಮತ ಕೇಳಿ ಶಾಸಕರಾದವರು. ಅವರು ಉಡುಪಿ ಜನರ ಬಳಿ ಕ್ಷಮೆ ಯಾಚಿಸಬೇಕು' ಎಂದು ಒತ್ತಾಯಿಸಿದರು.

'ಕಳೆದ ಮೂರು ಮಳೆಗಾಲಗಳಲ್ಲಿ ದಾಖಲೆ ಪ್ರಮಾಣದಲ್ಲಿ ಮಳೆಯಾಗಿದ್ದು, ನಗರ ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು ಕೊಚ್ಚಿಹೋಗಿವೆ. ಸರ್ಕಾರದಿಂದ ಅನುದಾನ ಬಂದಿಲ್ಲ' ಎಂದು ಯಶಪಾಲ್ ಹೇಳಿಕೆ ನೀಡಿದ್ದಾರೆ.

ಕೊಟ್ಟಿಗೆಹಾರ: ಐದು ಮಂದಿಗೆ ಕಚ್ಚಿದ ಹುಚ್ಚು ನಾಯಿ

ಪ್ರಜಾವಾಣಿ ವಾರ್ತೆ



ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಬಣಕಲ್ ಹೋಬಳಿಯ ಕೊಟ್ಟಿಗೆಹಾರದಲ್ಲಿ ಭಾನುವಾರ ಹುಚ್ಚು ನಾಯಿಯೊಂದು ಐವರನ್ನು ಕಚ್ಚಿ ಗಾಯಗೊಳಿಸಿದೆ. ಪಟ್ಟಣದ ಯುವಕರು ನಾಯಿಯನ್ನು ಬೆನ್ನಟ್ಟಿ ಮಧ್ಯಾಹ್ನದ ವೇಳೆಗೆ ಹೊಡೆದು ಕೊಂದಿದ್ದಾರೆ.

ಪಟ್ಟಣದಲ್ಲಿ ಓಡಾಡುತ್ತಿದ್ದ ನಾಯಿ, ಬೇರೆ ನಾಯಿಗಳನ್ನೂ ಕಚ್ಚಿದೆ. ಅರ್ಧ ಗಂಟೆ ಅವಧಿಯಲ್ಲಿ ಐವರಿಗೆ ಕಚ್ಚಿ ಗಾಯಗೊಳಿಸಿದೆ. ಮಹಿಳೆಯೊಬ್ಬರ ಕಾಲಿಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗಾಗಿ ಮೂಡಿಗೆರೆಗೆ ಕಳುಹಿಸಲಾಗಿದೆ.

ಹುಚ್ಚು ನಾಯಿ ದಾಳಿ ಕುರಿತ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿವೆ. ಬೀದಿ ನಾಯಿಗಳನ್ನು ಹಿಡಿದು ಸ್ಥಳಾಂತರಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಸಾರಿಗೆ ನಿಗಮದ ನೌಕರರ ವೇತನ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಸಾರಿಗೆ ನಿಗಮಗಳ ನೌಕರರ ಬೇಡಿಕೆ ಈಡೇರಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಿಗಮಗಳ ಆಡಳಿತ ಮಂಡಳಿ ಮತ್ತು ಕ್ರಿಯಾ ಸಮಿತಿ ಪದಾಧಿಕಾರಿಗಳ ಸಭೆ ನಡೆಯಿತು.

ನೌಕರರ ಹಿಂಬಾಕಿ ನೀಡುವುದು, ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕಳೆದ ಆಗಸ್ಟ್‌ನಲ್ಲಿ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಹೈಕೋರ್ಟ್‌ನ ಸೂಚನೆಯ ಮೇರೆಗೆ ಮುಷ್ಕರ ಕೈಬಿಡಲಾಗಿತ್ತು. ಆ ನಂತರ ಮಾತುಕತೆ ನಡೆಸಿದರೂ 2024 ಜನವರಿ 1ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಮಾಡಲು ಸರ್ಕಾರ ಒಪ್ಪಿಲ್ಲ. 39 ತಿಂಗಳ ಹಿಂಬಾಕಿ ನೀಡಬೇಕಿದ್ದು, 14 ತಿಂಗಳ ಹಿಂಬಾಕಿ ನೀಡಲಷ್ಟೇ ಒಪ್ಪಿದೆ. ಹಿಂಬಾಕಿ ಪೂರ್ಣ ನೀಡಬೇಕು. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕು ಎಂಬ ಒಪ್ಪಂದ ಮುರಿಯಬಾರದು. ಶೇ 25ರಷ್ಟು ವೇತನ ಹೆಚ್ಚಳ ಮಾಡಿ 2024ರಿಂದಲೇ ಜಾರಿ ಮಾಡಬೇಕು ಎಂದು ಪದಾಧಿಕಾರಿಗಳು ಒತ್ತಾಯಿಸಿದರು.

'ನಿಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗುವುದು' ಎಂದು ಸಾರಿಗೆ ಸಚಿವರು ತಿಳಿಸಿದರು.

'ನಮ್ಮ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳದೇ ಇದ್ದರೆ ಅನಿವಾರ್ಯವಾಗಿ ಹೋರಾಟ, ಮುಷ್ಕರ ನಡೆಸಬೇಕಾಗುತ್ತದೆ ಎಂಬುದಾಗಿ ಎಚ್ಚರಿಕೆ ನೀಡಲಾಗಿದೆ' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಧಾನ್ಯ ಮುಹೂರ್ತ



ಶಿರೂರು ಮಠಾಧೀಶ ವೇದವರ್ಧನತೀರ್ಥ ಶ್ರೀಪಾದರ ಪರ್ಯಾಯ ಮಹೋತ್ಸವಕ್ಕೆ ಪೂರ್ವಭಾವಿಯಾಗಿ ಭಾನುವಾರ ಉಡುಪಿ ಶ್ರೀಕೃಷ್ಣ ಮಠದಲ್ಲಿ ನಡೆದ ಧಾನ್ಯ ಮುಹೂರ್ತದ ವೇಳೆ ಭತ್ತದ ಮುಡಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಮೆರವಣಿಗೆ ನಡೆಸಲಾಯಿತು. ಜ.18ರಂದು ಪರ್ಯಾಯ ಮಹೋತ್ಸವ ನಡೆಯಲಿದೆ

'ನೆಹರೂ ಸ್ಟ್ರೀಮ್ ಲ್ಯಾಬ್' ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕ ಭಾಗದ 41 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 'ನೆಹರೂ ಸ್ಟ್ರೀಮ್ ಲ್ಯಾಬ್'ಗಳನ್ನು ಸ್ಥಾಪಿಸಲಾಗುವುದು' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಸಹಯೋಗದಲ್ಲಿ ಜಾರಿಗೊಳ್ಳುತ್ತಿರುವ ಈ ಯೋಜನೆಯು, ವಿದ್ಯಾರ್ಥಿಗಳಿಗೆ ಸಾಂಪ್ರದಾಯಿಕ ವಿಜ್ಞಾನ ಕಲಿಕೆಗಿಂತ ಒಂದು ಹೆಜ್ಜೆ ಮುಂದೆ ಹೋಗಿ, ಭವಿಷ್ಯದ ಅತ್ಯಾಧುನಿಕ ವಿಜ್ಞಾನ ಮತ್ತು ಪರಿಸರ ಸುಸ್ಥಿರತೆಯನ್ನು ಒಳಗೊಂಡ ವಿಶಿಷ್ಟ ಪಠ್ಯಕ್ರಮವನ್ನು ಪರಿಚಯಿಸಲಿದೆ. 'ಸ್ಟ್ರೀಮ್' (ಎಸ್‌ಟಿಆರ್‌ಇಎಂ) ಎಂದರೆ ವಿಜ್ಞಾನ, ತಂತ್ರಜ್ಞಾನ, ರೊಬೊಟಿಕ್ಸ್, ಪರಿಸರ ವಿಜ್ಞಾನ, ಖಗೋಳಶಾಸ್ತ್ರ ಮತ್ತು ಗಣಿತ' ಎಂದು ಅವರು ವಿವರಿಸಿದ್ದಾರೆ.

'ಇದೇ ಮೊದಲ ಬಾರಿಗೆ ಶಾಲಾ ಮಟ್ಟದಲ್ಲಿಯೇ ವಿದ್ಯಾರ್ಥಿಗಳಿಗೆ 'ಕ್ವಾಂಟಮ್ ಫಿಸಿಕ್ಸ್'ನ ಮೂಲಭೂತ ಪರಿಕಲ್ಪನೆಗಳನ್ನು ಪರಿಚಯಿಸಲಾಗುತ್ತಿದೆ. ಇದು ಬ್ರಹ್ಮಾಂಡದ ಮೂಲ ಸ್ವರೂಪದ ಬಗ್ಗೆ ಮಕ್ಕಳಲ್ಲಿ ಕುತೂಹಲ ಮೂಡಿಸಲಿದೆ. ಜೊತೆಗೆ, ಪರಿಸರ ವಿಜ್ಞಾನಕ್ಕೂ ಒತ್ತು ನೀಡುತ್ತಿದ್ದೇವೆ. ದೇಶದಲ್ಲೇ ಮೊದಲ ಬಾರಿಗೆ ಜಾರಿಯಾಗುತ್ತಿರುವ ವಿನೂತನ ಉಪಕ್ರಮವಿದು' ಎಂದಿದ್ದಾರೆ.

'ಈ ಕಾರ್ಯಕ್ರಮದಲ್ಲಿ ಮಕ್ಕಳು ತರಗತಿ ಕೊಠಡಿಯಿಂದ ಹೊರಬಂದು, ತಮ್ಮ ಸುತ್ತಮುತ್ತಲಿನ ಸ್ಥಳೀಯ ಸಸ್ಯ ಮತ್ತು ಪ್ರಾಣಿ ಸಂಕುಲದ ಬಗ್ಗೆ ಪ್ರಾಯೋಗಿಕ ಜ್ಞಾನ ಪಡೆಯಲಿದ್ದಾರೆ. ಎಳೆಯ ವಯಸ್ಸಿನಲ್ಲೇ ಮಕ್ಕಳ ಮನಸ್ಸಿನಲ್ಲಿ ಸುಸ್ಥಿರತೆ ಮತ್ತು ಪರಿಸರ ಕಾಳಜಿ ಬಿತ್ತುವುದು ನಮ್ಮ ಗುರಿ' ಎಂದು ಹೇಳಿದ್ದಾರೆ.

ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್, 'ಮೊದಲ ಹಂತದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಒಟ್ಟು 41 ಶಾಲೆಗಳಲ್ಲಿ ಈ ಲ್ಯಾಬ್‌ಗಳನ್ನು ಆರಂಭಿಸುತ್ತಿದ್ದೇವೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲೂ ನಗರದ ವಿದ್ಯಾರ್ಥಿಗಳಿಗೆ ಸಮಾನವಾದ ವೈಜ್ಞಾನಿಕ ಮನೋಭಾವ ಮತ್ತು ಅವಕಾಶಗಳು ದೊರೆಯಬೇಕು ಎಂಬುದು ನಮ್ಮ ಆಶಯ' ಎಂದಿದ್ದಾರೆ.

ಮುಖ್ಯಾಂಶಗಳು

- ಒಟ್ಟು ₹ 3 ಕೋಟಿ ವೆಚ್ಚದಲ್ಲಿ ಪಠ್ಯಕ್ರಮ
- ರೊಬೊಟಿಕ್ಸ್, ಆಟೊಮೇಷನ್, ಕೋಡಿಂಗ್ ಕೌಶಲ ಕಲಿಕೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವಿಶ್ವವನ್ನು ಬದಲಾಯಿಸುವ ಬಗ್ಗೆ ಪ್ರತಿಯೊಬ್ಬರೂ ಯೋಚಿಸುತ್ತಾರೆ. ಆದರೆ, ತಾವು ಬದಲಾಗುವ ಬಗ್ಗೆ ಯಾರೊಬ್ಬರೂ ಚಿಂತಿಸುವುದಿಲ್ಲ.

–ಲಿಯೊ ಟಾಲ್‌ಸ್ಟಾಯ್

ಸಂಪಾದಕೀಯ

ಸಾಮಾಜಿಕ ಬಹಿಷ್ಕಾರ ತಡೆ ಮಸೂದೆ ತಡವಾದರೂ ಸರಿಯಾದ ದಿಕ್ಕಿನಲ್ಲಿ ಹೆಜ್ಜೆ

ರಾಜ್ಯ ಸರ್ಕಾರವು 'ಕರ್ನಾಟಕ ಸಾಮಾಜಿಕ ಬಹಿಷ್ಕಾರ (ತಡೆ, ನಿಷೇಧ ಮತ್ತು ಪರಿಹಾರ) ಮಸೂದೆ– 2025'ಕ್ಕೆ ಅಕ್ಷರರೂಪ ನೀಡಿ, ಅದನ್ನು ವಿಧಾನಸಭೆಯಲ್ಲಿ ಮಂಡಿಸಿರುವುದು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಇರಿಸಿರುವ ಇನ್ನೊಂದು ಹೆಜ್ಜೆ. ಸಮುದಾಯದ 'ಮರ್ಯಾದೆ' ಹಾಗೂ ಸಮಾಜದಲ್ಲಿ ವಿವಿಧ ವರ್ಗಗಳು ಹೊಂದಿರುವ ಅಘೋಷಿತ ಅಧಿಕಾರವು ಸಾಂವಿಧಾನಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಮತ್ತೆ ಮತ್ತೆ ಮಾಡುತ್ತಲೇ ಇದೆ. ಇಂತಹ ಹೊತ್ತಿನಲ್ಲಿ ಈ ಮಸೂದೆಯು ಕಹಿಸತ್ಯವೊಂದನ್ನು ಒಪ್ಪಿಕೊಳ್ಳುವ ಕೆಲಸ ಮಾಡಿದೆ. ಸಾಮಾಜಿಕ ಬಹಿಷ್ಕಾರವೆಂಬುದು ಜಾತಿ ವ್ಯವಸ್ಥೆಯ ಭಾಗವಾಗಿ, ಹಳೆಯ ಕಾಲದಲ್ಲಿ ಚಾಲ್ತಿಯಲ್ಲಿದ್ದ ಆಚರಣೆಯಷ್ಟೇ ಅಲ್ಲ; ಅದು ರಾಜ್ಯದ ಹಳ್ಳಿಗಳಲ್ಲಿ, ನಗರಗಳಲ್ಲಿ ಇಂದಿಗೂ ತಣ್ಣನೆಯ ಕ್ರೌರ್ಯವನ್ನು ಜೀವಂತ ಆಗಿರಿಸಿರುವ ಅನಿಷ್ಟ ಎಂಬುದನ್ನು ಮಸೂದೆಯು ಗುರುತಿಸಿದೆ. ಸಾಮಾಜಿಕ ಬಹಿಷ್ಕಾರದ ಕೃತ್ಯಗಳನ್ನು 'ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ – 1989' ಅಪರಾಧವೆಂದು ಈಗಾಗಲೇ ಗುರುತಿಸಿರುವಾಗ, ಅದರಲ್ಲೂ ಮುಖ್ಯವಾಗಿ 2015ರ ತಿದ್ದುಪಡಿಯು ಅಪರಾಧ ಕೃತ್ಯಗಳನ್ನು ಬಹಳ ಸ್ಪಷ್ಟವಾಗಿ ವ್ಯಾಖ್ಯಾನಿಸಿರುವಾಗ, ಹೊಸ ಮಸೂದೆಯೊಂದರ ಅಗತ್ಯವೇನಿದೆ ಎಂದು ಕೆಲವರು ಪ್ರಶ್ನಿಸಬಹುದು. ಈ ವಾದಕ್ಕೆ ಉತ್ತರ ಸ್ಪಷ್ಟವಾಗಿದೆ. ಕೇಂದ್ರ ಸರ್ಕಾರ ರೂಪಿಸಿದ ಶಾಸನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರನ್ನು ಮಾತ್ರ ರಕ್ಷಿಸುತ್ತದೆ. ಆದರೆ, ವಾಸ್ತವದಲ್ಲಿ ಬಹಿಷ್ಕಾರವು ಈ ಎರಡು ವರ್ಗಗಳಿಗೆ ಮಾತ್ರ ಸೀಮಿತವಾದುದಲ್ಲ. ಅಂತರ್ಜಾತಿ ಮದುವೆಗಳು, ವೈಯಕ್ತಿಕ ವ್ಯಾಜ್ಯಗಳು, ಗ್ರಾಮ ಮಟ್ಟದ ಶ್ರೇಣೀಕರಣ ವ್ಯವಸ್ಥೆಯನ್ನು ಪ್ರಶ್ನಿಸುವುದು, ವೈಯಕ್ತಿಕ ಸ್ವಾತಂತ್ರ್ಯವನ್ನು ಗಟ್ಟಿಯಾಗಿ ಹೇಳಿಕೊಳ್ಳುವುದು ಕೂಡ ಬಹಿಷ್ಕಾರಕ್ಕೆ ಕಾರಣ ಆಗಬಲ್ಲದು. ಹೀಗಾಗಿ, ಎಲ್ಲ ಸಮುದಾಯಗಳಿಗೂ ರಕ್ಷಣೆ ಒದಗಿಸುವ ಶಾಸನವೊಂದರ ಅಗತ್ಯ ಖಂಡಿತ ಇತ್ತು.



ಸಾಮಾಜಿಕ ಅನಿಷ್ಟದ ರೂಪದಲ್ಲಿರುವ ಹಲವು ಬಗೆಯ ಬಹಿಷ್ಕಾರಗಳನ್ನು ತಡೆಯಬಯಸುವ ಸರ್ಕಾರದ ಉದ್ದೇಶ ಒಳ್ಳೆಯದು. ಆದರೆ, ಇದು ಪ್ರತೀಕಾರದ ಹತಾರವಾಗಿ ಬಳಕೆ ಆಗಬಾರದು.

ಇಂತಹ ಕಾನೂನಿನ ಅಗತ್ಯವನ್ನು ಮಹಾರಾಷ್ಟ್ರವು ದಶಕದ ಹಿಂದೆಯೇ ಗುರುತಿಸಿತು. 2016ರಲ್ಲಿಯೇ ಅದು ಸಾಮಾಜಿಕ ಬಹಿಷ್ಕಾರಕ್ಕೆ ತಡೆಯೊಡ್ಡುವ ಉದ್ದೇಶದ ಕಾನೂನು ರೂಪಿಸಿತು. ಕರ್ನಾಟಕವು ತಡವಾಗಿಯಾದರೂ ಈಗ ಸರಿಯಾದ ಕೆಲಸ ಮಾಡಿದೆ. ಜಾತಿ ಪಂಚಾಯಿತಿಗಳು, ಸ್ಥಳೀಯ ಗುಂಪುಗಳು ಸಂವಿಧಾನ ನೀಡಿರುವ ಹಕ್ಕುಗಳನ್ನು ಮತ್ತು ಪ್ರಭುತ್ವದ ಅಧಿಕಾರವನ್ನು ಬುಡಮೇಲು ಮಾಡಿ ತಮ್ಮ ಆದೇಶವನ್ನು ಹೇಗೆ ಜಾರಿಗೆ ತರುತ್ತಿವೆ ಎಂಬುದನ್ನು ಈಚಿನ ಕೆಲವು ಘಟನೆಗಳು ಹೇಳುತ್ತಿವೆ. ಶಿವಮೊಗ್ಗದಲ್ಲಿ ಅಂತರ್ಜಾತಿ ವಿವಾಹದ ನಂತರದಲ್ಲಿ ಜೋಗಿ ಸಮುದಾಯದ ಕುಟುಂಬವೊಂದಕ್ಕೆ ಬಹಿಷ್ಕಾರ ಹಾಕಲಾಗಿತ್ತು. ಚಿತ್ರದುರ್ಗದಲ್ಲಿ ಅಂಗವಿಕಲ ದಂಪತಿಯನ್ನು ಏಕಾಂಗಿಯಾಗಿಸಿ, ಆ ದಂಪತಿಗೆ ಆಶ್ರಯ ನೀಡಿದ್ದಕ್ಕಾಗಿ ಪತ್ನಿಯ ತಂದೆ–ತಾಯಿಗೆ ದಂಡ ವಿಧಿಸಲಾಗಿದೆ ಎಂದು ವರದಿಯಾಗಿತ್ತು. ಯಾದಗಿರಿಯಲ್ಲಿ ಪೋಕ್ಸೊ ಕಾಯ್ದೆಯ ಅಡಿ ದಾಖಲಿಸಿದ ಪ್ರಕರಣ ಹಿಂಪಡೆಯಲು ನಿರಾಕರಿಸಿದರು ಎಂಬ ಕಾರಣಕ್ಕೆ ಸುಮಾರು 250 ದಲಿತರಿಗೆ ಅಂಗಡಿ, ದೇವಸ್ಥಾನ, ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿರಾಕರಿಸಲಾಗಿತ್ತು. ಇವೆಲ್ಲವೂ ಪ್ರಜೆಗಳ ಘನತೆಯನ್ನು, ಅವರ ಜೀವನೋಪಾಯವನ್ನು ಕಿತ್ತುಕೊಳ್ಳುವ ಉದ್ದೇಶದ ವ್ಯವಸ್ಥಿತ ಪ್ರಯತ್ನಗಳು.

ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಮಸೂದೆಯು ಸಾಮಾಜಿಕ ಬಹಿಷ್ಕಾರವನ್ನು ವ್ಯಾಖ್ಯಾನಿಸಿರುವುದರ ಮಹತ್ವ ಅರ್ಥವಾಗುತ್ತದೆ. ಮಸೂದೆಯು ಸರಿಸುಮಾರು 20 ಬಗೆಯ ಬಹಿಷ್ಕಾರಗಳನ್ನು ಪಟ್ಟಿಮಾಡಿದೆ. ಸಾರ್ವಜನಿಕ ಹಾಗೂ ಧಾರ್ಮಿಕ ಸ್ಥಳಗಳಿಗೆ ಪ್ರವೇಶ ನಿರಾಕರಣೆ, ಸಮುದಾಯ ಜೀವನದಿಂದ ಹೊರಹಾಕುವುದು, ವ್ಯಾಪಾರ ಅಥವಾ ನೌಕರಿಗೆ ಅಡ್ಡಿ ಉಂಟುಮಾಡುವುದು, ಉಡುಗೆ ಅಥವಾ ಭಾಷೆ ಹೀಗೇ ಇರಬೇಕೆಂದು ತಾಕೀತು ಮಾಡುವುದು, ಶವಸಂಸ್ಕಾರಕ್ಕೆ ನಿರ್ಬಂಧ ಹೇರುವುದು ಅಥವಾ ಪೂಜೆಗೆ ಅಡ್ಡಿ ಉಂಟುಮಾಡುವುದು ಬಹಿಷ್ಕಾರದ ರೂಪಗಳಾಗಿ ಪರಿಗಣಿತವಾಗುತ್ತವೆ. ಇವೆಲ್ಲವೂ ಒಂದಲ್ಲ ಒಂದು ಕಡೆಯಲ್ಲಿ ವರದಿಯಾಗಿರುವ ಬಹಿಷ್ಕಾರದ ಬಗೆಗಳು. ಇಂತಹ ಬಹಿಷ್ಕಾರಗಳನ್ನು ವಿಧಿಸುವ ಸ್ಥಳೀಯ ಗುಂಪುಗಳನ್ನು, ಸಭೆಗಳನ್ನು ಕೂಡ ಮಸೂದೆಯು ಶಿಕ್ಷೆಗೆ ಗುರಿಪಡಿಸುವ ಉದ್ದೇಶ ಹೊಂದಿದೆ. ಕಾನೂನು ರೂಪಿಸಿದ ಮಾತ್ರಕ್ಕೆ ಅದರ ಉದ್ದೇಶ ಈಡೇರುವುದಿಲ್ಲ, ಕಾನೂನಿನ ಅನುಷ್ಠಾನವು ಅದರ ಯಶಸ್ಸನ್ನು ತೀರ್ಮಾನಿಸುತ್ತದೆ ಎಂಬುದನ್ನು ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ಸುತ್ತಲಿನ ಅನುಭವವು ಹೇಳುತ್ತದೆ. ಈ ಕಾಯ್ದೆಯ ಅಡಿಯಲ್ಲಿ ಆರೋಪಿಗಳು ಶಿಕ್ಷೆಗೆ ಗುರಿಯಾದ ಪ್ರಮಾಣವು ತೀರಾ ಕಡಿಮೆ ಇದೆ ಎಂಬುದು ಗಮನಾರ್ಹ. ಕಾನೂನಿನ ವಿಚಾರವಾಗಿ ಒಂದಿಷ್ಟು ಎಚ್ಚರಿಕೆಗಳೂ ಅಗತ್ಯ. ಕಾನೂನಿನ ಪ್ರಬಲ ಅಸ್ತ್ರವನ್ನು ಹಗೆ ತೀರಿಸಿಕೊಳ್ಳುವ ಅಥವಾ ಆಯ್ದ ಕೆಲವರನ್ನಷ್ಟೇ ಗುರಿಮಾಡಲು ಇರುವ ಹತಾರವನ್ನಾಗಿ ಪರಿವರ್ತಿಸಲು ಅವಕಾಶ ನೀಡಬಾರದು. ಕಾನೂನಿಗೆ ಅತೀತವಾಗಿ ವರ್ತಿಸುವ ಶಕ್ತಿಕೇಂದ್ರಗಳನ್ನು ಕೊನೆಗೊಳಿಸಲು ಕರ್ನಾಟಕವು ನಿರ್ಣಾಯಕ ಹೆಜ್ಜೆಯೊಂದನ್ನು ಈ ಮಸೂದೆಯ ಮೂಲಕ ಇರಿಸಿದೆ. ಇದು ಕಾನೂನಾಗಿ ಜಾರಿಗೆ ಬಂದ ನಂತರ, ನ್ಯಾಯಸಮ್ಮತ ಮನಸ್ಸಿನಿಂದ ಅನುಷ್ಠಾನಕ್ಕೆ ತಂದರೆ ಸಾಂವಿಧಾನಿಕ ಸಮಾನತೆಯ ಆಶಯ ಸಾಕಾರಗೊಳಿಸಲು ನೆರವಾಗಬಹುದು.

ಜಾಲತಾಣ

ಕನ್ನಡದ ಉಳಿವು



ಕನ್ನಡಿಗರು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಬಲಗೊಳ್ಳದೆ ಈಗಿನಂತೆಯೇ ಹೋರಾಟ ಮುಂದುವರಿಸಿದರೆ, ಸೋಷಿಯಲ್ ಮೀಡಿಯಾದಲ್ಲಿ ಮಾತ್ರ ಕನ್ನಡ ಉಳಿಸಬಹುದು.

ರವಿ ಆಲದಮರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಹಲವಾರು ಸಂಕಷ್ಟ ಎದುರಿಸುತ್ತಿರುವ ರಾಜ್ಯದ ಅನ್ನದಾತರತ್ತ ತಿರುಗಿಯೂ ನೋಡದ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯಕ್ಕೆ ಕ್ಷಮೆ ಇಲ್ಲ. ಇವರ ಆಡಳಿತದ ಅವಧಿಯಲ್ಲಿ 2,809 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ಅತ್ಯಂತ ಆಘಾತಕಾರಿ ಸಂಗತಿ.

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 15-12-2000

• ಸೋಲೊಪ್ಪಿದ ಗೋರ್

ಬೆಂಗಳೂರು, ಡಿ. 14– ಅಮೆರಿಕದ ಅಧ್ಯಕ್ಷ ಆಲ್ ಗೋರ್ ಅಧ್ಯಕ್ಷೀಯ ಚುನಾವಣೆಯಲ್ಲಿ ಇಂದು ಔಪಚಾರಿಕವಾಗಿ ಸೋಲೊಪ್ಪಿಕೊಂಡರು. ಟೆಕ್ಸಾಸ್‌ನ ಗವರ್ನರ್ ಜಾರ್ಜ್ ಡಬ್ಲ್ಯು ಬುಷ್ ಅವರೇ ಮುಂದಿನ ಅಧ್ಯಕ್ಷರು ಎಂದು ಬಣ್ಣಿಸಿದ ಅವರು, ಬುಷ್ ಅವರಿಗೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದರು.

• 'ಸಚಿವರ ರಾಜೀನಾಮೆ ಇಲ್ಲ'

ನವದೆಹಲಿ, ಡಿ. 14– ಎನ್‌ಡಿಎ ಕಾರ್ಯಸೂಚಿಯನ್ನು ತಮ್ಮ ಸರ್ಕಾರ ಅನುಸರಿಸುತ್ತಿದ್ದು, ಅಯೋಧ್ಯೆ ವಿಷಯದಲ್ಲಿ ನ್ಯಾಯಾಲಯದ ತೀರ್ಪಿಗೆ ಬದ್ಧ ಎಂದು ಪ್ರಧಾನಿ ವಾಜಪೇಯಿ ಸ್ಪಷ್ಟಪಡಿಸಿದ ನಂತರ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ಮಂಡಿಸಿದ ನಿಂದನಾ ಗೊತ್ತುವಳಿಯನ್ನು ಸರ್ಕಾರ ಇಂದು ತಿರಸ್ಕರಿಸಿತು. ಚರ್ಚೆಗೆ ಉತ್ತರ ನೀಡಿದ ಪ್ರಧಾನಿ, ನ್ಯಾಯಾಲಯದ ತೀರ್ಪು ಇಲ್ಲವೇ ಹಿಂದೂ ಮತ್ತು ಮುಸ್ಲಿಮ್‌ರ ನಡುವೆ ಒಪ್ಪಂದದಿಂದ ಮಾತ್ರ ಅಯೋಧ್ಯಾ ವಿವಾದ ಇತ್ಯರ್ಥ ಸಾಧ್ಯ, ಬೇರೆ ಪರಿಹಾರವೇ ಇಲ್ಲ ಎಂದರು.

75 ವರ್ಷಗಳ ಹಿಂದೆ


ಶುಕ್ರವಾರ, 15-12-1950

• ಹಿಂದೂ ಕೋಡ್ ಮಸೂದೆ ಬಗ್ಗೆ ಬಿಸಿಬಿಸಿ ಚರ್ಚೆ

ನವದೆಹಲಿ, ಡಿ. 14– ಪಾರ್ಲಿಮೆಂಟ್ ಹಿಂದೂ ಕೋಡ್ ಮಸೂದೆಯನ್ನು ಈ ದಿನ ನಲವತ್ತು ನಿಮಿಷಗಳ ಕಾಲ ಚರ್ಚಿಸಿತು. ಒಂದು ಘಟ್ಟದಲ್ಲಿ ವಾಗ್ಯುದ್ಧವಾಗಿ ಪರಿಣಮಿಸುವಂತೆ ತೋರಿದ ಮಸೂದೆಯ ಚರ್ಚೆಯನ್ನು ಮುಂದೆ ಸರ್ಕಾರ ಗೊತ್ತು ಮಾಡುವಂತೆ ಬಜೆಟ್ ಅಧಿವೇಶನದಲ್ಲಾಗಲೀ, ವಿಶೇಷ ಅಧಿವೇಶನದಲ್ಲಾಗಲೀ ಚರ್ಚಿಸಬಹುದು.

'ಈ ಸಭೆಯಲ್ಲಿ ನಡೆಯುತ್ತಿರುವ ಪ್ರಕರಣಗಳು ಪುನಃ ಸಂಭವಿಸಬೇಕೆಂಬುದು ನನ್ನ ಇಚ್ಛೆಯಲ್ಲ. ಈ ಮಸೂದೆ ಚರ್ಚೆಗೆ ಬಂದಾಗಲೆಲ್ಲ ಅದನ್ನು ಮುಂದೆ ಹಾಕಬೇಕೆಂದು ಯಾರಾದರೊಬ್ಬರು ಸದಸ್ಯರು ನಿರ್ಣಯ ಮಂಡಿಸುತ್ತಾರೆ. ಇದು ನಿಲ್ಲಬೇಕು' ಎಂದು ನ್ಯಾಯಾಂಗ ಸಚಿವ ಬಿ.ಆರ್. ಅಂಬೇಡ್ಕರ್ ಅವರು ಹೇಳಿದರು.

'ಕೈ' ಕಾಳಗ: ನಿಲ್ಲೋದು ಯಾವಾಗ?



ಗತಿಬಿಂಬ

ವೈ.ಗ. ಜಗದೀಶ್

'ಕಾಲಲ್ಲಿ ಕಟ್ಟಿದ ಗುಂಡು, ಕೊರಳಲ್ಲಿ ಕಟ್ಟಿದ ಬೆಂಡು, ತೇಲಲೀಯದು ಗುಂಡು, ಮುಳುಗಲೀಯದು ಬೆಂಡು, ಇಂತಪ್ಪ ಸಂಸಾರ ಶರಧಿಯ ದಾಟಿಸಿ ಕಾಲಾಂತಕನೆ ಕಾಯೋ, ಕೂಡಲಸಂಗಮದೇವಾ' ಎನ್ನುವ ಬಸವಣ್ಣನವರ ವಚನವು ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ಹೇಳಿ ಮಾಡಿಸಿದಂತಿದೆ.

ಆಡಳಿತಾರೂಢ ಕಾಂಗ್ರೆಸ್ 'ಸಂಸಾರ'ದಲ್ಲಿ ತಾವು ಸಹೋದರರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೊಳ್ಳುವುದುಂಟು. ಈರ್ವರ ವರ್ತನೆ ನೋಡಿದರೆ ಅವರದ್ದು 'ದಾಯಾದಿ ಕಲಹ' ಎಂಬುದೇ ಸೂಕ್ತ. ಅವರಲ್ಲಿ ಒಬ್ಬರು ಗುಂಡು, ಮತ್ತೊಬ್ಬರು ಬೆಂಡು ಕಟ್ಟಿಕೊಂಡಿದ್ದು ಸರ್ಕಾರವನ್ನು ತೇಲಲೂ ಬಿಡುತ್ತಿಲ್ಲ, ಮುಳುಗಲೂ ಬಿಡುತ್ತಿಲ್ಲ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ವೇಳೆ, ಎರಡೂವರೆ ವರ್ಷದ 'ಅಧಿಕಾರ ಹಂಚಿಕೆ ಸೂತ್ರ' ನಡೆದಿತ್ತು ಎಂದು ಶಿವಕುಮಾರ್ ಬಣ ಹೇಳುತ್ತಲೇ ಬರುತ್ತಿದೆ. 'ನನ್ನ ಮತ್ತು ಸಿದ್ದರಾಮಯ್ಯ ಮಧ್ಯೆ ಏನು ಮಾತುಕತೆಯಾಗಿದೆ ಎಂದು ಸಮಯ ಬಂದಾಗ ಹೇಳುವೆ' ಎಂದು ಶಿವಕುಮಾರ್ ಒಮ್ಮೆ ಹೇಳಿದ್ದುಂಟು. ಈ ಒಪ್ಪಂದ ಏನೂ ನಡೆದೇ ಇಲ್ಲ ಎಂದು ಸಿದ್ದರಾಮಯ್ಯ ಬಣ ವಾದ ಮುಂದಿಡುತ್ತಲೇ ಇದೆ. ಹೀಗಾಗಿಯೇ, ಸರ್ಕಾರಕ್ಕೆ ಎರಡೂವರೆ ವರ್ಷ ತುಂಬುವ ಹೊತ್ತಿಗೆ ನಾಯಕತ್ವದ ಕಚ್ಚಾಟ ಬೀದಿಗೆ ಬಂದಿತ್ತು. ನಾಯಕರಿಬ್ಬರು ಈ ಬಗ್ಗೆ ಮಾತನಾಡದಿದ್ದರೂ, ಅವರ ಬೆಂಬಲಿಗರು ದಿನವೂ ವಾಗ್ಬಾಣಗಳನ್ನು ಬಿಡುತ್ತಲೇ ಇದ್ದರು. ಆದರೆ, ಶಿವಕುಮಾರ್ ಬಣ ಬಿಟ್ಟ ಬಾಣ ಗುರಿ ತಲಪಲೇ ಇಲ್ಲ.

ಈ ಎಲ್ಲ ಬೆಳವಣಿಗೆಗಳನ್ನು ಕಂಡ ಕಾಂಗ್ರೆಸ್ ಹೈಕಮಾಂಡ್, 'ಉಪಾಹಾರ ಕೂಟ ನಡೆಸಿ ಒಗ್ಗಟ್ಟು ಪ್ರದರ್ಶಿಸಿ' ಎಂದು ಇಬ್ಬರು ನಾಯಕರಿಗೆ ಸೂಚಿಸಿತು. ಇಬ್ಬರೂ, ಇಡ್ಲಿ–ವಡೆ, ನಾಟಿಕೋಳಿ ಸವಿದು ತಮ್ಮಿಬ್ಬರಲ್ಲಿ ಭಿನ್ನಭೇದವೇ ಇಲ್ಲ ಎಂದು ಸಾರುವ ಯತ್ನ ಮಾಡಿದರು. ಬೆಳಗಾವಿಯಲ್ಲಿ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದ ಹೊತ್ತಿಗೆ, ಈ ಒಗ್ಗಟ್ಟು ನೀರ ಮೇಲಣ ಗುಳ್ಳೆಯಂತಾಯಿತು. ಮತ್ತೆ, ನಾಯಕತ್ವ ಬದಲಾವಣೆಯ ಬಿರುಗಾಳಿ ಎದ್ದಿದ್ದು. ಬಣಗಳ ಶಕ್ತಿ ಪ್ರದರ್ಶನಗಳ ಸರಣಿಯೂ ಶುರುವಾಗಿದೆ.

'ಜನವರಿಯಲ್ಲೇ ಶಿವಕುಮಾರ್ ಪಟ್ಟಾಭಿಷೇಕ' ಎಂದು ಅವರ ಅತ್ಯಾಪ್ತ ಗುಂಪು ಪ್ರತಿಪಾದಿಸುತ್ತಿದೆ. 'ಸಿದ್ದರಾಮಯ್ಯ ಅವಧಿ ಪೂರ್ಣಗೊಳಿಸುತ್ತಾರೆ' ಎಂದು ವಾದಿಸುತ್ತಿದೆ ಅವರ ಆಪ್ತಗಣ. ಇವೆಲ್ಲವನ್ನೂ ಗಮನಿಸಿದರೆ 'ಕೈ' ಕಾಳಗ ನಿಲ್ಲುವ ಲಕ್ಷಣ ಸದ್ಯಕ್ಕೆ ಗೋಚರಿಸುತ್ತಿಲ್ಲ.

ಏತನ್ಮಧ್ಯೆ, ದೆಹಲಿಯಲ್ಲಿ ಸಭೆ ಸೇರಿದ್ದ ಆ ಪಕ್ಷದ ವರಿಷ್ಠರು ರಾಜ್ಯದ ವಿದ್ಯಮಾನಗಳ ಚರ್ಚೆ ನಡೆಸಿದ್ದಾರೆ. ಸಂಸತ್ ಹಾಗೂ ವಿಧಾನಮಂಡಲ ಅಧಿವೇಶನ ಮುಗಿದ ಬಳಿಕ ಮತ್ತೊಂದು ಸುತ್ತಿನ ಮಾತುಕತೆಯನ್ನು ವರಿಷ್ಠರು ನಡೆಸಲಿದ್ದು, ರಾಜ್ಯದ ಅಂತರ್ಯುದ್ಧಕ್ಕೆ ಇತಿಶ್ರೀ ಹಾಡುವ ಸಾಧ್ಯತೆ ಇದೆ. ಅದು ಯಾವಾಗ ನಡೆಯಲಿದೆ ಎಂಬುದು ಯಕ್ಷಪ್ರಶ್ನೆ.

ಒಂದು ಕಾಡಿನಲ್ಲಿ ಒಂದು ಪಳಗಿದ ಹುಲಿ ಮತ್ತು ಹಸಿದ ಹುಲಿ ಇದ್ದವಂತೆ. ಪಳಗಿದ ಹುಲಿಗೆ ತನ್ನ ಬೇಟೆ ಯಾವುದು, ಯಾವಾಗ ಹೊಂಚು ಹಾಕಿ ಎರಗಿದರೆ ಸಲೀಸಾಗಿ ಹಿಡಿಯಬಹುದು, ಅದಕ್ಕೆ ಬೇಕಾದ ತಯಾರಿಯೇನು ಎಂಬುದು ಚೆನ್ನಾಗಿ ಅರಿವಿತ್ತು. ಅನುಭವ ಇಲ್ಲದ ಹುಲಿ, ಹಸಿದಾಗೆಲ್ಲ ಬೇಟೆಯ ಬೆನ್ನು ಹತ್ತುವುದು, ತಪ್ಪಿಸಿಕೊಳ್ಳುವ ಜಾಣ್ಮೆ ಕಲಿತಿದ್ದ ಬೇಟೆಗಳು ಪ್ರತಿಬಾರಿಯೂ ಯಾಮಾರಿಸುವುದನ್ನು ಮಾಡುತ್ತಿದ್ದವಂತೆ. ಹಸಿದ ಹುಲಿ ಪಳಗುವ ಕಲೆಗಾರಿಕೆಯನ್ನು ಕಲಿಯುವ ಬದಲು, ಬೇಟೆಯತ್ತಲೇ ದೃಷ್ಟಿನೆಟ್ಟು ಕುಳಿತಿದ್ದರಿಂದ, ಪಳಗಿದ ಹುಲಿ ಮೇಲುಗೈ ಸಾಧಿಸುತ್ತಿತ್ತಂತೆ. ರಾಜ್ಯ ರಾಜಕಾರಣಕ್ಕೂ ಈ ಕತೆ ಹೊಂದಿಕೆ ಆಗುವಂತಿದೆ. ಅನುಭವದಿಂದ ಮಾಗಿರುವ ಸಿದ್ದರಾಮಯ್ಯ ಸಾಮಾನ್ಯಕ್ಕೆ ಬಗ್ಗುವ ಜಾಯಮಾನದವರಲ್ಲ. ಸಿಕ್ಕಿದ ಅಧಿಕಾರವನ್ನು ಬಿಟ್ಟುಕೊಡಲು ಯಾರೂ ತಯಾರಿರುವುದಿಲ್ಲ. ರಾಮಕೃಷ್ಣ ಹೆಗಡೆ, ದೇವೇಗೌಡರ ಗರಡಿಯಲ್ಲಿ ಸಾಮು ಮಾಡಿದ ಸಿದ್ದರಾಮಯ್ಯ ತಮ್ಮ ಬತ್ತಳಿಕೆಯಲ್ಲಿ ಅಸ್ತ್ರಗಳನ್ನು ರಹಸ್ಯವಾಗಿರಿಸಿಕೊಂಡಿದ್ದಾರೆ.

ರಾಹುಲ್ ಗಾಂಧಿ ಎಂದಿಗೂ ಕೈಬಿಡುವುದಿಲ್ಲ

ಭಿನ್ನಮತವನ್ನು ಶಮನಗೊಳಿಸುವುದು ಉಪಾಹಾರದ ಮದ್ದಿಗೆ ಸಾಧ್ಯವಾಗಿಲ್ಲ. ಅಧಿವೇಶನ ನಡೆಯುತ್ತಿರುವಾಗಲೇ ಕಾಂಗ್ರೆಸ್ ಪಕ್ಷದೊಳಗಿನ ಅಧಿಕಾರದ ಕಿತ್ತಾಟವೂ ಚುರುಕಾಗಿದೆ. ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಣಗಳು ತಮ್ಮ ನಾಯಕರ ಪರವಾಗಿ ಶಕ್ತಿ ಪ್ರದರ್ಶನದಲ್ಲಿ ತೊಡಗಿವೆ

ಎಂಬ ಅಪಾರ ವಿಶ್ವಾಸದಲ್ಲಿರುವ ಅವರು ಮೌನವಾಗಿದ್ದಾರೆ. ಶಿವಕುಮಾರ್ ಅವರ ಬಣ ಶಕ್ತಿಪ್ರದರ್ಶನಕ್ಕೆ ಮುಂದಾಗಿ ಯಡವಟ್ಟು ಮಾಡಿಕೊಳ್ಳಲಿ ಎಂಬ ಕಾರಣಕ್ಕೆ ತಮ್ಮ ಮಗ ಯತೀಂದ್ರ ಅವರನ್ನು ಮುಂದೆ ಬಿಟ್ಟು, ಪದೇಪದೆ ಶಿವಕುಮಾರ್ ಅವರನ್ನು ಕೆರಳಿಸುತ್ತಿದ್ದಾರೆ. ಸಿಟ್ಟಿಗೆ ಕೈಕೊಟ್ಟವ ಎಡವಿ ಬೀಳುತ್ತಾನೆ ಎಂದವರು ನಂಬಿದಂತಿದೆ. ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರ ದಾಖಲೆಯನ್ನು ಮುರಿಯಬೇಕೆಂಬ ತವಕದಲ್ಲಿರುವ ಸಿದ್ದರಾಮಯ್ಯ, ಅದನ್ನು ಮುಂದಿಟ್ಟು ಫೆಬ್ರುವರಿ ವರೆಗೆ ತಮ್ಮ ಅವಧಿ ವಿಸ್ತರಿಸಿಕೊಳ್ಳುವ ಲೆಕ್ಕದಲ್ಲಿದ್ದಾರೆ. ಅದು ಮುಗಿದ ನಂತರ, ಬಜೆಟ್ ಮಂಡಿಸಿ ಹೋಗುವೆ ಎಂಬ ಅಸ್ತ್ರವನ್ನೂ ಪ್ರಯೋಗಿಸುವ ಸಂಭವ ಇದೆ.

ಸಿದ್ದರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ ತುಂಬಾ ಮಹತ್ವಾಕಾಂಕ್ಷೆಯಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡಿಸಿದ್ದರು. ಅದನ್ನು ಸ್ವೀಕರಿಸಲು ಪ್ರಬಲ ಜಾತಿಯವರು ಬಿಡಲಿಲ್ಲ. ಎರಡನೇ ಬಾರಿ ಮುಖ್ಯಮಂತ್ರಿಯಾದ ಬಳಿಕ ವರದಿಯನ್ನು ಅಂಗೀಕರಿಸುವ ತಯಾರಿ ನಡೆಸಿದ್ದರು. ಆಗಲೂ ಹೈಕಮಾಂಡ್ ಮೇಲೆ ಒತ್ತಡ ಹಾಕಿದ ಪ್ರಬಲ ಜಾತಿಯವರು ಅದಾಗದಂತೆ ನೋಡಿಕೊಂಡರು. ಸಚಿವ ಸಂಪುಟದಲ್ಲಿಟ್ಟು ನಿರ್ಣಯ ತೆಗೆದುಕೊಳ್ಳಲು ದಿನಾಂಕವನ್ನೂ ಗೊತ್ತು ಮಾಡಿದ್ದರು. ಅದರ ಹಿಂದಿನ ದಿನ ದೆಹಲಿಗೆ ಕರೆಯಿಸಿಕೊಂಡ ವರಿಷ್ಠರು, ಅನುಮೋದನೆಗೆ ತಡೆಯೊಡ್ಡಿದರು. ಹೊಸದಾಗಿ ಸಮೀಕ್ಷೆ ನಡೆಸಲು ಸೂಚನೆ ಇತ್ತರು. ಒಲ್ಲದ ಮನಸ್ಸಿನಿಂದಲೇ ಒಪ್ಪಿಕೊಂಡಿದ್ದ ಅವರು, ಮರು ಸಮೀಕ್ಷೆ ನಡೆಸಿದರು.

ಇಡೀ ದೇಶದಲ್ಲಿಯೇ ಜಾತಿ ಜನಗಣತಿ ನಡೆಯಬೇಕೆಂದು ಕೇಂದ್ರದ ಮೇಲೆ ಒತ್ತಡ ಹಾಕಿದ ರಾಹುಲ್ ಗಾಂಧಿ, ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ಅವರ ವಾದವನ್ನೇ ಮುಂದು ಮಾಡಿ, ನೀವು ಹೇಳಿದಂತೆ ರಾಜ್ಯದಲ್ಲಿ ಸಮೀಕ್ಷೆ ಮುಗಿದಿದ್ದು, ಅದನ್ನು ಅಂಗೀಕರಿಸಿ ಹೋಗಲು ಸಮಯಾವಕಾಶ ಬೇಕು ಎಂದು ರಾಹುಲ್ ಅವರನ್ನು ಮನವೊಲಿಸುವ ದಾರಿಯನ್ನೂ ಸಿದ್ದರಾಮಯ್ಯ ಕಾಯ್ದಿರಿಸಿಕೊಂಡಿದ್ದಾರೆ. ತಮಗೆ ಅನುಕೂಲ ಎನಿಸುವವರೆಗೆ ವರದಿ ಸಿದ್ಧಪಡಿಸುವುದನ್ನು ಮುಂದೂಡಲು ಬೇಕಾದ ವಿಶ್ವಾಸಾರ್ಹ ಅಧಿಕಾರಿಯನ್ನು ಆಯೋಗದಲ್ಲಿ ಕೂರಿಸಿಕೊಂಡಿದ್ದಾರೆ.


ಇದರ ಜತೆಗೆ, ಬೆಳಗಾವಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗೆ ಬೇಕಾದ ಎಲ್ಲ ತಯಾರಿಯನ್ನು ಮುಂದಿನ ಏಪ್ರಿಲ್‌ನೊಳಗೆ ಮಾಡಿಕೊಳ್ಳಬೇಕು ಎಂದು ಸಚಿವರಿಗೆ ಸೂಚನೆ ನೀಡಿದ್ದಾರೆ. ಈ ಚುನಾವಣೆಯನ್ನು ಬಹುಕಾಲ ಎಳೆಯಲಿಕ್ಕೆ ನ್ಯಾಯಾಲಯವೂ ಬಿಡುವುದಿಲ್ಲ. ತಮಗೆ ಬೇಕಾದ ಅಧಿಕಾರಿಯೊಬ್ಬರನ್ನು ಸಿದ್ದರಾಮಯ್ಯನವರೇ ಆಯೋಗದ ಆಯುಕ್ತರ ಹುದ್ದೆಯಲ್ಲಿ ನೇಮಿಸಿದ್ದಾರೆ. ಇದರ ಬೆನ್ನಲ್ಲೇ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಪಾಲಿಕೆಗಳಿಗೂ ಚುನಾವಣೆ ನಡೆಸಬೇಕಿದೆ. ಒಮ್ಮೆ ಚುನಾವಣೆ ಪರ್ವ ಆರಂಭವಾಯಿತೆಂದರೆ, ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ ಎಲ್ಲವೂ ಬದಿಗೆ ಸರಿದು ಕೂರುತ್ತವೆ.

ನೆರೆಯ ರಾಜ್ಯಗಳಾದ ತಮಿಳುನಾಡು ಹಾಗೂ ಕೇರಳ ವಿಧಾನಸಭೆಗಳಿಗೆ ಮುಂದಿನ ವರ್ಷದ ಮೇ ತಿಂಗಳೊಳಗೆ ಚುನಾವಣೆ ನಡೆಯಬೇಕಿದೆ. ಕೇರಳದಲ್ಲಿ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಇದೆ. ದಕ್ಷಿಣ ರಾಜ್ಯಗಳ ಚುನಾವಣೆಯ ಹೊತ್ತಿಗೆ ಅಹಿಂದ ನಾಯಕರೊಬ್ಬರ ಕುರ್ಚಿಯನ್ನು ಅಲುಗಾಡಿಸುವ ಧೈರ್ಯವನ್ನು ರಾಹುಲ್ ಮಾಡಲಾರರು ಎಂಬ ತರ್ಕವೂ ಸಿದ್ದರಾಮಯ್ಯ ಬಣದ್ದಾಗಿದೆ. ಹಾಗೊಂದು ವೇಳೆ, ಬದಲಿಸುವ ಅನಿವಾರ್ಯ ಹೆಜ್ಜೆಯನ್ನಿಟ್ಟರೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲವೂ ನಿರ್ಧಾರವಾಗಲಿ ಎಂಬ ಆಟವೂ ಶುರುವಾಗಬಹುದು. ಆಗಿನ ರಾಜಕಾರಣ ಭಿನ್ನ ಆಯಾಮಗಳನ್ನು ಪಡೆಯುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಶಿವಕುಮಾರ್ ನೆಮ್ಮದಿಯ ನಿದ್ದೆಯಲ್ಲಿ ಇಲ್ಲ. ಇದೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಬೇಕೆಂಬ ಪಣ ತೊಟ್ಟಿರುವ ಅವರು ತಮ್ಮ ದಾಳಗಳನ್ನು ಉರುಳಿಸುತ್ತಿದ್ದಾರೆ. ಹೈಕಮಾಂಡ್ ರಕ್ಷಣೆಗೆ ನಿಂತಿದ್ದಕ್ಕೆ ಜೈಲುವಾಸ ಅನುಭವಿಸಿದ್ದನ್ನು ಮುಂದಿಟ್ಟುಕೊಂಡು ಸೋನಿಯಾಗಾಂಧಿ ಮತ್ತು ಪ್ರಿಯಾಂಕ ಗಾಂಧಿ ಆಶೀರ್ವಾದ ಪಡೆಯುವ ಉಮೇದಿನಲ್ಲಿದ್ದಾರೆ. ಅದು ಸದ್ಯವೇ ಸಂಭವಿಸಲಿದೆ ಎಂಬ ವಿಶ್ವಾಸವೂ ಅವರದ್ದಾಗಿದೆ. 'ಮುಖ್ಯಮಂತ್ರಿಯಾಗಲು ಸಂಖ್ಯಾಬಲಕ್ಕಿಂತ ಹೈಕಮಾಂಡ್ ತೀರ್ಮಾನವೇ ಮುಖ್ಯ' ಎಂದು ಅವರ ಆಪ್ತ ಶಾಸಕ ಇಕ್ಬಾಲ್ ಹುಸೇನ್ ಹೇಳುತ್ತಲೇ ಬಂದಿದ್ದಾರೆ. ಶಾಸಕರ ಬಲ ಕ್ರೋಡೀಕರಣಕ್ಕೆ ಶಿವಕುಮಾರ್ ಶ್ರಮ ಹಾಕುತ್ತಲೇ ಇದ್ದರೂ ಅದು ನಿರೀಕ್ಷಿತ ಸಂಖ್ಯೆ ತಲುಪಿಲ್ಲ.

ಸೈದ್ಧಾಂತಿಕ ಸ್ಪಷ್ಟತೆ ಇರುವ ರಾಹುಲ್ ಗಾಂಧಿ, ಆರ್‌ಎಸ್‌ಎಸ್, ಅಂಬಾನಿ–ಅದಾನಿಯ ವಿರೋಧವನ್ನು ಒಂದು ತಪಸ್ಸಿನಂತೆ ಪಾಲಿಸುತ್ತಿದ್ದಾರೆ. ವಿಧಾನಸಭೆಯಲ್ಲಿಯೇ ಆರ್‌ಎಸ್‌ಎಸ್ ಧ್ಯೇಯ ಗೀತೆ ಹಾಡಿದ್ದ ಶಿವಕುಮಾರ್, ಅಂಬಾನಿ ಮಗನ ಮದುವೆಯಲ್ಲಿಯೂ ಪಾಲ್ಗೊಂಡಿದ್ದರು. ಇದು ಕೂಡ, ರಾಹುಲ್ ಒಲವು ಗಳಿಸಿಕೊಳ್ಳುವಲ್ಲಿ ಅವರಿಗೆ ಅಡ್ಡಗೋಡೆಯಾಗಿ ಪರಿಣಮಿಸಿದೆ.

ಪಕ್ಷ ನಿಷ್ಠೆ, ಹೈಕಮಾಂಡ್ ರಕ್ಷಣೆಗಾಗಿ ತಾನು ಜೈಲಿಗೆ ಹೋಗಿದ್ದನ್ನು ಸೋನಿಯಾಗಾಂಧಿ ಪರಿಗಣಿಸಿ ತಮ್ಮ ಕೈಹಿಡಿಯಲಿದ್ದಾರೆ ಎಂಬ ಅಪರಿಮಿತ ನಂಬುಗೆ ಶಿವಕುಮಾರ್ ಅವರದ್ದಾಗಿದೆ. ರಾಜ್ಯ ಕಾಂಗ್ರೆಸ್ ವಿಷಯದಲ್ಲಿ ಸೋನಿಯಾ ಮತ್ತು ರಾಹುಲ್ ಪೈಕಿ ಯಾರ ಕೈ ಮೇಲಾಗುತ್ತದೆ ಎಂಬುದರ ಮೇಲೆ ರಾಜ್ಯ ಸರ್ಕಾರದ ಭವಿಷ್ಯದ ನಾಯಕತ್ವ ನಿರ್ಧಾರವಾಗಲಿದೆ. ಅಧಿಕಾರ ಹಂಚಿಕೆ ಗೊಂದಲದಿಂದಾಗಿ ಸರ್ಕಾರ ಗಾಳಿಪಟವಾಗಿದೆ. ಆಡಳಿತ ಯಂತ್ರ ಕುಸಿದುಬಿದ್ದಿದೆ. ಈ ಹೊತ್ತಿಗೆ ಸರ್ಕಾರವನ್ನು ನೇರ್ಪುಗೊಳಿಸುವ ಹೊಣೆ ರಾಹುಲ್ ಮೇಲಿದೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ನಾಯಕತ್ವ ಪರೀಕ್ಷೆ ಅಂತಿಮವಾಗಿ ಇತ್ಯರ್ಥವಾಗಬೇಕಾದುದು ಶಾಸಕಾಂಗ ಪಕ್ಷದ ಸಭೆಯಲ್ಲಿಯೇ ಎಂಬುದು ಬಾಬಾಸಾಹೇಬರು ಕೊಟ್ಟ ಸಂವಿಧಾನದ ಆಶಯ.



ವಾಚಕರ ವಾಣಿ

ಸರ್ಕಾರಿ ಆಸ್ಪತ್ರೆ: ಉಚಿತ ಔಷಧಿ ನೀಡಲಿ

ಸರ್ಕಾರಿ ಆಸ್ಪತ್ರೆಗಳ ಎದುರು ಜನೌಷಧಿ ಕೇಂದ್ರಗಳನ್ನು ರದ್ದು ಮಾಡಿದ್ದನ್ನು ಹಿಂಪಡೆಯುವಂತೆ ಹೈಕೋರ್ಟ್ ಆದೇಶಿಸಿರುವುದಕ್ಕೆ, ವಿರೋಧ ಪಕ್ಷಗಳ ಶಾಸಕರುಗಳು ವಿಚಿತ್ರವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯನ್ನು ಸಹಿಸಲಾರದೆ ಕಾಂಗ್ರೆಸ್ ಸರ್ಕಾರ ಆ ಅಂಗಡಿಗಳನ್ನು ಮುಚ್ಚಿತ್ತು ಎಂದು ಹೇಳುತ್ತಿರುವ ಆ ಶಾಸಕರು ಒಂದು ವಿಷಯ ಅರಿಯಬೇಕು. ಜನರಿಕ್ ಔಷಧಿ ಅಂಗಡಿಗಳನ್ನು ಆಂಭಿಸಿದ್ದು ಮೋದಿಯವರಲ್ಲ, ಅವರಿಗಿಂತ ಹಿಂದಿನ ಮನಮೋಹನ್ ಸಿಂಗ್ ಸರ್ಕಾರ!

ಸರ್ಕಾರಿ ಆಸ್ಪತ್ರೆಗಳ ಎದುರು ಅಥವಾ ಆವರಣದೊಳಗೆ ಇರುವ ಅಂಗಡಿಗಳನ್ನು ಮುಚ್ಚಿಸಿದ್ದು ದ್ವೇಷ ಅಥವಾ ಅಸಹನೆಯಿಂದಲ್ಲ, ಸಂಘಟನೆಗಳ ಒತ್ತಾಯಕ್ಕೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳು ಉಚಿತವಾಗಿ ಸಿಗುತ್ತವೆ ಎಂದು ಹೇಳಿಕೊಳ್ಳುತ್ತ ಆಸ್ಪತ್ರೆಯ ಆವರಣದಲ್ಲೇ ಔಷಧಿ ಅಂಗಡಿಗಳನ್ನು ಇಟ್ಟಿರುವುದೇಕೆ ಎಂದು ಸಂಘಟನೆಗಳು ಪ್ರಶ್ನೆ ಮಾಡಿದ್ದವು. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧಗಳನ್ನು ಕೊಡಬೇಕೆಂದು ಅವುಗಳ ಒತ್ತಾಯವಿತ್ತು. ಆದರೆ, ಸರ್ಕಾರ ಜನರಿಕ್ ಔಷಧಿ ಅಂಗಡಿಗಳನ್ನು ಮುಚ್ಚಿಸಿತ್ತೇ ಹೊರತು, ಆಸ್ಪತ್ರೆಯೊಳಗಡೆ ಉಚಿತವಾಗಿ ಔಷಧಗಳು ಲಭ್ಯವಾಗುವಂತೆ ಮಾಡಲಿಲ್ಲ. ಇದು ವಿಷಯ. ಈಗಲೂ ಸರ್ಕಾರಕ್ಕೆ ನಮ್ಮ ಒತ್ತಾಯ ಇದ್ದೇ ಇದೆ: ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧಗಳನ್ನು ಕೊಡಿ.

ಶಾರದಾ ಗೋಪಾಲ, ಧಾರವಾಡ

ನಿಶ್ಶಕ್ತಗೊಳ್ಳುತ್ತಿವೆ ದೇಶದ ಶಕ್ತಿಕೇಂದ್ರಗಳು

ಸರ್ಕಾರಿ ಶಾಲೆಗಳು ದೇಶದ ಭವಿಷ್ಯವನ್ನು ರೂಪಿಸುವ, ನಿರ್ಣಯಿಸುವ ಶಕ್ತಿಕೇಂದ್ರಗಳು. ದುರಂತವೆಂದರೆ, ಈವರೆಗಿನ ಎಲ್ಲ ಸರ್ಕಾರಗಳೂ ಸರ್ಕಾರಿ ಶಾಲೆಗಳನ್ನು ಕಡೆಗಣಿಸಿವೆ. ಇದರ ಫಲವಾಗಿಯೇ ಶಾಲೆಗಳು ನಿರಂತರವಾಗಿ ಮುಚ್ಚುತ್ತಿವೆ; ಬಡ ಮಕ್ಕಳ ಭವಿಷ್ಯವೂ ಮುಕ್ಕಾಗುತ್ತಿದೆ. ಈಗ ಉಳಿದಿರುವ ಶಾಲೆಗಳು ಶಿಕ್ಷಕರ ಕೊರತೆ ಮತ್ತು ಮೂಲ ಸೌಕರ್ಯಗಳಿಲ್ಲದೆ ಉಸಿರುಗಟ್ಟಿವೆ. ಜರೂರು ಸುಧಾರಣೆ ಮಾಡದೆ ಹೋದರೆ ಸಾಮಾಜಿಕ ಅಸಮಾನತೆ ಇನ್ನಷ್ಟು ಹೆಚ್ಚಾಗುತ್ತದೆ.

ಸಿದ್ದಣ್ಣ ಪೂಜಾರಿ, ಯಾದಗಿರಿ

ಶಿಕ್ಷಕರ ಜೀವನಕ್ಕೆ ಸರ್ಕಾರದಿಂದ ಕಲ್ಲು

ಯುಜಿಸಿಯ ಮಾನದಂಡಗಳ ಪ್ರಕಾರ ಈವರೆಗೆ ಕಾರ್ಯ ನಿರ್ವಹಿಸುತ್ತಿದ್ದ ಸಾವಿರಾರು ಶಿಕ್ಷಕರನ್ನು ಸರ್ಕಾರ ಸೇವೆಯಿಂದ ಹೊರಗಿಟ್ಟಿದೆ. ಹಲವು ವರ್ಷಗಳಿಂದ ಕನಿಷ್ಠ ಸಂಭಾವನೆಗೆ ದುಡಿಯುತ್ತಿದ್ದವರನ್ನು ಬೀದಿಪಾಲು ಮಾಡಿದೆ. ಇದು ಮಾನವೀಯತೆಯೆ? ಈವರೆಗೆ ಕಡಿಮೆ ಸಂಬಳಕ್ಕೆ ದುಡಿಸಿಕೊಂಡ ಶಿಕ್ಷಕರ ಬಗ್ಗೆ ಸರ್ಕಾರಕ್ಕೆ ಯಾವುದೇ ಉತ್ತರದಾಯಿತ್ವ ಇಲ್ಲವೇ? ಶಿಕ್ಷಕರ ಅನುಭವಕ್ಕೆ ಬೆಲೆ ಇಲ್ಲವೇ?

ಉತ್ತಮ ಶಿಕ್ಷಣ ಎಷ್ಟು ಮುಖ್ಯವೋ ಉತ್ತಮ ಶಿಕ್ಷಕರೂ ಅಷ್ಟೇ ಮುಖ್ಯ ಎನ್ನುವುದನ್ನು ಸರ್ಕಾರ ಮರೆತಂತಿದೆ. ಸೇವಾ ಅನುಭವ ಇರುವ ಶಿಕ್ಷಕರನ್ನು ಉಳಿಸಿಕೊಳ್ಳುವ ದಾರಿಗಳ ಬಗ್ಗೆ ಯೋಚಿಸದೆ ಹೋದರೆ, ಸರ್ಕಾರವನ್ನು ಹೃದಯಶೂನ್ಯ ಎಂದೇ ಭಾವಿಸಬೇಕಾಗುತ್ತದೆ. ಮೌಲ್ಯಾಧಾರಿತ ಶಿಕ್ಷಣದ ಕೊರತೆ ಎದ್ದುಕಾಣಿಸುತ್ತಿರುವ ಸಂದರ್ಭದಲ್ಲಿ, ಅದನ್ನು ಮತ್ತಷ್ಟು ಹೆಚ್ಚು ಮಾಡುವ ನಡವಳಿಕೆ ಸರ್ಕಾರದ್ದಾಗಬಾರದು.

ಶ್ರೀಧರ ವಂದಾಲ, ಬೆಳಗಾವಿ

ಸರ್ಕಾರದಿಂದ ಕ್ರೀಡಾಭಿಮಾನಿಗಳ ತುಳಿತ

ಭಾರತ ಪ್ರವಾಸದಲ್ಲಿರುವ ಫುಟ್ಬಾಲ್ ತಾರೆ ಮೆಸ್ಸಿ ಅವರನ್ನು ನೋಡಲು ಕೊಲ್ಕತ್ತದ ಸ್ಟೇಡಿಯಂನಲ್ಲಿ ಸಾವಿರಾರು ರೂಪಾಯಿ ತೆತ್ತು ನೆರೆದಿದ್ದ ಅಭಿಮಾನಿಗಳಿಗೆ ತಮ್ಮ ನೆಚ್ಚಿನ ತಾರೆಯನ್ನು ಕೆಲವು ನಿಮಿಷಗಳು ಕೂಡ ಕಣ್ತುಂಬಿಕೊಳ್ಳಲು ಆಗಿಲ್ಲ. ಆ ಕಾರಣಕ್ಕಾಗಿಯೇ ಅಭಿಮಾನಿಗಳು ರೊಚ್ಚಿಗೆದ್ದಿದ್ದಾರೆ. ಅವರ ಆಕ್ರೋಶವನ್ನು ಅಂಧಾಭಿಮಾನ, ದಾಂಧಲೆ ಎಂದೆಲ್ಲ ತಿರುಚುವುದು ಸರಿಯಲ್ಲ. ಪೂರ್ವಸಿದ್ಧತೆಯ ಕೊರತೆ ಹಾಗೂ ಭದ್ರತಾ ವೈಫಲ್ಯದೊಂದಿಗೆ ರಾಜಕಾರಣಿಗಳೂ ಸಂಘರ್ಷಕ್ಕೆ ಕಾರಣರಾಗಿದ್ದಾರೆ.

ಮೆಸ್ಸಿ ಅವರನ್ನು ಸುತ್ತುವರಿದಿದ್ದ ರಾಜಕಾರಣಿಗಳು ಮತ್ತು ಅವರ ಸಂಬಂಧಿಕರಿಂದಾಗಿ ತಮ್ಮ ನೆಚ್ಚಿನ ಆಟಗಾರನನ್ನು ನೋಡಲು ಸಾಧ್ಯವಾಗದಿರುವುದು ಅಭಿಮಾನಿಗಳ ಸಹಜ ಆಕ್ರೋಶಕ್ಕೆ ಕಾರಣವಾಗಿದೆ. ಬೆಂಗಳೂರಿನಲ್ಲಿ ಸಂಭವಿಸಿದ ಕಾಲ್ತುಳಿತ ಪ್ರಕರಣದಂತೆಯೇ ಇಲ್ಲಿಯೂ ರಾಜಕಾರಣಿಗಳ ವೈಯಕ್ತಿಕ ಹಿತಾಸಕ್ತಿಗೆ ಜನಸಾಮಾನ್ಯರು ನೋವು ಅನುಭವಿಸುತ್ತಿದ್ದಾರೆ.

ಹಣಮಂತ ಕಾಂಬಳೆ, ಬಾಗಲಕೋಟೆ

ದೇಶಿ ಆಟ ಮರೆ; ಮಕ್ಕಳ ನಾಳೆಗಳಿಗೆ ಬರೆ!

ತೊಂಬತ್ತರ ದಶಕದಲ್ಲಿ ಆಡುತ್ತಿದ್ದ ದೇಶಿ ಆಟಗಳಾದ ಖೋ ಖೋ, ಕಬ್ಬಡಿ, ಮರಕೋತಿ, ಕುಂಟೋಬಿಲ್ಲೆ, ಬುಗುರಿ, ಗೋಲಿ, ಗಿಲ್ಲಿದಾಂಡು, ಮುಂತಾದ ದೇಸಿ ಆಟಗಳು ನೇಪಥ್ಯಕ್ಕೆ ಸರಿದಿವೆ. ಮಕ್ಕಳು ಮೊಬೈಲ್‌ನಲ್ಲಿನ ಆಟಗಳಲ್ಲಿ ಮುಳುಗಿದ್ದಾರೆ. ಇದು ಎಳೆಯರ ವೈಯಕ್ತಿಕ ಆರೋಗ್ಯದ ಜೊತೆಗೆ, ಸಾಮಾಜಿಕ ಸಂಬಂಧಗಳಿಂದಲೂ ಅವರನ್ನು ದೂರವಾಗಿಸುತ್ತಿದೆ. ಇಂತಹ ಆಟಗಳ ಬಗ್ಗೆ ಶಾಲೆ ಮತ್ತು ಸರ್ಕಾರಗಳು ಗಮನಹರಿಸಬೇಕು.

ನಾಗಾರ್ಜುನ ಸಿರಿವಂತ

ಬಡವರ ಅನ್ನ ಲಪಟಾಯಿಸುವುದು ಸಲ್ಲ

ರಾಜ್ಯದಲ್ಲಿ ಪಡಿತರ ಅಕ್ಕಿ ಕಳ್ಳಸಾಗಣೆ ಹೆಚ್ಚಾಗುತ್ತಿದೆ (ಡಿ.8, ಪ್ರ.ವಾ. ಸಂಪಾದಕೀಯ). ಕಳವು ಮಾಡಿದ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಪಡಿತರ ಕೇಂದ್ರಗಳಲ್ಲಿ ತೂಕದ ವ್ಯವಸ್ಥೆಯೂ ಸರಿಯಾಗಿಲ್ಲ. ಈ ಅವ್ಯವಹಾರದಲ್ಲಿ ಪಡಿತರ ವಿತರಣೆದಾರರೂ ಶಾಮೀಲಾಗಿರುವಂತಿದೆ. ಬಡವರ ಹೊಟ್ಟೆ ತುಂಬಿಸಬೇಕಾದ ಅಕ್ಕಿಯನ್ನು ಲಪಟಾಯಿಸುವುದು ಸರಿಯಲ್ಲ.

ಸಂತೋಷ ಪೂಜಾರಿ, ತಡಲ

ಚುರುಮುರಿ



ಪಾಪ... ದೇವರು!

• ಸುಮಂಗಲಾ

'ನಾವು ಒಂದನೇ ಕ್ಲಾಸಿದ್ದಾಗ ಎಂಥಾ ಛಂದಿತ್ತು. ಒಂದು ಎರಡು, ಬಾಳೆಲೆ ಹರಡು ಅಂತ ಪದ್ಯ ಹಾಡತಿದ್ದವಿ' ಎಂದು ಬೆಕ್ಕಣ್ಣ ನೆನಪಿಸಿಕೊಂಡಿತು.

'ಈಗ ಒಂದರಿಂದ ಹತ್ತು ಮುಗಿದಿತ್ತು, ಊಟದ ಆಟವು ಮುಗಿದಿತ್ತು ಅಂತ ಪದ್ಯ ಮುಗಿಸುವ ಹಂಗೇ ಇಲ್ಲ!' ಎಂದು ನಕ್ಕೆ ನಾನು.

'ಅದೇ ಮತ್ತೆ... ದಿನಾ ಒಂದಲ್ಲಾ ಒಂದು ಬಣದ ನಾಯಕರು ಒಂದು ಎರಡು ಬಾಳೆಲೆ ಹರಡು ಹಾಡತಾರೆ... ಹಿಂಬಾಲಕರು ಮೂರು ನಾಕು, ಸಿಎಂ ಕುರ್ಚಿ ಬೇಕು, ಐದು ಆರು, ಕುರ್ಚಿ ಮೇಲೆ ಕೂರು ಅಂತ ಸೋಗುಡತಾರೆ! ಊಟದ ಆಟ ಮುಗಿಯಂಗೇ ಇಲ್ಲ' ಎಂದು ಬೆಕ್ಕಣ್ಣ ಗುರುಗುಟ್ಟಿತು.

'ಡಿಕೆಶಿ ಅಂಕಲ್ಲಿಗೆ ಸಿಎಂ ಕುರ್ಚಿ ಸಿಗೂತನಾ ಊಟದ ಆಟ ನಡೆಯೂ ಹಂಗೆ ಕಾಣತೈತೆ' ಎಂದೆ.

'ಪಾಪ... ಕೈ ಹೈಕಮಾಂಡ್ ದೇವರಿಗೆ ಇದ್ನೆಲ್ಲ ನೋಡಿ ವಾಕರಿಕೆ ಬಂದಿರಬೌದು' ಎಂದು ಬೆಕ್ಕಣ್ಣ ಅನುಕಂಪದಿಂದ ಲೊಚಗುಟ್ಟಿತು.

'ಅತ್ತಾಗೆ ವಿಜ್ಯಣ್ಣ–ಯತ್ನಾಳಂಕಲ್ಲಿನ ನಾಲಿಗೆ ನಿಯಂತ್ರಣ ಸಾಧಿಸಲಾಗದೇ ಕಮಲ ಹೈಕಮಾಂಡ್ ದೇವರಿಗೂ ಚಿಂತಿಯಾಗಿರಬೌದು'.

'ಈ ಮನುಷ್ಯ ಹೈಕಮಾಂಡ್ ದೇವರುಗಳ ಕತಿ ಬಿಡು. ಅತ್ತಾಗೆ ಪಾಪ ತಿರುಪತಿ ತಿಮ್ಮಪ್ಪನಿಗೂ ಕಲಬೆರಕೆ ನೋಡೀ ನೋಡೀ ಬ್ಯಾಸರಕಿ, ಸಿಟ್ಟು ಬಂದಿರಬೌದು?' ಎಂದು ಬೆಕ್ಕಣ್ಣ ಚಿಂತೆಯ ಧ್ವನಿಯಲ್ಲಿ ಹೇಳಿತು.

'ಆವಾಗ ತಿರುಪತಿ ತಿಮ್ಮಪ್ಪನ ಲಡ್ಡು ಮಾಡಕ್ಕೆ ಕಲಬೆರಕೆ ತುಪ್ಪ ಪೂರೈಕೆ... ಈಗ ರೇಷ್ಮೆ ಶಲ್ಯ ಅಂತ ಪಾಲಿಸ್ಟರ್ ಶಲ್ಯದ ಪೂರೈಕೆ... ಅದೂ ಕಳೆದ ಹತ್ತು ವರ್ಷಗಳಿಂದ!'

'ಅಲ್ಲಾ... ತಿಮ್ಮಪ್ಪನಿಗೇ ಪಂಗನಾಮ ಹಾಕಿ ವಂಚನೆ, ಭ್ರಷ್ಟಾಚಾರ ಮಾಡೋವ್ರು ಒಂದು ಕಡೆ... ಭಕ್ತರಿಗೆ ಶುದ್ಧವಾದ ಪ್ರಸಾದ, ರೇಷ್ಮೆ ಶಲ್ಯವನ್ನೂ ನೀಡಲಾಗದ ತಿರುಪತಿ ದೇವಸ್ಥಾನ ಟ್ರಸ್ಟ್ ಇನ್ನೊಂದು ಕಡೆ... ಇಬ್ಬರ ನಡುವೆ ಯಾವ ಭ್ರಷ್ಟರಿಗೂ ಶಿಕ್ಷೆ ನೀಡಲಾಗದೇ, ನಿಜಭಕ್ತರನ್ನೂ ರಕ್ಷಿಸಲಾಗದ ಅಸಹಾಯಕ ತಿಮ್ಮಪ್ಪ... ಪಾಪ!' ಎಂದು ಬೆಕ್ಕಣ್ಣ ತಾನೂ ಅಸಹಾಯಕತೆಯಿಂದ ಮತ್ತೆ ಲೊಚಗುಟ್ಟಿತು.

ಸಂಗತ

ಸಹ್ಯಾದ್ರಿ: ಅಭಿವೃದ್ಧಿ ಪ್ರವಾಹ ಕೊನೆಗೊಳ್ಳಲಿ

ಬಯಲುನಾಡಿಗೆ ನೀರು ಒದಗಿಸಲು ಜಲಾನಯನ ಅಭಿವೃದ್ಧಿ ಆಧಾರಿತ ಸುಸ್ಥಿರ ಯೋಜನೆಗಳು ಬೇಕು; ನದಿ ಜೋಡಣೆಗಳಂಥ ಅವೈಜ್ಞಾನಿಕ ಯೋಚನೆಗಳಲ್ಲ!

• ಕೇಶವ ಎಚ್. ಕೊರ್ಸೆ

ಎತ್ತಿನಹೊಳೆ ನದಿತಿರುವು ಯೋಜನೆಯಿಂದ ಉಂಟಾಗಿರುವ ಸಂಕೀರ್ಣ ಸಮಸ್ಯೆಗಳ ಅಗಾಧತೆಯನ್ನು ಅರ್ಥೈಸಿಕೊಳ್ಳುವ ಮುನ್ನವೇ, ರಾಜ್ಯದ ಪಶ್ಚಿಮಘಟ್ಟ ಶ್ರೇಣಿಯಲ್ಲಿ ಇನ್ನೂ ಎರಡು ನದಿ ಜೋಡಣೆ ಯೋಜನೆಗಳ ಪ್ರಸ್ತಾವ ಮುನ್ನೆಲೆಗೆ ಬಂದಿವೆ. ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ನದಿಯನ್ನು ವರದಾಕ್ಕೆ ಹಾಗೂ ಅಘನಾಶಿನಿಯನ್ನು ವೇದಾವತಿ ನದಿಗೆ ಜೋಡಿಸುವ ಯೋಜನೆಗಳವು. ಇವುಗಳ 'ಪ್ರಾಥಮಿಕ ಸಾಧ್ಯತಾ ವರದಿ'ಗಳನ್ನು ಕೇಂದ್ರ ಜಲಶಕ್ತಿ ಇಲಾಖೆಯ 'ರಾಷ್ಟ್ರೀಯ ನೀರು ಅಭಿವೃದ್ಧಿ ಮಂಡಳಿ'ಯು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿದೆ. ಬೇಡ್ತಿ–ವರದಾ ಯೋಜನೆಯ 'ವಿಸ್ತೃತ ಯೋಜನಾ ವರದಿ'ಯ ತಯಾರಿಗೂ ಸಿದ್ಧತೆ ಸಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ನದಿಜೋಡಣೆ ಕಾರ್ಯಕ್ರಮದ ಅನುದಾನ ಬಳಸಿಕೊಂಡು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಕೈಗೆತ್ತಿಕೊಳ್ಳುವ ನೀರಾವರಿ ಯೋಜನೆಗಳಿವು.

ಪಶ್ಚಿಮಘಟ್ಟದ ನದಿಗಳೇ ವಿಶಿಷ್ಟ. ಇಲ್ಲಿರುವ ದಟ್ಟಕಾಡಿನ ಹೊದಿಕೆಯಿಂದಾಗಿ ಮಾತ್ರ ಮಳೆನೀರು ಭೂಮಿಯಲ್ಲಿ ಇಂಗಿ ಅಂತರ್ಜಲ ಮರುಪೂರಣ ಆಗುವುದು. ಇದರಿಂದಾಗಿ ಸೃಜಿಸುವ ಅಸಂಖ್ಯ ಚಿಲುಮೆಗಳು ವರ್ಷದುದ್ದಕ್ಕೂ ಉಣಿಸುವ ನೀರಿನಿಂದಾಗಿ ಸಹ್ಯಾದ್ರಿಯ ನದಿಗಳು ಜೀವತಳೆಯುತ್ತವೆ. ಬೇಡ್ತಿ ಹಾಗೂ ಅಘನಾಶಿನಿ ಈ ಬಗೆಯ ನದಿಗಳು.



ಇಲ್ಲಿನ ಸಮೃದ್ಧ ಮಳೆಕಾಡು ನಾಶವಾಗಿಬಿಟ್ಟರೆ, ಮಳೆನೀರು ಭೂಮಿಯಲ್ಲಿ ಇಂಗದೆ ಒಮ್ಮೆಲೆ ಪ್ರವಾಹವಾಗಿ ಸಮುದ್ರ ಸೇರುತ್ತದೆ! ಜಂಬಿಟ್ಟಿಗೆಯ ಸಡಿಲಮಣ್ಣಿಂದ ಆವೃತವಾಗಿರುವ ಗುಡ್ಡಗಳು ಮಳೆಗಾಲದಲ್ಲಿ ಕುಸಿಯುತ್ತವೆ. ಅಂತರ್ಜಲ ಕುಸಿದು, ಬೇಸಿಗೆಯಲ್ಲಿ ನೀರಿನ ಕೊರತೆ ಇನ್ನಷ್ಟು ತೀವ್ರವಾಗುತ್ತದೆ. ಪಶ್ಚಿಮಘಟ್ಟದಲ್ಲಿ ಕಾಡು ಕುಗ್ಗಿರುವಲ್ಲೆಲ್ಲ ಉಂಟಾಗಿರುವ ಈ ವಿದ್ಯಮಾನಗಳನ್ನು ಅಧ್ಯಯನಗಳು ಈಗಾಗಲೇ ವ್ಯಾಪಕವಾಗಿ ದಾಖಲಿಸಿವೆ.

ಮಲೆನಾಡಿನ ಪರಿಸರದ ಈ ಸೂಕ್ಷ್ಮ ಅರ್ಥವಾದರೆ, ಬೇಡ್ತಿ ಹಾಗೂ ಅಘನಾಶಿನಿ ನದಿ ಜೋಡಣೆಗಳನ್ನು ಏಕೆ ಕೈಬಿಡಬೇಕೆಂಬುದು ವೇದ್ಯವಾಗುತ್ತದೆ. ಯೋಜನೆಯು ಬಯಸುವ ನೀರಿನ ಸಂಗ್ರಹಣೆಗೆ ಹಲವು ಜಲಾಶಯಗಳನ್ನು ನಿರ್ಮಿಸಬೇಕಾಗುತ್ತದೆ. ನೀರು ಸಾಗಣೆಗೆ ಉದ್ದನೆಯ ಬೃಹತ್ ಕಾಲುವೆಗಳು, ಸುರಂಗಗಳು ಹಾಗೂ ಕೊಳವೆಮಾರ್ಗಗಳನ್ನು ರೂಪಿಸಬೇಕಾಗುತ್ತದೆ. ಈ ಕಾಮಗಾರಿಗಳಿಗಾಗಿ ಹೊಸ ರಸ್ತೆಗಳು ಹಾಗೂ ವಿದ್ಯುತ್ ಮಾರ್ಗಗಳೂ ಬೇಕು. ಇದಕ್ಕೆಲ್ಲ ಯೋಜನಾ ಪ್ರದೇಶದ ಅಮೂಲ್ಯ ಕಾಡು, ಗೋಮಾಳ ಹಾಗೂ ಕೃಷಿಭೂಮಿ ಬಲಿಯಾಗುತ್ತವೆ. ದಕ್ಷಿಣಭಾರತದ ನೀರಿನ ಸೆಲೆಯಾದ ಪಶ್ಚಿಮಘಟ್ಟದ ಇಂಥ ಅಮೂಲ್ಯ ಪ್ರದೇಶಗಳನ್ನು, 'ಹವಾಮಾನ ಬದಲಾವಣೆ'ಯ ಈ ವಿಷಮ ಕಾಲಘಟ್ಟದಲ್ಲಿ ಕಳೆದುಕೊಳ್ಳುವುದು ಸೂಕ್ತವೇ?

ಒಮ್ಮೆ ಇಲ್ಲಿನ ಜೈವಿಕ ಪರಿಸರ ಧ್ವಂಸಗೊಂಡರೆ ಸಂಭವಿಸುವ ಮಾನವ ಸಂಕಷ್ಟಗಳು ಹಲವಾರು. ವನ್ಯಪ್ರಾಣಿಗಳ ಆವಾಸಸ್ಥಾನ ಛಿದ್ರವಾಗಿ ಸುತ್ತಲಿನ ಜನವಸತಿ ಮತ್ತು ಕೃಷಿಭೂಮಿಗಳಲ್ಲಿ ಮಾನವ–ವನ್ಯಪ್ರಾಣಿ ಸಂಘರ್ಷ ಹಿಗ್ಗುತ್ತದೆ. ಕಾಡು ಬರಿದಾಗಿ, ಭೂಕುಸಿತ ಹೆಚ್ಚಿ, ಕೆರೆ–ತೊರೆಗಳ ಜಲಮೂಲ ಒಣಗಿ, ಕೃಷಿಕರು ಕಂಗೆಡುತ್ತಾರೆ. ಅರಣ್ಯದ ನೈಸರ್ಗಿಕ ಸಂಪನ್ಮೂಲಗಳ ಹರಿವು ಹಾಗೂ ಗೋಮಾಳ ಪ್ರದೇಶಗಳು ಕರಗಿ, ಇಲ್ಲಿನ ಕುಣಬಿ, ಗೌಳಿಗಳಂಥ ವನವಾಸಿಗರ ಜೀವನೋಪಾಯ ಮೂರಾಬಟ್ಟೆಯಾಗುತ್ತದೆ. ನದಿ–ತೊರೆಗಳಲ್ಲಿ ನೀರು ಕಡಿಮೆಯಾಗಿ, ಸ್ಥಳೀಯ ತೋಟಗಾರಿಕೆ ಹಾಗೂ ಸಾಂಬಾರ ಕೃಷಿಗೆ ಹಾನಿಯಾಗುತ್ತದೆ. ನದಿಯಲ್ಲಿ ಸಹಜ ಹರಿವು ತಗ್ಗಿದರೆ, ಕರಾವಳಿಗೆ ಹೋಗಬೇಕಾದ ಪ್ರವಾಹದ ನೀರು ಹಾಗೂ ಪೋಷಕಾಂಶಗಳ ಪ್ರಮಾಣ ತಗ್ಗುತ್ತದೆ. ಇದರಿಂದ, ಬೇಡ್ತಿ ಸಮುದ್ರ ಸೇರುವ ಅಂಕೋಲಾ ತಾಲ್ಲೂಕು ಹಾಗೂ ಅಘನಾಶಿನಿಯು ಸಮುದ್ರ ತಲಪುವ ಕುಮಟಾ ತಾಲ್ಲೂಕಿನ ವಿಶಾಲವಾದ ಅಳಿವೆ ಪ್ರದೇಶಗಳ ಫಲವತ್ತತೆ ಕುಸಿದು, ಜಲಚರಗಳು ವಂಶಾಭಿವೃದ್ಧಿ ಆಗುವ ಕಾಂಡ್ಲಾ ಕಾಡುಗಳು ಕುಗ್ಗಿ, ಅವನ್ನು ಆಧರಿಸಿದ ಮೀನುಗಾರರು ಹಾಗೂ ಬೇಸಾಯಗಾರರು ಸಂಕಷ್ಟಕ್ಕೆ ಒಳಗಾಗುತ್ತಾರೆ. ನದಿಯೊಂದು ಒಣಗಿದಂತೆ ಅದರೊಡಲ ಬದುಕೂ ಸೊರಗತೊಡಗುತ್ತದೆ.

ಹೆಚ್ಚು ನೀರಿರುವ ನದಿಗಳಿಂದ ಬರಪೀಡಿತ ಪ್ರದೇಶಗಳಿಗೆ ನೀರುಣಿಸುವ 'ನದಿ ಜೋಡಣೆ' ತತ್ತ್ವವೇನೋ ಸಾಧುವಾದದ್ದೇ. ಮೈದಾನ ಪ್ರದೇಶದಲ್ಲಿ ಕೆಲವು ನದಿಗಳನ್ನು ಈ ಬಗೆಯಲ್ಲಿ ಜೋಡಿಸಲೂ ಸಾಧ್ಯವಾದೀತು. ಆದರೆ, ಅದೇ ಮಾದರಿಯನ್ನು ಸಂಕೀರ್ಣ ಭೌಗೋಳಿಕ ಹಾಗೂ ಜೈವಿಕ ಪರಿಸರವಿರುವ ಪಶ್ಚಿಮಘಟ್ಟಶ್ರೇಣಿಗೆ ಹೇರುವುದು ಸರಿಯಲ್ಲ. ಇಷ್ಟಕ್ಕೂ ಇತ್ತೀಚಿನ ದಶಕಗಳಲ್ಲಿ ಈ ನದಿಗಳಲ್ಲಿ ಮಳೆಗಾಲದ ಎರಡು-ಮೂರು ತಿಂಗಳು ಹೊರತುಪಡಿಸಿದರೆ, ಹೆಚ್ಚುವರಿ ನೀರೂ ಹರಿಯುತ್ತಿಲ್ಲ. ಇವನ್ನೆಲ್ಲ ಗ್ರಹಿಸಿಯೇ ಪಶ್ಚಿಮಘಟ್ಟದಲ್ಲಿ ನದಿ ಜೋಡಣೆ ಮಾಡಬಾರದೆಂದು ತಜ್ಞರು ಹಾಗೂ ಕೃಷಿ ಸಮುದಾಯ ಆಗ್ರಹಿಸುತ್ತಿರುವುದು. ಸಾಮೂಹಿಕ ಭವಿಷ್ಯದ ಹಿತಕ್ಕಾಗಿ ಈ ಪ್ರಯತ್ನಗಳನ್ನು ಸರ್ಕಾರ ಕೈಬಿಡಬೇಕಾಗಿದೆ.

ಇನ್ನು, ಬಯಲುನಾಡಿಗೆ ಕೃಷಿ ಹಾಗೂ ಕುಡಿಯುವ ನೀರನ್ನು ಪೂರೈಸುವುದೂ ಸಹ ಅಗತ್ಯವಾದದ್ದೇ. ಆದರೆ, ಅದಕ್ಕೆ ನದಿ ಜೋಡಣೆಯಂಥ ಅವೈಜ್ಞಾನಿಕ ಯೋಜನೆಗಳ ಭ್ರಮೆಯನ್ನು ತೇಲಿಬಿಡಬಾರದಲ್ಲವೇ? ಈಗಾಗಲೇ ಪರಿಣಾಮಕಾರಿಯೆಂದು ಸಿದ್ಧವಾಗಿರುವ ಜಲಾನಯನ ಅಭಿವೃದ್ಧಿ ಮತ್ತು ಕೆರೆಗಳ ಪುನಶ್ಚೇತನ ಆಧಾರಿತ ಸುಸ್ಥಿರ ನೀರಾವರಿ ಯೋಜನೆಗಳನ್ನು ಹಮ್ಮಿಕೊಳ್ಳುವುದೇ ಅದಕ್ಕೆ ಪರಿಹಾರ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ತಿಮ್ಮಪ್ಪನ ಸನ್ನಿಧಿಗೆ ಹಗರಣಗಳ ಕಳಂಕ

₹3 ಲಕ್ಷ ಕೋಟಿ ತಿರುಮಲ ತಿರುಪತಿ ದೇವಾಲಯದ ಸಂಪತ್ತಿನ ಅಂದಾಜು ಮೌಲ್ಯ

2.5 ಕೋಟಿ 2024ರಲ್ಲಿ ಭೇಟಿ ನೀಡಿದ್ದ ಭಕ್ತರು

₹1,365 ಕೋಟಿ 2024ರಲ್ಲಿ ಸಂಗ್ರಹವಾದ ಹುಂಡಿ ಹಣ

₹3 ಕೋಟಿ ದಿನವೊಂದಕ್ಕೆ ಸಂಗ್ರಹವಾಗುವ ಹುಂಡಿ ಮೊತ್ತ

99 ಲಕ್ಷ 2024ರಲ್ಲಿ ಮುಡಿ ನೀಡಿದವರು

₹150 ಕೋಟಿ 2024ರಲ್ಲಿ ದೇವಾಲಯಕ್ಕೆ ಭಕ್ತರು ದಾನ ಮಾಡಿದ್ದ ಸ್ಥಿರಾಸ್ತಿ ಮೌಲ್ಯ

₹500 ಕೋಟಿ ಲಡ್ಡುಗಳ ಮಾರಾಟದಿಂದ ವಾರ್ಷಿಕವಾಗಿ ಸಂಗ್ರಹವಾಗುತ್ತಿರುವ ವರಮಾನ



ಪ್ರಜಾವಾಣಿ ವಾರ್ತೆ

ದೇಶ ವಿದೇಶಗಳ ಕೋಟ್ಯಂತರ ಭಕ್ತರ ಶ್ರದ್ಧಾಕೇಂದ್ರ ಮತ್ತು ಜಗತ್ತಿನ ಅತ್ಯಂತ ಸಿರಿವಂತ ದೇವಾಲಯಗಳಲ್ಲಿ ಒಂದಾಗಿರುವ ಆಂಧ್ರ ಪ್ರದೇಶದ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಆಡಳಿತ ಮಂಡಳಿಯು ಕೋರಿಕೆಗೆ ಈಗ ಮತ್ತೊಂದು ಹಗರಣ ಸುತ್ತಿಕೊಂಡಿದೆ. ...

₹250 ಕೋಟಿ ಮೊತ್ತದ ಕಲಬೆರಕೆಯುಕ್ತ ಲಡ್ಡು ಹಗರಣವು ಭಕ್ತರ ನಂಬಿಕೆಗೆ ಧಕ್ಕೆ ತಂದಿದೆ. ...

ವೆಂಕಟೇಶ್ವರ ದೇವಾಲಯವು ಪ್ರಪಂಚದಲ್ಲಿಯೇ ಅತಿ ಹೆಚ್ಚು ಜನ ಭೇಟಿ ನೀಡುವ ಧಾರ್ಮಿಕ ಕೇಂದ್ರಗಳಲ್ಲೊಂದಾಗಿದೆ. ವಾರ್ಷಿಕವಾಗಿ ಸುಮಾರು 2.4 ಕೋಟಿಯಷ್ಟು ಭಕ್ತರು ಭೇಟಿ ನೀಡಿ ಶ್ರೀನಿವಾಸನ ದರ್ಶನ ಪಡೆಯುತ್ತಾರೆ. ...

ಆದಾಯ, ವೆಚ್ಚ, ದರ್ಶನದ ವ್ಯವಸ್ಥೆಯಿಂದ ದೇವಸ್ಥಾನಕ್ಕೆ ಸಂಬಂಧಿಸಿದ ಸಕಲ ವ್ಯವಹಾರಗಳ ಉಸ್ತುವಾರಿ ಟಿಟಿಡಿ ಮಂಡಳಿಯದ್ದಾಗಿದೆ. ... ಹೀಗೆ ತಿಮ್ಮಪ್ಪನ ಸನ್ನಿಧಿಯಲ್ಲಿನ ಸಾಲು ಸಾಲು ಹಗರಣಗಳು ಭಕ್ತರ ಮನಸ್ಸನ್ನು ತೀವ್ರವಾಗಿ ಗಾಸಿಗೊಳಿಸಿವೆ.

ದರ್ಶನಕ್ಕೆ ನೂಕುನುಗ್ಗಲು

ದೇವಸ್ಥಾನಕ್ಕೆ ದಿನವೊಂದಕ್ಕೆ ಸುಮಾರು 65ರಿಂದ 70 ಸಾವಿರ ಭಕ್ತರು ದೇವರ ದರ್ಶನ ಪಡೆಯಲು ತಿರುಮಲಕ್ಕೆ ಆಗಮಿಸುತ್ತಾರೆ. ...

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು

ಕಲಬೆರಕೆಯುಕ್ತ ಲಡ್ಡು ಹಗರಣ

ತಿರುಪತಿ ದೇವಾಲಯಕ್ಕೆ ರಾಷ್ಟ್ರೀಯ ಕಳಂಕ ತಂದಿದ್ದು ಕಳಪೆ ಲಡ್ಡು ಪ್ರಸಾದ ಹಗರಣ. ಕಳೆದ ವರ್ಷ ಬಯಲಾದ ಹಗರಣದ ಮೊತ್ತ ₹250 ಕೋಟಿ. ಕೋಟ್ಯಂತರ ಭಕ್ತರು 'ತಿಮ್ಮಪ್ಪನ ಪ್ರಸಾದ' ಎಂದು ಕಣ್ಣಿಗೆ ಒತ್ತಿಕೊಂಡು ಸೇವಿಸುತ್ತಿದ್ದ ಲಡ್ಡುವನ್ನು 2019–2024ರ ನಡುವೆ ಕಳಪೆ ತುಪ್ಪದಿಂದ ತಯಾರಿಸಲಾಗಿತ್ತು ...



ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಪ್ರಯೋಗಾಲಯಗಳ ವರದಿಗಳನ್ನು ಉಲ್ಲೇಖಿಸಿ ... ಟಿಟಿಡಿಗೆ ತುಪ್ಪ ಪೂರೈಸಲು ಟೆಂಡರ್ ಪಡೆದಿದ್ದ ಕಂಪನಿಗಳಿಗೆ 68 ಲಕ್ಷ ಕೆ.ಜಿಯಷ್ಟು ಈ ಕಳಪೆ ತುಪ್ಪ ಪೂರೈಸಿತ್ತು ಎಂಬ ಸಂಗತಿ ತನಿಖೆಯಿಂದ ಬಹಿರಂಗವಾಗಿದೆ.

ದರ್ಶನ: ನಕಲಿ ಪತ್ರಗಳ ಹಾವಳಿ

ದೇವರ ದರ್ಶನಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಗಣ್ಯರು, ಅಧಿಕಾರಿಗಳ ನಕಲಿ ಶಿಫಾರಸುಗಳನ್ನು ನೀಡಿ ಭಕ್ತರು/ಗಣ್ಯರಿಂದ ದೊಡ್ಡ ಮೊತ್ತವನ್ನು ವಸೂಲಿ ಮಾಡುತ್ತಿರುವ ಪ್ರಕರಣಗಳು ತಿರುಪತಿಯಲ್ಲಿ ಆಗಾಗ ವರದಿಯಾಗುತ್ತಲೇ ಇರುತ್ತವೆ. ...

ದೇವರ ದರ್ಶನದ ಟಿಕೆಟ್ ಕೊಡಿಸುತ್ತೇನೆ ಎಂದು ... ಕೆಲಸ ಕಳೆದುಕೊಂಡ ಘಟನೆಗಳು ಹಲವು ಬಾರಿ ನಡೆದಿವೆ.

ರಾಜಕೀಯ ಜಟಾಪಟ

ದೇವಾಲಯದ ಹಗರಣಗಳಿಗೆ ಸಂಬಂಧಿಸಿದಂತೆ ಆಡಳಿತಾರೂಢ ಟಿಡಿಪಿ ಮತ್ತು ವೈಎಸ್‌ಆರ್‌ಸಿಪಿ ನಡುವೆ ಜಟಾಪಟಿ ನಡೆಯುತ್ತಿದೆ. ...

ಟಿಟಿಡಿಯಲ್ಲಿ ಆಡಳಿತಾತ್ಮಕ ಅನುಕೂಲಕ್ಕಾಗಿ ವಿವಿಧ ಸಮಿತಿಗಳನ್ನು ಮಾಡಲಾಗುತ್ತದೆ. ... ಎಲ್ಲ ಸರ್ಕಾರಗಳ ಅವಧಿಯಲ್ಲೂ ಟಿಟಿಡಿಯಲ್ಲಿ ಇಂಥ ಅವ್ಯವಹಾರಗಳು ನಡೆದಿರುವ ನಿದರ್ಶನಗಳಿವೆ.

ಪರಕಾಮಣಿ ಹಣ ಕಳವು

ಎರಡೂವರೆ ವರ್ಷಗಳ ಹಿಂದಿನ ಪ್ರಕರಣ ಇದು. 2023ರ ಏಪ್ರಿಲ್ 29ರಂದು ದೇವಾಲಯದ ಹುಂಡಿಗಳಿಗೆ ಭಕ್ತರು ಹಾಕಿದ ಕಾಣಿಕೆ ಹಣವನ್ನು ಪರಕಾಮಣಿ (ಎಣಿಕೆ) ಮಾಡುವ ಸಂದರ್ಭದಲ್ಲಿ ... (₹72 ಸಾವಿರ) ... ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ತುಲಾಭಾರ ದೇಣಿಗೆಯಲ್ಲೂ ವಂಚನೆ?

ದೇವಾಲಯದಲ್ಲಿ ನಡೆಯುವ ತುಲಾಭಾರ ಸೇವೆಗೆ ನೀಡುವ ದೇಣಿಗೆಯಲ್ಲೂ ವಂಚನೆ ನಡೆದಿದೆ ಎಂದು ... 2019–24ರ ಅವಧಿಯಲ್ಲಿ ... ಭದ್ರತಾ ವಿಭಾಗಕ್ಕೆ ಅವರು ಮನವಿಯನ್ನೂ ಸಲ್ಲಿಸಿದ್ದಾರೆ.



ರಾಷ್ಟ್ರೀಯ

ಮಾರ್ಚ್ ವೇಳೆಗೆ ಏಳು ಉಡ್ಡಯನ ಕಾರ್ಯಾಚರಣೆ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಮಾರ್ಚ್ ವೇಳೆಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಏಳು ಉಡಾವಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಲಿದೆ. ... 'ಪಿಎಸ್ಎಲ್‌ವಿ–ಎನ್1' ... 18 ಸಣ್ಣ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗುತ್ತದೆ.

ಪಂಚಾಯತ್‌ರಾಜ್ ಅಧಿಕಾರಿಗಳಿಗೆ ಎನ್‌ಎಚ್‌ಆರ್‌ಸಿ ಸಮನ್ಸ್

ನವದೆಹಲಿ (ಪಿಟಿಐ): ಪಂಚಾಯಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ 'ಪರೋಕ್ಷ ಆಡಳಿತ' ಇರುವ ಕುರಿತ ಆರೋಪಗಳಿಗೆ ಸಂಬಂಧಿಸಿ ಪ್ರತಿಕ್ರಿಯೆ ನೀಡಲು ವಿಫಲವಾಗಿರುವ 24 ರಾಜ್ಯಗಳು ಹಾಗೂ 8 ಕೇಂದ್ರಾಡಳಿತ ಪ್ರದೇಶಗಳ ಪಂಚಾಯತ್‌ರಾಜ್ ಇಲಾಖೆಗಳ ಉನ್ನತ ಅಧಿಕಾರಿಗಳಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಸಮನ್ಸ್ ಜಾರಿ ಮಾಡಿದೆ. ... 'ಸರಪಂಚ ಪತಿ' ವ್ಯವಸ್ಥೆಯ ... ಸಂಸ್ಥೆಗಳಲ್ಲಿ ಈ ಪದ್ಧತಿಯು ಜಾರಿಯಲ್ಲಿದೆ ಎಂದು ಆಯೋಗ ತಿಳಿಸಿದೆ.

ವಿಜ್ಞಾನ ಮತ್ತು ಧರ್ಮ



ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಮೆಡಿಕಲ್ ವಿದ್ಯಾರ್ಥಿಯಾಗಿದ್ದಾಗ ಗೆಲಿಲಿಯೋ ಗಣಿತದ ತರಗತಿಗಳನ್ನು ತಪ್ಪಿಸಿ ಕೇಳುತ್ತಿದ್ದ. ಕುತೂಹಲ ಮತ್ತು ಆಸಕ್ತಿಯ ಪರಿಣಾಮವಾಗಿ ಆತನ ಬಗೆಯು ವಿಜ್ಞಾನದ ಪ್ರಯೋಗಗಳು ಮನುಷ್ಯ ಜಗತ್ತಿಗೆ ಸತ್ಯದರ್ಶನ ಮಾಡಿಸಿದವು. ... 'ಇದು ತಿರುಗುತ್ತಲೇ ಇದೆ' ...

ಭೋಗದ ಉಪಯುಕ್ತತೆಗಾಗಿ ಬಳಸಿಕೊಳ್ಳುವ ಮನುಷ್ಯ ಸಮಾಜ ಭಾವುಕವೂ ದುರ್ಬಲವೂ ಆದ ಸಂದರ್ಭಗಳಲ್ಲಿ ...

ಭಾಗಗಳೆಂಬ ಅರಿವಿನಲ್ಲಿ ಹುಟ್ಟುವ ನೈತಿಕತೆ ಮಾನವ ಬದುಕನ್ನು ಬೆಳಗಬಲ್ಲದು. ... ಧರ್ಮವು ಮನುಷ್ಯ ಸತ್ವದ ನಂತರದ ಕಾಣದ ಲೋಕದ ವಿಶ್ಲೇಷಣೆಯಲ್ಲಿ ಮಾತ್ರ ಮುಳುಗದೇ ... ಕಾಯಬೇಕು.

ಪದಬಂಧ 6254

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಸೂಕ್ಷ್ಮವಾಗಿ ಪರಿಶೀಲಿಸುವವನು (4)
3. ಊಟಕ್ಕೆ ಕುಳಿತಿರುವ ಜನರ ಸಾಲು (2)
5. ...(5)
4. ಮುಖಾಂತರವಾದ ನಾಟಕ (5)
6. ಶುಭಕಾರ್ಯಗಳಲ್ಲಿ ಹಾಕುವ ಪೀಠ (4)
7. ಜಟಿಲತೆಯಿಂದ ಸಂಗ್ರಹಿಸಿರುವ ನೀರು (2)
8. ಪುರಿಯಲ್ಲಿ ತಿರುಗಿರುವ ಶತ್ರು (2)
9. ನಗರಸಭಾತ್ರದ ವಿರುದ್ಧ ಒಡವೆ (2)
10. ಕೆಲಸ ಮಾಡುವವನು (3)
11. ನೆನಪಿನಿಂದ ಮಾಸದ ತಿಂಗಳು! (2)
13. ವಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
14. ಅಧಮನ ಹತ್ತಿರದಿರುವ ಹಣ (2)
16. ಪದ್ಧತಿ ಅಥವಾ ಪರಂಪರೆ (4)
17. ಈತ ವಿವೇಕಶಾಲಿ (5)
18. ಧೂಳೀಕರ ಅಮೃತ (2)
19. ಸಮ್ಮತಿ ಹೀಗೆ ಬಂದಿದೆ (4)

ಮೇಲಿಂದ ಕೆಳಕ್ಕೆ
1. ಎಲ್ಲರೂ ಒಟ್ಟಾಗಿ ಹಾಡುವಿಕೆ (5)
2. ಕರುಣೆಗೆ ತೋರಿದ ದಯೆ (3)
3. ಕೆಸರಲ್ಲಿ ಹುಟ್ಟಿದುದು (3)
5. ನಡುವೆ ಗಂ ಹಿಡಿದಿರುವ ಸುಸಂಸ್ಕೃತ (4)
10. ಕರ್ನಾಟಕದ ಕಾಶ್ಮೀರ ಎಂದು ಹೆಸರಾಗಿರುವ ಉತ್ತರಕನ್ನಡ ಜಿಲ್ಲೆಯ ಕಡಲತೀರದ ಊರು (4)
12. ನೆರವಿಗಾಗಿ ನೀಡುವ ಹಣ (5)
15. ಸಮ್ಮಾರಾಷ್ಟ್ರ ಪಕ್ಷಿ (3)
16. ಸರಾಸರಿಯಿಂದ ಆಗಿರುವ ಅನಂದ (3)

6253ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಕಲ್ಲನ 3. ಪ್ರಧಾನ 5. ನಬೆಳಕ್ಕ 6. ಲಿವಿ 8. ಸರರ 9. ಉಹ 10. ಕ್ವೆರ 11. ನಾರಿ 12. ಪಾರಾ 16. ಧರ್ಮಬಾಹಿರ 17. ಹಗ್ಗಾವು 18. ಸ್ವಾರ
ಮೇಲಿಂದ ಕೆಳಕ್ಕೆ: 1. ಕಮಳ 2. ನೆನಪು 3. ಪ್ರಕೃತ 4. ನವಜಾತ 7. ವಿಹಾರಿ 8. ಸಂತೋಷ 11. ನಾಮಹಾಕು 13. ರಾಯಭಾರ 14. ಅಧಮ 15. ಸರಸ

ಸುಡೊಕು 6638

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿನಲ್ಲೂ ಒಂದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯದ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯದ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8		2		4		1		5
			8		9		6	
9		6			7	2		4
			1	6				
	2			7	3	8		6
				8				
		8		9	2	5		1
1	9	5	7				4	
2		3		5	1	9		8

6637 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಡಿಸೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಏಕಾದಶಿ ಗಂ. 21-21 ನಕ್ಷತ್ರ: ಚಿತ್ರಾ ಗಂ. 11-09 ಯೋಗ: ಶೋಭನ ಗಂ. 12-30 ಕರಣ: ಬವ ಗಂ. 8-04 ವೃಶ್ಚಿಕ ಮಾಸದ 29 ನೇ ದಿನ. ಮಳೆ ನಕ್ಷತ್ರ: ಜ್ಯೇಷ್ಠ 4 ನೇ ಪಾದ. ರಾಹುಕಾಲ: ಬೆಳಿಗ್ಗೆ 07-30-09-00, ಸೂರ್ಯೋದಯ: 06-49 ಸೂರ್ಯಾಸ್ತ: 06-02, ಮುಸ್ಸಂಜೆ ದಿನಾಂಕ: 23 ಜಮಾದುಸ್ಸಾನಿ, ಅದೃಷ್ಟ ಸಂಖ್ಯೆ: 8,5

ಮೇಷ: ಇತರರ ಭಾವನೆಗಳಿಗೆ ಅದ್ಯತೆಯನ್ನು ನೀಡುವುದು ಅನಿವಾರ್ಯ. ...

ವೃಷಭ: ವ್ಯಾಪಾರಿಕ ವಿಚಾರಗಳ ವಿಧಾನವಾಗಿ ಬೆಳವಣಿಗೆ ಕಾಣುತ್ತವೆ. ...

ಮಿಥುನ: ಮಾತನಾಡುವ ಕಲೆಯು ವರದಾನವಾಗಿ ಪರಿಣಮಿಸುವುದು. ...

ಕಟಕ: ಸತ್ಯ ಮತ್ತು ಪ್ರಾಮಾಣಿಕತೆಯ ತತ್ವಗಳು ಭಾವುಕರನ್ನಾಗಿ ಮಾಡುತ್ತವೆ. ...

ಸಿಂಹ: ಶ್ರಮ ಹಾಗೂ ಕರ್ತವ್ಯ ನಿಷ್ಠೆ ಇಂದು ಪ್ರಶಂಸೆಯಾಗುವುದು. ...

ಕನ್ಯಾ: ಎಲ್ಲವನ್ನೂ ಮೊದಲೇ ಅಚ್ಚುಕಟ್ಟಾಗಿ ವೇಳಾಪಟ್ಟಿಯನ್ನು ಹಾಕಿಕೊಂಡಲ್ಲಿ ಲಾಭದಾಯಕ ದಿನ. ...

ತುಲಾ: ಕೆಲಸದಲ್ಲಿ ತೋರಿಸುವ ಆಸಕ್ತಿ ... ಕೊಟ್ಟ ಮಾತನ್ನು ಉಳಿಸಿಕೊಳ್ಳುವಲ್ಲಿ ಜಯಶೀಲರಾಗುವಿರಿ. ...

ವೃಶ್ಚಿಕ: ವೈಯಕ್ತಿಕ ಜೀವನದಲ್ಲಿ ಕೆಲವೊಂದು ಬದಲಾವಣೆಗೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಲಿದೆ. ...


ಧನು: ಹೊಸ ವಿನ್ಯಾಸದ ಉಡುಪುಗಳು ಕೆಲವು ಸ್ನೇಹಿತರಿಗೆ ಸರಿಯಾಗಿ ದೊರೆಯುವುದು. ...


ಮಕರ: ನಿಸ್ವಾರ್ಥದಿಂದ ವ್ಯಕ್ತಿಯ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ತೆರಳುವ ಯೋಗ. ...

ಕುಂಭ: ಕೆಲಸ ಕಾರ್ಯಗಳಲ್ಲಿ ಬಾಧೆಯಾಗಿ ನಿಲ್ಲುತ್ತಿದ್ದ ವ್ಯಕ್ತಿಯು ಅದಾರಿಯಿಂದ ದೂರ ಸರಿಯಲಿದ್ದಾರೆ. ...

ಮೀನ: ವಿವಾಹ ಪ್ರಸ್ತಾವಗಳು ಬಲಗೊಂಡು ಕಂಕಣ ಭಾಗ್ಯ ಕೂಡಿಬರಲಿದೆ. ...

ಗುಂಡಣ್ಣ





ಟಿ.ವಿ ಬೆಲೆ ಹೆಚ್ಚಳ ಸಾಧ್ಯತೆ

ರೂಪಾಯಿ ಮೌಲ್ಯ ಇಳಿಕೆಯು ದರ ಏರಿಕೆಗೆ ಕಾರಣ

ನವದೆಹಲಿ (ಪಿಟಿಐ): ಜನವರಿಯಿಂದ ಟೆಲಿವಿಷನ್‌ಗಳ (ಟಿ.ವಿ) ಬೆಲೆ ಶೇ 3ರಿಂದ ಶೇ 4ರಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಉದ್ಯಮದ ತಜ್ಞರು ಹೇಳಿದ್ದಾರೆ.

ಟಿ.ವಿಗಳಲ್ಲಿ ಬಳಸುವ ಮೆಮೊರಿ ಚಿಪ್‌ಗಳ ಬೆಲೆಯಲ್ಲಿನ ಹೆಚ್ಚಳ ಮತ್ತು ರೂಪಾಯಿ ಮೌಲ್ಯ ಇಳಿಕೆಯು ಟಿ.ವಿಗಳ ಬೆಲೆ ಏರಿಕೆಗೆ ಕಾರಣವಾಗಲಿವೆ ಎಂದು ಅವರು ಹೇಳಿದ್ದಾರೆ.

ಓಪನ್ ಸೆಲ್, ಸೆಮಿಕಂಡಕ್ಟರ್ ಚಿಪ್‌ಗಳು ಮತ್ತು ಮದರ್‌ಬೋರ್ಡ್ ನಂತಹ ಪ್ರಮುಖ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ, ರೂಪಾಯಿ ಮೌಲ್ಯ ಇಳಿಕೆಯು ಉದ್ಯಮವನ್ನು ಸಂಕಷ್ಟದ ಸ್ಥಿತಿಯಲ್ಲಿ ಇರಿಸಿದೆ ಎಂದು ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆ ಸರ್ವರ್‌ಗಳಲ್ಲಿ ಬಳಸುವ ಎಚ್‌ಬಿಎಂ ಮೆಮೊರಿಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದರಿಂದ ಜಾಗತಿಕವಾಗಿ ಮೆಮೊರಿ ಚಿಪ್‌ಗಳ ಪೂರೈಕೆಯಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದೆ, ಎಲ್ಲ ಪ್ರಕಾರಗಳ ಮೆಮೊರಿ ಚಿಪ್‌ಗಳ ಬೆಲೆ ಹೆಚ್ಚಾಗುತ್ತಿದೆ. ಚಿಪ್ ತಯಾರಕರು ಹೆಚ್ಚು ಲಾಭ ಕೊಡುವ ಎ.ಐ ಚಿಪ್‌ಗಳ ತಯಾರಿಕೆಗೆ ಗಮನ ನೀಡಿದ್ದರಿಂದ ಚಿಪ್ ಪೂರೈಕೆಯಲ್ಲಿ ಕೊರತೆಯಾಗಿದೆ ಎಂದು ಹೇಳಿದ್ದಾರೆ.

ಕೆಲವು ಟಿ.ವಿ ತಯಾರಕರು ಟಿ.ವಿ. ಬೆಲೆ ಹೆಚ್ಚಳದ ಕುರಿತು ಡೀಲರ್‌ಗಳೊಂದಿಗೆ ಈಗಾಗಲೇ ಮಾತುಕತೆ ನಡೆಸಿದ್ದಾರೆ.



ಮುಖ್ಯಾಂಶಗಳು

- 2024ರಲ್ಲಿ ಭಾರತದ ಟಿ.ವಿ ಮಾರುಕಟ್ಟೆ ಮೌಲ್ಯ ₹1 ಲಕ್ಷ ಕೋಟಿ
- ಜೂನ್ ತ್ರೈಮಾಸಿಕದಲ್ಲಿ ದೇಶದ ಸ್ಮಾರ್ಟ್ ಟಿ.ವಿ ರಫ್ತು ಶೇ 40ರಷ್ಟು ಇಳಿಕೆ
- ಜಿಎಸ್‌ಟಿ ಇಳಿಕೆಯಿಂದ ಕಡಿತವಾಗಿದ್ದ ಟಿ.ವಿ ಬೆಲೆ ಹೆಚ್ಚಳ ಸಾಧ್ಯತೆ

ಟಿ.ವಿ ತಯಾರಿಕಾ ಕಂಪನಿ ಸೂಪರ್ ಪ್ಲಾಸ್ಟ್ರೋನಿಕ್ಸ್ ಪ್ರೈವೆಟ್ ಲಿಮಿಟೆಡ್‌ನ (ಎಸ್‌ಪಿಪಿಎಲ್) ಸಿಇಒ ಅವನೀತ್ ಸಿಂಗ್ ಮಾರ್ವಾ, 'ಕಳೆದ ಮೂರು ತಿಂಗಳಿನಲ್ಲಿ ಮೆಮೊರಿ ಚಿಪ್ ಬೆಲೆ ಶೇ 500ರಷ್ಟು ಹೆಚ್ಚಳವಾಗಿದೆ. ಟಿ.ವಿ. ಬೆಲೆ ಜನವರಿಯಿಂದ ಶೇ 7ರಿಂದ ಶೇ 10ರಷ್ಟು ಏರಿಕೆಯಾಗಬಹುದು' ಎಂದು ಹೇಳಿದ್ದಾರೆ.

> **ಮೆಮೊರಿ ಚಿಪ್‌ಗಳ ಕೊರತೆ ಮತ್ತು ರೂಪಾಯಿ ಮೌಲ್ಯ ಇಳಿಕೆಯಿಂದ ಎಲ್‌ಇಡಿ ಟಿವಿಗಳ ಬೆಲೆ ಶೇ 3ರಷ್ಟು ಹೆಚ್ಚಾಗಬಹುದು**
> **ಎನ್.ಎಸ್. ಸತೀಶ್,** ಹಾಯರ್ ಅಪ್ಲಯನ್ಸ್‌ನ ಭಾರತದ ಅಧ್ಯಕ್ಷ

ಮೆಮೊರಿ ಚಿಪ್ ಬೆಲೆಯು ಇನ್ನೆರಡು ತ್ರೈಮಾಸಿಕಗಳಲ್ಲಿ ಇದೇ ಮಟ್ಟದಲ್ಲಿ ಮುಂದುವರಿದರೆ ಟಿ.ವಿ ಬೆಲೆ ಮತ್ತಷ್ಟು ಹೆಚ್ಚಳವಾಗಬಹುದು ಎಂದು ತಿಳಿಸಿದ್ದಾರೆ.

ಜಿಎಸ್‌ಟಿ ಮಂಡಳಿಯು 32 ಇಂಚು ಮತ್ತು ಅದಕ್ಕಿಂತ ದೊಡ್ಡದಾದ ಟಿ.ವಿ.ಗಳಿಗೆ ವಿಧಿಸುವ ತೆರಿಗೆಯನ್ನು ಶೇ 28ರಿಂದ ಶೇ 18ಕ್ಕೆ ಇಳಿಸಿದೆ. ಇದು ಟಿ.ವಿ ಮಾರಾಟಕ್ಕೆ ಉತ್ತೇಜನ ನೀಡಿದೆ. ಆದರೆ, ಮುಂದಿನ ದಿನಗಳಲ್ಲಿ ಟಿ.ವಿ ಬೆಲೆ ಹೆಚ್ಚಳವು ಮಾರಾಟವನ್ನು ಕಡಿಮೆ ಮಾಡಬಹುದು ಎಂದು ತಜ್ಞರು ಹೇಳಿದ್ದಾರೆ. ಜಿಎಸ್‌ಟಿ ಇಳಿಕೆಯಿಂದ ಟಿ.ವಿ ಬೆಲೆಯು ಅಂದಾಜು ₹4,500ರಷ್ಟು ಕಡಿಮೆ ಆಗಿತ್ತು.

ಫ್ಲಾಷ್ ಮೆಮೊರಿ ಮತ್ತು ಡಿಡಿಆರ್4 ಬೆಲೆಯು ಶೇ 1 ಸಾವಿರದವರೆಗೆ ಏರಿಕೆ ಆಗಿದೆ ಎಂದು ವಿಡಿಯೊಟೆಕ್ಸ್‌ನ ನಿರ್ದೇಶಕ ಅರ್ಜುನ್ ಬಜಾಜ್ ಹೇಳಿದ್ದಾರೆ.

ಯೋನೊ 2.0 ಇಂದು ಬಿಡುಗಡೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ಗ್ರಾಹಕರ ಅನುಕೂಲಕ್ಕಾಗಿ ಯೋನೊ ಆ್ಯಪ್‌ನ ಹೊಸ ಆವೃತ್ತಿಯನ್ನು (2.0) ಸೋಮವಾರ ಬಿಡುಗಡೆ ಮಾಡಲಿದೆ.



'ಬ್ಯಾಂಕ್‌ನ ಡಿಜಿಟಲ್ ಸೇವೆ ಒದಗಿಸುವ ಯೋನೊ ಆ್ಯಪ್‌ನ ಪ್ರಸ್ತುತ ಬಳಕೆದಾರರ ಸಂಖ್ಯೆ 10 ಕೋಟಿಯಷ್ಟಿದೆ. ಈ ಆ್ಯಪ್ ಬಿಡುಗಡೆ ಮಾಡುವ ಮೂಲಕ ಮುಂದಿನ ಎರಡು ವರ್ಷದಲ್ಲಿ ಬಳಕೆದಾರರ ಸಂಖ್ಯೆಯನ್ನು 20 ಕೋಟಿಗೆ ಹೆಚ್ಚಿಸುವ ಗುರಿ ಇದೆ' ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್.ಸೆಟ್ಟಿ ಹೇಳಿದ್ದಾರೆ.

'ಯೋನೊ 2.0'ಅನ್ನು ಮೇಲ್ದರ್ಜೆಗೇರಿಸಲಾಗಿದ್ದು, ಗ್ರಾಹಕರಿಗೆ ಉತ್ತಮ ಅನುಭವ ಮತ್ತು ಬ್ಯಾಂಕ್‌ಗೆ ದೃಢವಾದ ಡಿಜಿಟಲ್ ವೇದಿಕೆಯನ್ನು ನೀಡುತ್ತದೆ. ಮುಂದಿನ ಆರರಿಂದ ಎಂಟು ತಿಂಗಳಿನಲ್ಲಿ ಪೂರ್ಣ ಪ್ರಮಾಣದ ವೈಶಿಷ್ಟ್ಯಗಳೊಂದಿಗೆ ಇದು ಕಾರ್ಯಾರಂಭ ಮಾಡಲಿದೆ ಎಂದು ಹೇಳಿದ್ದಾರೆ.

ಆರ್‌ಬಿಐನ ಎಂಪಿಸಿ ಸಮಿತಿ ಇತ್ತೀಚೆಗೆ ರೆಪೊ ದರ ಇಳಿಕೆ ಮಾಡಿದೆ. ಹೀಗಾಗಿ ಬ್ಯಾಂಕ್, ರೆಪೊ ದರ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಶೇ 0.25ರಷ್ಟು ತಗ್ಗಿಸಿದ್ದು, ಶೇ 7.90ರಷ್ಟಾಗಿದೆ. ಪರಿಷ್ಕೃತ ದರವು ಸೋಮವಾರದಿಂದ ಜಾರಿಗೆ ಬರಲಿದೆ.

'ಭಾರತ ಎಸ್‌ಎಎಫ್ ಜಾಗತಿಕ ರಫ್ತು ಕೇಂದ್ರ ಆಗುವ ನಿರೀಕ್ಷೆ'

ನವದೆಹಲಿ (ಪಿಟಿಐ): 'ಭಾರತವು ಸುಸ್ಥಿರ ವಿಮಾನ ಇಂಧನ (ಎಸ್‌ಎಎಫ್) ರಫ್ತು ಮಾಡುವ ಜಾಗತಿಕ ಕೇಂದ್ರ ಆಗಬಹುದು' ಎಂದು ತ್ರಿವೇಣಿ ಎಂಜಿನಿಯರಿಂಗ್ ಆ್ಯಂಡ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಸಿಇಒ (ಸಕ್ಕರೆ ವ್ಯವಹಾರ) ಸಮೀರ್ ಸಿನ್ಹಾ ಹೇಳಿದ್ದಾರೆ.

ದೇಶವು, ಎಸ್‌ಎಎಫ್ ರಫ್ತು ಕೇಂದ್ರವಾಗಿ ತನ್ನನ್ನು ತಾನು ಗುರುತಿಸಿಕೊಳ್ಳುತ್ತಿದೆ. ಬ್ರೆಜಿಲ್‌ನಂತಹ ಪ್ರತಿಸ್ಪರ್ಧಿ ದೇಶಗಳಿಗೆ ಹೋಲಿಸಿದರೆ ಭಾರತವು ಹೆಚ್ಚುವರಿ ಎಥೆನಾಲ್ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ.

2029ರ ವೇಳೆಗೆ ಸುಸ್ಥಿರ ವಿಮಾನ ಇಂಧನ ಘಟಕ ಕಾರ್ಯಾರಂಭ ಮಾಡಬಹುದು ಎಂದು ತಿಳಿಸಿದ್ದಾರೆ.

ಸುಸ್ಥಿರ ವಿಮಾನ ಇಂಧನದ ರಫ್ತು ಕೇಂದ್ರವಾಗಿ ಹೊರಹೊಮ್ಮಲು ಭಾರತವು ಹೆಚ್ಚಿನ ಸಾಮರ್ಥ್ಯ ಹೊಂದಿದೆ. ಭಾರತದಲ್ಲಿ ಬೆಳೆದ ಕಬ್ಬಿನಿಂದ ಪಡೆದ ಎಥೆನಾಲ್, ಬ್ರೆಜಿಲ್ ದೇಶದ ಎಥೆನಾಲ್‌ಗಿಂತ ಕಡಿಮೆ ಇಂಗಾಲದ ತೀವ್ರತೆಯನ್ನು ಹೊಂದಿದೆ. ಬ್ರೆಜಿಲ್‌ನ ಎಥೆನಾಲ್‌ಗಿಂತ ಭಾರತದ ಎಥೆನಾಲ್ ಅನ್ನು ಬಳಸಿದರೆ ವಾಯುಮಾಲಿನ್ಯ ಇಳಿಕೆಯು ಹೆಚ್ಚಿನ ಪ್ರಮಾಣದಲ್ಲಿ ರುತ್ತದೆ ಎಂದು ಹೇಳಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹690
	12 ಕ್ಕೆ	₹96
ಮೈಸೂರು:	100 ಕ್ಕೆ	₹690

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹433-730
ದ್ವಿತಳಿ (ಬಿ.ವಿ)	₹380-869

ಆರೋಗ್ಯ ವಿಮೆ: ಲೆಕ್ಕಾಚಾರ ಅಗತ್ಯ

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಬದುಕಿನ ಅನಿರೀಕ್ಷಿತ ಸಂದರ್ಭಗಳಿಗೆ ನಾವು ಸಜ್ಜಾಗುವಲ್ಲಿ ಆರೋಗ್ಯ ವಿಮೆ ಮಹತ್ವದ ಪಾತ್ರ ವಹಿಸುತ್ತದೆ. ಆದರೆ ಅನೇಕರಿಗೆ ಸರಿಯಾದ ಆರೋಗ್ಯ ವಿಮೆ ಆಯ್ಕೆ ಮಾಡುವುದು ಹೇಗೆ ಎನ್ನುವುದು ತಿಳಿಯುವುದಿಲ್ಲ. ಕಾಯಬೇಕಾದ ಅವಧಿ, ಕ್ಲೇಮ್ ರೇಷಿಯೊ, ಎಕ್ಸ್‌ಕ್ಲೂಷನ್, ಫ್ಯಾಮಿಲಿ ಫ್ಲೋಟರ್ ಪಾಲಿಸಿ, ವೈಯಕ್ತಿಕ ಪಾಲಿಸಿ... ಹೀಗೆ ವಿಮಾ ವಲಯದ ಕ್ಲಿಷ್ಟ ಪದ ಪ್ರಯೋಗ ಜನಸಾಮಾನ್ಯರನ್ನು ಗೊಂದಲಕ್ಕೆ ದೂಡುತ್ತದೆ. ಏನನ್ನೂ ಅರಿಯದೆ ಆರೋಗ್ಯ ವಿಮೆ ಕೊಳ್ಳುವುದು ಸರಿಯಲ್ಲ. ಒಂದೊಮ್ಮೆ ಹಾಗೆ ಮಾಡಿದರೆ ಕ್ಲೇಮ್‌ಗಾಗಿ ಪರದಾಡಬೇಕಾಗುತ್ತದೆ.

ಎಷ್ಟು ಕವರೇಜ್ ಬೇಕು?: ಬಹಳ ಜನ ಐದಾರು ಲಕ್ಷ ರೂಪಾಯಿ ಮೌಲ್ಯದ ಕವರೇಜ್ ಆಯ್ಕೆ ಮಾಡುತ್ತಾರೆ. ಆದರೆ ಬೆಲೆ ಏರಿಕೆಯ ಪರಿಣಾಮವನ್ನು ಲೆಕ್ಕಾಚಾರ ಮಾಡದೆ ಆರೋಗ್ಯ ವಿಮೆ ಕವರೇಜ್ ಪಡೆಯಬಾರದು. ಭಾರತದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹಣದುಬ್ಬರ ಶೇ 12ರಿಂದ ಶೇ 14ರಷ್ಟಿದೆ. ಪ್ರತಿ ಐದಾರು ವರ್ಷಕ್ಕೆ ವೈದ್ಯಕೀಯ ವೆಚ್ಚಗಳು ದ್ವಿಗುಣವಾಗುತ್ತಿವೆ. ಮಹಾನಗರಗಳಲ್ಲಿ ಒಂದು ಸಣ್ಣ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದರೂ ₹1 ಲಕ್ಷದಿಂದ ₹1.5 ಲಕ್ಷ ವೆಚ್ಚ ಬರುತ್ತದೆ. ಇಂದಿನ ಲೆಕ್ಕದಲ್ಲಿ ಒಂದು ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆಗೆ ₹1.2 ಲಕ್ಷದಿಂದ ₹2.5 ಲಕ್ಷದವರೆಗೆ ಬೇಕು. ಮಂಡಿಚಿಪ್ಪು ಬದಲಾವಣೆಗೆ ₹3.5 ಲಕ್ಷದಿಂದ ₹7 ಲಕ್ಷದವರೆಗೆ ಬೇಕು. ಹೃದಯದ ಬೈಪಾಸ್ ಚಿಕಿತ್ಸೆಗೆ ₹4 ಲಕ್ಷದಿಂದ ₹6 ಲಕ್ಷದವರೆಗೆ ಬೇಕು.

ಹೀಗಾಗಿ ಬೆಂಗಳೂರು, ಹೈದರಾಬಾದ್, ಚೆನ್ನೈನಂತಹ ಮಹಾನಗರಗಳಲ್ಲಿ ವಾಸವಿರುವವರು ಕನಿಷ್ಠ ₹10 ಲಕ್ಷದಿಂದ ₹20 ಲಕ್ಷದ ಕವರೇಜ್ ಇರುವ ಆರೋಗ್ಯ ವಿಮೆ ಹೊಂದುವುದು ಅಗತ್ಯ. ಎರಡನೇ ಮತ್ತು ಮೂರನೇ ಹಂತಗಳ ನಗರಗಳಲ್ಲಿ ವಾಸವಿರುವವರು ಕನಿಷ್ಠ ₹10 ಲಕ್ಷದಿಂದ ₹15 ಲಕ್ಷದವರೆಗೆ ಕವರೇಜ್ ಪಡೆಯುವುದು ಉತ್ತಮ. 'ಅಯ್ಯೋ ಅಷ್ಟೊಂದು ಯಾಕೆ' ಎಂಬ ಧೋರಣೆಯಲ್ಲಿ ಕಡಿಮೆ ಕವರೇಜ್ ಪಡೆದು ಅನಾರೋಗ್ಯದ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿ ಕೈಯಿಂದ ದುಡ್ಡು ಕಳೆದುಕೊಳ್ಳಬೇಡಿ. ಸರಿಯಾದ ಲೆಕ್ಕಾಚಾರದೊಂದಿಗೆ ಆರೋಗ್ಯ ವಿಮೆ ಖರೀದಿಸಿ.

ಸರಿಯಾದ ಪಾಲಿಸಿ ಆಯ್ಕೆ: ತುಂಬಾ ಜನರು ಗೊಂದಲಕ್ಕೆ ಒಳಗಾಗುವುದು ಇಲ್ಲೇ. ಆರೋಗ್ಯ ವಿಮೆಯಲ್ಲಿ ವೈಯಕ್ತಿಕ ವಿಮೆ ಮತ್ತು ಫ್ಯಾಮಿಲಿ ಫ್ಲೋಟರ್ ಪಾಲಿಸಿ ಎಂಬ ಎರಡು ಮಾದರಿಗಳಿವೆ. ವೈಯಕ್ತಿಕ ವಿಮೆಯಲ್ಲಿ ಯಾವ ವ್ಯಕ್ತಿ ವಿಮೆ ಪಡೆದಿರುತ್ತಾರೋ ಅವರಿಗೆ ಕವರೇಜ್ ಇರುತ್ತದೆ. ಫ್ಯಾಮಿಲಿ ಫ್ಲೋಟರ್ ಪಾಲಿಸಿಯಲ್ಲಿ ಇಡೀ ಕುಟುಂಬಕ್ಕೆ ಸೇರಿ ಒಂದು ಕವರೇಜ್ ಇರುತ್ತದೆ. 55 ವರ್ಷದಿಂದ 60 ವರ್ಷ ಮೇಲ್ಪಟ್ಟ ಹಿರಿಯರಿಗೆ ವೈಯಕ್ತಿಕ ವಿಮೆ ಸರಿಹೊಂದುತ್ತದೆ. ವಯಸ್ಸಾದ ಮೇಲೆ ಅನಾರೋಗ್ಯ ಸಮಸ್ಯೆಗಳು ಹೆಚ್ಚಾಗುವ ಕಾರಣ ಒಂದೇ ವರ್ಷದಲ್ಲಿ ಒಂದೆರಡು ಬಾರಿ ಆಸ್ಪತ್ರೆಗೆ ದಾಖಲಾಗುವ ಸಂಭವವಿರುತ್ತದೆ. ಅವರಿಗೆ ಪ್ರೀಮಿಯಂ ಹೆಚ್ಚಿದ್ದರೂ ವೈಯಕ್ತಿಕ ವಿಮೆ ಹೆಚ್ಚು ಸೂಕ್ತ. ಫ್ಯಾಮಿಲಿ ಫ್ಲೋಟರ್ ಪಾಲಿಸಿಯಲ್ಲಿ ಎಲ್ಲರಿಗೂ ಸೇರಿಸಿ ಒಂದೇ ಕವರೇಜ್ ಇರುತ್ತದೆ. ಕುಟುಂಬದ ಸದಸ್ಯರು 45 ವರ್ಷ ವಯಸ್ಸಿನ ಒಳಗಿದ್ದರೆ ಇದು ಸರಿಹೊಂದುತ್ತದೆ. 30 ವರ್ಷದ ಪತಿ – ಪತ್ನಿ ಮತ್ತು ಒಂದು ಮಗು ಇರುವ ಕುಟುಂಬಕ್ಕೆ ₹15 ಲಕ್ಷದ ಫ್ಯಾಮಿಲಿ ಫ್ಲೋಟರ್ ಪಾಲಿಸಿ ತೆಗೆದುಕೊಂಡರೆ, ಮೂರು ಜನರಿಗೆ ಪ್ರತ್ಯೇಕವಾಗಿ ₹10 ಲಕ್ಷದ ವೈಯಕ್ತಿಕ ವಿಮೆ ತೆಗೆದುಕೊಳ್ಳುವುದಕ್ಕಿಂತ ಕಡಿಮೆ ಕಂತು ಬರುತ್ತೆ.

ಕಾಯುವಿಕೆ ಅವಧಿ: ಪ್ರಮುಖವಾಗಿ ನಾಲ್ಕು ರೀತಿಯ ಕಾಯುವಿಕೆ ಅವಧಿ ಇರುತ್ತವೆ. ಒಂದನೆಯದ್ದು ಆರಂಭಿಕ ಕಾಯುವಿಕೆ ಅವಧಿ. ಇದರ ಪ್ರಕಾರ ಮೊದಲ 30 ದಿನ ಯಾವುದೇ ಸಾಮಾನ್ಯ ಕಾಯಿಲೆಗಳಿಗೆ ಕ್ಲೇಮ್ ಸಿಗದು. ಆದರೆ ಅಪಘಾತ ಏನಾದರೂ ಆದರೆ ವಿಮೆ ಪಡೆದ ಮೊದಲ ದಿನದಿಂದಲೇ ಕವರೇಜ್ ಸಿಗುತ್ತದೆ. ಎರಡನೆಯದ್ದು ಅದಾಗಲೇ ಇರುವ ಕಾಯಿಲೆಗೆ ಸಂಬಂಧಿಸಿದ ಕಾಯುವ ಅವಧಿ. ಪಾಲಿಸಿ ಪಡೆದವರಿಗೆ ಕೆಲವು ಕಾಯಿಲೆಗಳಿದ್ದರೆ ಅದರ ಚಿಕಿತ್ಸೆಗೆ ತಕ್ಷಣದಿಂದ ನೆರವು ಸಿಗುವುದಿಲ್ಲ. ಅದಾಗಲೇ ಇರುವ ಕಾಯಿಲೆಗಳಿಗೆ ಕಾಯುವಿಕೆ ಅವಧಿ 2 ವರ್ಷದಿಂದ 4 ವರ್ಷದವರೆಗೆ ಇರುತ್ತದೆ. ಬಿ.ಪಿ, ಸಕ್ಕರೆ ಕಾಯಿಲೆ, ಥೈರಾಯ್ಡ್, ಅಸ್ತಮಾ, ಪಿಸಿಓಎಸ್ ಹೀಗೆ ಅನೇಕ ಕಾಯಿಲೆಗಳಿಗೆ ಈ ಕಾಯುವಿಕೆ ಅವಧಿ ಅನ್ವಯಿಸುತ್ತದೆ. ಯಾವ ವಿಮಾ ಕಂಪನಿಯಲ್ಲಿ ಕಡಿಮೆ ಕಾಯುವಿಕೆ ಅವಧಿ ಇದೆಯೋ ಅದು ಉತ್ತಮ. ಮೂರನೆಯದು 'ನಿರ್ದಿಷ್ಟ ಕಾಯಿಲೆಗಳಿಗೆ ಸಂಬಂಧಿಸಿದ ಕಾಯುವಿಕೆ ಅವಧಿ'. ಕೆಲವು ಸಾಮಾನ್ಯ ಆರೋಗ್ಯ ಸಮಸ್ಯೆಗಳಾದ ಹರ್ನಿಯಾ, ಪೈಲ್ಸ್, ಕ್ಯಾಟರಾಕ್ಟ್ (ಕಣ್ಣಿನ ಪೊರೆ ಚಿಕಿತ್ಸೆ), ಕೀಲು ಚಿಕಿತ್ಸೆಗೆ ವಿಮಾ ನೆರವು ಪಡೆಯಲು ಕನಿಷ್ಠ 1ರಿಂದ 2 ವರ್ಷ ಕಾಯಬೇಕಾಗುತ್ತೆ. ನಾಲ್ಕನೆಯದು 'ಮಾತೃತ್ವ ಕಾಯುವಿಕೆ ಅವಧಿ'. ಇದು ಸಾಮಾನ್ಯವಾಗಿ 2 ವರ್ಷದಿಂದ 4 ವರ್ಷದವರೆಗೆ ಇರುತ್ತದೆ.

ವಿಶ್ವಾಸಾರ್ಹ ಸಂಸ್ಥೆ: ವಿಶ್ವಾಸಾರ್ಹ ವಿಮಾ ಕಂಪನಿಯಿಂದ ಆರೋಗ್ಯ ವಿಮೆ ಖರೀದಿಸುವುದು ಮುಖ್ಯ. ಆರೋಗ್ಯ ವಿಮೆ ಕೊಳ್ಳುವಾಗ ಕ್ಲೇಮ್ ಪಾವತಿ ಅನುಪಾತ ಮುಖ್ಯ. ಕ್ಲೇಮ್‌ಗಾಗಿ ಅರ್ಜಿ ಸಲ್ಲಿಸಿದವರ ಪೈಕಿ ಎಷ್ಟು ಮಂದಿಗೆ ಸಂಸ್ಥೆ ವಿಮಾ ಕವರೇಜ್ ನೀಡಿದೆ ಎನ್ನುವುದರ ಲೆಕ್ಕಾಚಾರ ಕ್ಲೇಮ್ ಪಾವತಿ ಅನುಪಾತ. ಇದು ಶೇ 95ಕ್ಕಿಂತ ಹೆಚ್ಚಿಗೆ ಇದ್ದರೆ ಒಳ್ಳೆಯದು. ಇನ್‌ಕರ್ಡ್ ಕ್ಲೇಮ್ ರೇಷಿಯೋ (ಪ್ರೀಮಿಯಂ ಮೂಲಕ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಎಷ್ಟು ಪಾಲನ್ನು ವಿಮಾ ಪರಿಹಾರವಾಗಿ ನೀಡಲಾಗಿದೆ ಎಂಬುದನ್ನು ಹೇಳುತ್ತದೆ) ಶೇ 60ರಿಂದ ಶೇ 90ರ ನಡುವೆ ಇದ್ದರೆ ಚೆನ್ನ. ನಿರ್ದಿಷ್ಟ ವಿಮಾ ಕಂಪನಿಯ ಆಸ್ಪತ್ರೆ ಜಾಲ ಎಷ್ಟು ಉತ್ತಮವಾಗಿದೆ ನೋಡಿ. ಹೆಚ್ಚು ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವ ಕಂಪನಿ ಪರಿಗಣಿಸಿ. ಇನ್ಶೂರೆನ್ಸ್ ಕೊಳ್ಳಲು ಇಚ್ಛಿಸುವ ಕಂಪನಿಯ ಬಗ್ಗೆ ಜನರ ದೂರುಗಳ ಪ್ರಮಾಣ ಹೇಗಿದೆ ನೋಡಿಕೊಳ್ಳಿ.

> **ಏನೇನು ಕವರ್ ಆಗದು?**
>
> ಆರೋಗ್ಯ ವಿಮೆ ಕೊಳ್ಳುವಾಗ ಯಾವುದಕ್ಕೆ ಕವರೇಜ್ ಸಿಗುತ್ತದೆ, ಯಾವುದಕ್ಕೆ ಸಿಗದು ಎನ್ನುವುದರ ಬಗ್ಗೆ ಅರಿವಿರಲಿ. ಸಾಮಾನ್ಯ ಯೋಜನೆಗಳಲ್ಲಿ ಐವಿಎಫ್, ಬಂಜೆತನ ಚಿಕಿತ್ಸೆ, ಸೌಂದರ್ಯವರ್ಧಕ ಚಿಕಿತ್ಸೆ, ಹಲ್ಲುಗಳ ಚಿಕಿತ್ಸೆ (ಅಪಘಾತ ಆದರೆ ಸಿಗುತ್ತದೆ), ಹೊರರೋಗಿ ಚಿಕಿತ್ಸೆ, ವೈದ್ಯಕೀಯವಲ್ಲದ ಕಾರಣಕ್ಕೆ ಆಸ್ಪತ್ರೆಗೆ ದಾಖಲಾಗಿ ಪಡೆಯುವ ಚಿಕಿತ್ಸೆಗೆ ವಿಮಾ ಕವರೇಜ್ ಸಿಗದು. ಆದರೆ, ಒಳ್ಳೆಯ ಆರೋಗ್ಯ ವಿಮೆಯು ರೋಬೊಟಿಕ್ ಸರ್ಜರಿ, ಆಧುನಿಕ ಕ್ಯಾನ್ಸರ್ ಚಿಕಿತ್ಸೆ, ಡೇ ಕೇರ್ ಪ್ರೊಸೀಜರ್ಸ್, ಹೋಮ್ ಕೇರ್ ಟ್ರೀಟ್‌ಮೆಂಟ್, ಮೆಂಟಲ್ ಹೆಲ್ತ್ ಕವರೇಜ್ ಬಾರಿಯಾಟ್ರಿಕ್ ಸರ್ಜರಿಗೆ (ಇದರ ವಿಮಾ ಸೌಲಭ್ಯವನ್ನು ಪ್ರತಿ ವ್ಯಕ್ತಿಯ ಸ್ಥಿತಿಯನ್ನು ಆಧರಿಸಿ ತೀರ್ಮಾನಿಸಲಾಗುತ್ತದೆ) ನೆರವು ನೀಡುತ್ತದೆ. ಹೆಚ್ಚು ಕವರೇಜ್ ವ್ಯಾಪ್ತಿ ಇದ್ದಾಗ ಕಂತು ಕೂಡ ಜಾಸ್ತಿ ಇರುತ್ತದೆ.

ಕಚ್ಚಾ ತೈಲ ಆಮದಿಗೆ ಸಂಘರ್ಷ ಸಮಸ್ಯೆ

ಸರ್ಕಾರಿ ಉದ್ದಿಮೆಗಳ ಕುರಿತ ಸಂಸತ್ತಿನ ಸಮಿತಿಯ ವರದಿ ಕಳೆದ ವಾರ ಮಂಡನೆ

ನವದೆಹಲಿ (ಪಿಟಿಐ): ಭಾರತವು ಕಚ್ಚಾ ತೈಲಕ್ಕಾಗಿ ಆಮದನ್ನು ನೆಚ್ಚಿಕೊಂಡಿರುವುದು ಹಾಗೂ ಜಾಗತಿಕ ಬಿಕ್ಕಟ್ಟುಗಳು ಹೆಚ್ಚಾಗುತ್ತಿರುವುದು ಬಹುದೊಡ್ಡ ಸವಾಲುಗಳು ಎಂದು ಸಂಸತ್ತಿನ ಸಮಿತಿಯೊಂದು ಕಳವಳ ವ್ಯಕ್ತಪಡಿಸಿದೆ. ಕೇಂದ್ರ ಸರ್ಕಾರವು ಇಂಧನ ಆಮದು ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಅದು ಒತ್ತಾಯಿಸಿದೆ.

ಸರ್ಕಾರಿ ಉದ್ದಿಮೆಗಳ ಸಮಿತಿಯ ವರದಿಯನ್ನು ಸಂಸತ್ತಿನಲ್ಲಿ ಕಳೆದ ವಾರ ಮಂಡಿಸಲಾಗಿದೆ. ಭಾರತವು ತನಗೆ ಅಗತ್ಯವಿರುವ ಕಚ್ಚಾ ತೈಲದಲ್ಲಿ ಶೇಕಡ 89ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ.



ರಷ್ಯಾ–ಉಕ್ರೇನ್ ಯುದ್ಧ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಭಾರತ ನೆಚ್ಚಿಕೊಂಡಿರುವ ಇಂಧನ ಪೂರೈಕೆ ವ್ಯವಸ್ಥೆಯು ಎಷ್ಟು ದುರ್ಬಲವಾಗಿದೆ ಎಂಬುದನ್ನು ತೋರಿಸಿವೆ ಎಂದು ಹೇಳಿದೆ.

ಇದರಿಂದಾಗಿ, ಸಂಘರ್ಷ, ನಿರ್ಬಂಧ, ಕಚ್ಚಾ ತೈಲ ಉತ್ಪಾದಿಸುವ ದೇಶಗಳಲ್ಲಿ ನಾಗರಿಕ ಅಶಾಂತಿ, ಹಡಗುಗಳ ಮಾರ್ಗದಲ್ಲಿ ಸಮಸ್ಯೆ ಉಂಟಾದಲ್ಲಿ ಭಾರತವು ಕೂಡ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ವರದಿಯು ಹೇಳಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹಾಗೂ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಕಚ್ಚಾ ತೈಲ ಆಮದು ಮೂಲಗಳನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಚುರುಕುಗೊಳಿಸಬೇಕು. ಪರ್ಯಾಯ ಆಮದು ಮಾರ್ಗಗಳನ್ನು ರೂಪಿಸಿಕೊಳ್ಳಬೇಕು, ಪೆಟ್ರೋಲಿಯಂ ಸಂಗ್ರಹಾಗಾರಗಳ ಸಾಮರ್ಥ್ಯ ಹೆಚ್ಚು ಮಾಡಬೇಕು ಎಂದು ಸಮಿತಿಯು ಶಿಫಾರಸು ಮಾಡಿದೆ.

'ಸಂಘರ್ಷಗಳು, ನಿರ್ಬಂಧಗಳು, ಅಶಾಂತಿಯ ಪರಿಣಾಮವಾಗಿ ಭಾರತವು ಕಚ್ಚಾ ತೈಲ ಪೂರೈಕೆಯಲ್ಲಿ ಅನಿಶ್ಚಿತತೆ ಎದುರಿಸಬಹುದು. ಪೂರೈಕೆಯಲ್ಲಿ ವ್ಯತ್ಯಾಸ ಆದರೆ ಬೆಲೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ' ಎಂದು ಸಮಿತಿಯ ವರದಿ ಹೇಳಿದೆ.

ಕಚ್ಚಾ ತೈಲ ಉತ್ಪಾದನೆ ಮಾಡುವ ದೇಶಗಳ ಜೊತೆಗಿನ ರಾಜತಾಂತ್ರಿಕ ಒಡನಾಟವನ್ನು ಬಲಪಡಿಸಲು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜೊತೆಗೂಡಿ ಕೆಲಸ ಮಾಡಬೇಕು ಎಂದು ಹೇಳಿದೆ.

ಭಾರತದ ರಾಯಭಾರಿ ಆರೋಗ್ಯ ಸ್ಥಿರ

ಕಠ್ಮಂಡು(ಪಿಟಿಐ): ಲಲಿತ್‌ಪುರ ಜಿಲ್ಲೆಯ ಚಂಪಾದೇವಿ ಬೆಟ್ಟದಲ್ಲಿ ಚಾರಣ ಕೈಗೊಂಡಾಗ ದಿಢೀರ್ ಅಸ್ವಸ್ಥರಾಗಿದ್ದ ನೇಪಾಳದಲ್ಲಿನ ಭಾರತೀಯ ರಾಯಭಾರಿ ನವೀನ್ ಶ್ರೀವಾಸ್ತವ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಉತ್ತರ ಕಠ್ಮಂಡುವಿನ ಚಂಪಾದೇವಿ ಬೆಟ್ಟ ಹತ್ತುವಾಗ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೇ ಅವರನ್ನು ಕಠ್ಮಂಡುವಿಗೆ ಕರೆತಂದು ಗ್ರ್ಯಾಂಡಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ನಂತರ ಶ್ರೀವಾಸ್ತವ ಅವರ ಸ್ಥಿತಿ ಸಾಮಾನ್ಯವಾಗಿದೆ. ಆಸ್ಪತ್ರೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದಾರೆ ಎಂದು ಭಾರತೀಯ ರಾಯಭಾರ ಕಚೇರಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಮಾನಯಾನ ಕಂಪನಿಗಳಿಗೆ ನಷ್ಟ

● ಶೆಮಿನ್ ಜಾಯ್

ನವದೆಹಲಿ: ಒಟ್ಟು ಹನ್ನೊಂದು ದೇಶಿ ವಿಮಾನಯಾನ ಕಂಪನಿಗಳು 2024–25ರಲ್ಲಿ ಒಟ್ಟು ₹5,289 ಕೋಟಿ ನಷ್ಟ ವರದಿ ಮಾಡಿವೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಲೋಕಸಭೆಗೆ ತಿಳಿಸಿದೆ. ಈ ಹನ್ನೊಂದು ಕಂಪನಿಗಳಲ್ಲಿ ಸರಕು ಸಾಗಣೆ ಕ್ಷೇತ್ರದ ಕಂಪನಿಯೂ ಇದೆ.



2022–23ರಲ್ಲಿ ವರದಿಯಾಗಿದ್ದ ನಷ್ಟದ ಒಟ್ಟು ಮೊತ್ತವು ₹18,606 ಕೋಟಿ. ಇದಕ್ಕೆ ಹೋಲಿಸಿದರೆ 2024–25ರಲ್ಲಿ ನಷ್ಟವು ಕಡಿಮೆ ಆಗಿದೆ. ಆದರೆ 2023–24ರಲ್ಲಿ ವರದಿಯಾಗಿದ್ದ ₹924 ಕೋಟಿ ನಷ್ಟಕ್ಕೆ ಹೋಲಿಸಿದರೆ ಹೆಚ್ಚು.

ಸಚಿವ ಮುರಳೀಧರ ಮಾಹೋಲ್ ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ವಿವರ ನೀಡಿದ್ದಾರೆ. ದೇಶದ 11 ವಿಮಾನಯಾನ ಕಂಪನಿಗಳ ಪೈಕಿ ಇಂಡಿಗೊ, ಸ್ಟಾರ್ ಏರ್, ಇಂಡಿಯಾ ಒನ್ ಏರ್ ಮತ್ತು ಬ್ಲೂ ಡಾರ್ಟ್ 2024–25ರಲ್ಲಿ ಲಾಭ ದಾಖಲಿಸಿವೆ.

ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಅಲಯನ್ಸ್ ಏರ್, ಆಕಾಸಾ ಏರ್, ಫ್ಲೈ91, ಕ್ವಿಕ್‌ಜೆಟ್ ಕಾರ್ಗೊ, ಸ್ಪೈಸ್‌ಜೆಟ್ ನಷ್ಟ ವರದಿ ಮಾಡಿವೆ.

ವಿಮಾನಯಾನ ಕಂಪನಿಗಳ ಪೈಕಿ ಇಂಡಿಗೊ ಅತಿಹೆಚ್ಚು ಲಾಭ (₹7,253 ಕೋಟಿ) ವರದಿ ಮಾಡಿದೆ. ಏರ್ ಇಂಡಿಯಾ ಎಕ್ಸ್‌ಪ್ರೆಸ್ ಅತಿಹೆಚ್ಚು ನಷ್ಟ (₹5,832 ಕೋಟಿ) ವರದಿ ಮಾಡಿದೆ.

ದೇಶದ ದೊಡ್ಡ ಸ್ಯಾಂಡ್‌ವಿಚ್

ಪಿಟಿಐ ಚಿತ್ರ



ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್‌ನ (ಐಎಚ್‌ಎಂ) ವಿದ್ಯಾರ್ಥಿಗಳು ದೇಶದಲ್ಲೇ ಅತಿದೊಡ್ಡದಾದ 270 ಅಡಿ ಉದ್ದದ ಸ್ಯಾಂಡ್‌ವಿಚ್ ಅನ್ನು ಭಾನುವಾರ ಸಿದ್ಧಪಡಿಸಿದರು

ಬ್ರಿಟನ್, ಈಜಿಪ್ಟ್ ಸಚಿವರ ಭೇಟಿಯಾದ ಜೈಶಂಕರ್

ದುಬೈ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಯೂರೋಪ್‌ನ ಕೆಲವು ದೇಶಗಳು ಮತ್ತು ಬ್ರಿಟನ್ ಹಾಗೂ ಈಜಿಪ್ಟ್‌ನ ವಿದೇಶಾಂಗ ಸಚಿವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಜೈಶಂಕರ್ ಸೇರಿದಂತೆ ವಿವಿಧ ದೇಶಗಳ ವಿದೇಶಾಂಗ ಸಚಿವರು, ನಾಯಕರು ಮತ್ತು ನೀತಿ ನಿರೂಪಕರು ಮೂರು ದಿನಗಳ ಅಂತರರಾಷ್ಟ್ರೀಯ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ದುಬೈನಲ್ಲಿದ್ದಾರೆ.

'ಲಕ್ಸೆಂಬರ್ಗ್‌ನ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ಕ್ಸೇವಿಯರ್ ಬೆಟೆಲ್, ಪೋಲೆಂಡ್‌ನ ಉಪ ಪ್ರಧಾನಿ ಮತ್ತು ವಿದೇಶಾಂಗ ಸಚಿವ ರೊಡೊಸ್ಲಾವ್ ಸಿಕೋರ್‌ಸ್ಕಿ ಹಾಗೂ ಲಾತ್ವಿಯದ ವಿದೇಶಾಂಗ ಸಚಿವ ಬೈಬಾ ಬ್ರೇಜ್ ಅವರನ್ನು ಭೇಟಿಯಾದೆ' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಬ್ರಿಟನ್‌ನ ಉಪ ಪ್ರಧಾನಿ ಡೇವಿಡ್ ಲ್ಯಾಮಿ ಮತ್ತು ಈಜಿಪ್ಟ್‌ನ ವಿದೇಶಾಂಗ ಸಚಿವ ಬದ್ರ್ ಅಬ್ದೆಲ್ಲತಿ ಅವರನ್ನೂ ಭೇಟಿಯಾದೆ ಎಂದು ಇನ್ನೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಬತ್ತಿದ್ದ ಕೆರೆಗೆ ಭರಪೂರ ನೀರು

ಒಂದನೇ ಪುಟದಿಂದ...

ಮಾಚೇನಹಳ್ಳಿಯಿಂದ ಎಸ್. ಬಿದರೆ ಕೆರೆಗೆ 2 ಕಿ.ಮೀ ಅಂತರವಿದ್ದು, ಪೈಪ್, ಟಿ.ಸಿ. ಅಳವಡಿಸಿ, ಪಂಪ್‌ಸೆಟ್ ನೆರವಿನಿಂದ ನೀರು ಹರಿಸಲು ನಿರ್ಧರಿಸಿದರು. ವಿದ್ಯುದೀಕರಣವನ್ನು ಗ್ರಾಮದಲ್ಲಿ ರೀವೈಂಡಿಂಗ್ ಕೆಲಸ ಮಾಡುವ ಯುವಕರು, ಪೈಪ್‌ಲೈನ್ ಅಳವಡಿಸಲು ಪ್ಲಂಬರ್‌ಗಳು ಸಿದ್ಧರಾದರು. ಕೂಲಿ ಕಾರ್ಮಿಕರು, ಸರ್ಕಾರಿ ನೌಕರರು, ಸುತ್ತಮುತ್ತಲ ಗ್ರಾಮಸ್ಥರೂ ಹಣ ಸಹಾಯ ಮಾಡಿದರು.

ಕಳಸಾಪುರ ಎಂಯುಎಸ್‌ಎಸ್‌ನಿಂದ ಬಂದ ವಿದ್ಯುತ್ ಲೈನ್ ಮಾಚೇನಹಳ್ಳಿ ಬಳಿ ಇತ್ತು. ಅಲ್ಲಿಯೇ ಟಿ.ಸಿ ಅಳವಡಿಸಲು ಮುಂದಾದರು. ಅದಕ್ಕಾಗಿ ₹2.50 ಲಕ್ಷ ಹಾಗೂ ಪಂಪ್‌ಸೆಟ್‌ಗೆ ₹2.10 ಲಕ್ಷ ವೆಚ್ಚವಾಯಿತು. ನೀರೆತ್ತಲು 25 ಅಶ್ವಶಕ್ತಿಯ ಪಂಪ್‌ಸೆಟ್ ಸಿದ್ಧವಾದವು.

> **ಎಸ್.ಬಿದರೆ ಗ್ರಾಮಸ್ಥರು ಕೆರೆಗೆ ನೀರು ತುಂಬಿಸಲು ಮೆಸ್ಕಾಂನಿಂದ ಸಹಕಾರ ಕೊಡಿಸಿದ್ದೇನೆ. ಶಾಶ್ವತ ನೀರಾವರಿಗೆ ಭದ್ರಾ ಉಪ ಕಣಿವೆ ಯೋಜನೆ ಮತ್ತು ರಣಘಟ್ಟ ಯೋಜನೆ ಜಾರಿ ಆಗಲಿವೆ**
> **ಎಚ್.ಡಿ.ತಮ್ಮಯ್ಯ,** ಶಾಸಕ, ಚಿಕ್ಕಮಗಳೂರು

'ನಮ್ಮ ಕೆರೆಗೆ ನೀರು ತುಂಬಿಸುವ ಯೋಜನೆಗೆ ಎಲ್ಲರ ನೆರವೂ ಇದೆ. ಟಿ.ಸಿ ಅಳವಡಿಸಲು ಶಾಸಕ ಎಚ್.ಡಿ.ತಮ್ಮಯ್ಯ ಅವರ ಸಹಕಾರವೂ ಇದೆ. ಈ ಯೋಜನೆಗೆ ಇದುವರೆಗೆ ಸುಮಾರು ₹25 ಲಕ್ಷ ವೆಚ್ಚವಾಗಿದೆ' ಎಂದು ಗ್ರಾಮದ ಹಿರಿಯ ಶಂಕರ ಲಿಂಗೇಗೌಡ ತಿಳಿಸಿದರು.

ಇದೇ ರೀತಿ ಸಮೀಪದ ಸಿಂದಿಗೆರೆ, ನಾಗರಾಳು ಗ್ರಾಮಸ್ಥರು ಕೆರೆ ತುಂಬಿಸಲು ಮುಂದಾಗಿದ್ದಾರೆ.

ದೇಗುಲ ಕುಸಿತ: ಭಾರತೀಯನ ಸಾವು

ಜೊಹಾನಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ಕ್ವಾಜುಲು– ನತಾಲ್ ಪ್ರಾಂತ್ಯದಲ್ಲಿ ನಿರ್ಮಾಣ ಹಂತದ ನಾಲ್ಕು ಅಂತಸ್ತಿನ ಹಿಂದೂ ದೇವಾಲಯ ಕುಸಿದಿದ್ದು, ನಾಲ್ವರು ಮೃತಪಟ್ಟಿದ್ದಾರೆ.


ನಿರ್ಮಾಣ ಹಂತದ ಅಹೋಬಿಲಂ ದೇವಸ್ಥಾನದ ಕಟ್ಟಡ ಕುಸಿದು ಈ ದುರ್ಘಟನೆ ಸಂಭವಿಸಿದೆ. ಭಾರತೀಯ ಸಂಜಾತ ವಿಕ್ಕಿ ಜೈರಾಜ್ ಪಾಂಡೆ (52) ಸಹ ಈ ದುರ್ಘಟನೆಯಲ್ಲಿ ಮೃತರಾಗಿದ್ದು, ದೇವಾಲಯದ ಟ್ರಸ್ಟ್‌ನ ಕಾರ್ಯನಿರ್ವಾಹಕ ಸದಸ್ಯ ಹಾಗೂ ನಿರ್ಮಾಣ ಯೋಜನೆಯ ವ್ಯವಸ್ಥಾಪಕರಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಸಿದು ಬಿದ್ದ ದೇಗುಲ ಕಟ್ಟಡದ ಅವಶೇಷದ ಕೆಳಭಾಗದಲ್ಲಿ ಎಷ್ಟು ಜನರು ಸಿಲುಕಿದ್ದಾರೆ ಎಂಬ ನಿಖರ ಸಂಖ್ಯೆ ಗೊತ್ತಾಗಿಲ್ಲ ಎಂದಿದ್ದಾರೆ.

ಕಟ್ಟಡ ಕೆಲಸದಲ್ಲಿ ನಿರತರಾಗಿದ್ದ ಕಾರ್ಮಿಕರೊಬ್ಬರು ಮತ್ತು ಭಕ್ತರೊಬ್ಬರು ಶುಕ್ರವಾರ ಮೃತಪಟ್ಟರೆ, ರಕ್ಷಣಾ ಕಾರ್ಯಾಚರಣೆ ಸಂದರ್ಭ ಇಬ್ಬರ ಶವಗಳು ಶನಿವಾರ ಪತ್ತೆಯಾಗಿವೆ.

ಉಕ್ರೇನ್ –ರಷ್ಯಾ ಶಾಂತಿ ಮಾತುಕತೆ ಬರ್ಲಿನ್‌ಗೆ ಅಮೆರಿಕ ಅಧಿಕಾರಿಗಳ ಭೇಟಿ

ಬರ್ಲಿನ್ (ಎಪಿ): ರಷ್ಯಾ–ಉಕ್ರೇನ್ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಮಾತುಕತೆಗಾಗಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹಾಗೂ ಅಮೆರಿಕದ ರಾಯಭಾರ ಅಧಿಕಾರಿಗಳು ಭಾನುವಾರ ಜರ್ಮನಿಯ ಬರ್ಲಿನ್‌ಗೆ ಭೇಟಿ ನೀಡಿದ್ದಾರೆ.



ವೊಲೊಡಿಮಿರ್ ಝೆಲೆನ್‌ಸ್ಕಿ

ಈ ಕುರಿತು ಝೆಲೆನ್‌ಸ್ಕಿ ಮಾಹಿತಿ ನೀಡಿದ್ದಾರೆ. ಅಮೆರಿಕ ಮತ್ತು ಯುರೋಪ್‌ನ ಅಧಿಕಾರಿಗಳು ಬರ್ಲಿನ್‌ನಲ್ಲಿ ಸರಣಿ ಮಾತುಕತೆಗಳನ್ನು ನಡೆಸಲಿದ್ದಾರೆ. ಇದೇ ವೇಳೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ಹಾಗೂ ಇತರೆ ಅಧಿಕಾರಿಗಳನ್ನು ತಾವು ವೈಯಕ್ತಿಕವಾಗಿ ಭೇಟಿಯಾಗಿ ಮಾತುಕತೆ ನಡೆಸುವುದಾಗಿಯೂ ಝೆಲೆನ್‌ಸ್ಕಿ ತಿಳಿಸಿದ್ದಾರೆ.

ನ್ಯಾಟೊ ರಾಷ್ಟ್ರಗಳಿಗೆ ಒದಗಿಸುವಂತಹ ಭದ್ರತಾ ಖಾತರಿಗಳನ್ನು ಉಕ್ರೇನ್‌ಗೂ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ಒದಗಿಸಬೇಕು ಎಂದು ಝೆಲೆನ್‌ಸ್ಕಿ ಬೇಡಿಕೆ ಇಟ್ಟಿದ್ದಾರೆ ಎಂಬ ಮಾತು ಕೇಳಿಬರುತ್ತಿರುವ ಬಗ್ಗೆ ಮಾಧ್ಯಮಗಳು ಪ್ರಶ್ನಿಸಿವೆ.

ಇದಕ್ಕೆ ಉತ್ತರಿಸಿರುವ ಝೆಲೆನ್‌ಸ್ಕಿ, 'ರಷ್ಯಾದ ಮತ್ತೊಂದು ಸುತ್ತಿನ ಅತಿಕ್ರಮಣವನ್ನು ತಡೆಗಟ್ಟಲು ಈ ಭದ್ರತಾ ಖಾತರಿ ಅಗತ್ಯವಿದೆ. ಅಲ್ಲದೇ, ಹಿಂದೆಯೇ ನಾವು ಈ ಬಗ್ಗೆ ಸ್ಪಷ್ಟನೆ ನೀಡಿದ್ದೇವೆ' ಎಂದಿದ್ದಾರೆ.

ಏತನ್ಮಧ್ಯೆ, ಡೊನೆಟ್‌ಸ್ಕ್ ಪ್ರಾಂತ್ಯದಲ್ಲಿ ಉಕ್ರೇನ್ ಪಡೆಯು ಸಂಪೂರ್ಣವಾಗಿ ತನ್ನ ಸೇನಾ ನಿಯೋಜನೆಯನ್ನು ಹಿಂಪಡೆಯಬೇಕು ಹಾಗೂ ನ್ಯಾಟೊ ಸೇರ್ಪಡೆಗೊಳ್ಳುವ ಪ್ರಯತ್ನವನ್ನು ಕೈಬಿಡಬೇಕು ಎಂದು ರಷ್ಯಾ ಮತ್ತೆ ಪುನರುಚ್ಚರಿಸಿದೆ. ಈ ಮೂಲಕ ಶಾಂತಿ ಮಾತುಕತೆಗಳು ಫಲಪ್ರದವಾಗುವುದು ಸಾಧ್ಯವೇ ಎಂಬ ಶಂಕೆ ಮೂಡಿದೆ.

ರಾಕೆಟ್ ದಾಳಿ: ಥಾಯ್ ಪ್ರಜೆ ಸಾವು

ಗಡಿ ಪಕ್ಕದ ಭೂಮಿಗಾಗಿ ಎರಡೂ ದೇಶಗಳ ಹೋರಾಟ

ಕಂತರಲಕ್ (ಥಾಯ್ಲೆಂಡ್) (ಎಪಿ): ಕಾಂಬೋಡಿಯಾದಿಂದ ಭಾನುವಾರ ನಡೆದ ರಾಕೆಟ್ ದಾಳಿಯಲ್ಲಿ 63 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಥಾಯ್ಲೆಂಡ್ ಸರ್ಕಾರ ಹೇಳಿದೆ.

ಆಗ್ನೇಯ ಏಷ್ಯಾದ ಎರಡೂ ರಾಷ್ಟ್ರಗಳ ಗಡಿಯಲ್ಲಿ ಎರಡು ವಾರಗಳಿಂದ ಯುದ್ಧ ನಡೆಯುತ್ತಿದ್ದು, ಅದರ ಪರಿಣಾಮವಾಗಿ ಸಂಭವಿಸಿದ ಮೊದಲ ನಾಗರಿಕ ಸಾವು ಇದಾಗಿದೆ ಎಂದು ವರದಿಯಾಗಿದೆ.

ಡಿಸೆಂಬರ್ 7ರಂದು ನಡೆದ ಸಂಘರ್ಷದಲ್ಲಿ ಇಬ್ಬರು ಥಾಯ್ ಸೈನಿಕರು ಗಾಯಗೊಂಡಿದ್ದರು. ಇದರ ನಂತರ ದೊಡ್ಡ ಪ್ರಮಾಣದಲ್ಲಿ ಸಂಘರ್ಷ ನಡೆಯುತ್ತಿದ್ದು, ಭಾನುವಾರವೂ ಮುಂದುವರೆದಿದೆ ಎಂದು ಉಭಯ ದೇಶಗಳು ದೃಢಪಡಿಸಿವೆ. ಗಡಿಗಳ ಪಕ್ಕದ ಭೂಮಿಗಾಗಿ ಎರಡೂ ದೇಶಗಳು ದೀರ್ಘ ಕಾಲದಿಂದಲೂ ಹೋರಾಟ ನಡೆಸುತ್ತಿವೆ.



ಕಾಂಬೋಡಿಯಾದ ದಾಳಿಯಿಂದ ಮೃತಪಟ್ಟ ನಾಗರಿಕನ ಶರೀರದ ಜೊತೆಗೆ ರಾಯಲ್ ಥಾಯ್ ಸೈನಿಕರು ಎಎಫ್‌ಪಿ ಚಿತ್ರ

ಕಳೆದ ವಾರ ನಡೆದ ಸಂಘರ್ಷದ ಸಮಯದಲ್ಲಿ ಎರಡೂ ಕಡೆಯ ಎರಡು ಡಜನ್‌ಗೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಧಿಕೃತವಾಗಿ ವರದಿಯಾಗಿದೆ. ಅಲ್ಲದೆ, 5 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ.

ಇಸ್ರೇಲ್ ದಾಳಿಗೆ ಕಮಾಂಡರ್ ಸಾವು: ಹಮಾಸ್



ಜೆರುಸಲೇಂ (ಎಪಿ): ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಸಂಘಟನೆಯ ಉನ್ನತ ಕಮಾಂಡರ್ ರಯೀದ್ ಸಾದ್ ಮೃತಪಟ್ಟಿರುವುದನ್ನು ಹಮಾಸ್ ಭಾನುವಾರ ಖಚಿತಪಡಿಸಿದೆ.

'ಸಾದ್, ಶಸ್ತ್ರಾಸ್ತ್ರಗಳು ಹಾಗೂ ಸೇನೆಯ ವಿವಿಧ ಉಪಕರಣಗಳ ತಯಾರಿಕೆ ಘಟಕದ ಕಮಾಂಡರ್ ಆಗಿದ್ದ' ಎಂದೂ ಹಮಾಸ್ ತಿಳಿಸಿದೆ.

'ಗಾಜಾ ನಗರದ ಹೊರವಲಯದಲ್ಲಿ ಶನಿವಾರ ತಾನು ನಡೆಸಿದ್ದ ದಾಳಿಯಲ್ಲಿ ಸಾದ್‌ನನ್ನು ಹತ್ಯೆ ಮಾಡಲಾಗಿದೆ. 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆದ ದಾಳಿಯ ಸೂತ್ರಧಾರನೇ ಸಾದ್' ಎಂದು ಇಸ್ರೇಲ್ ಹೇಳಿದೆ.



ರಣವೀರ್ ಸಿಂಗ್

ಚಿತ್ರಮಂದಿರಗಳಲ್ಲಿ ಧುರಂಧರ್ ಅಬ್ಬರ

ರಣವೀರ್ ಸಿಂಗ್ ಅಭಿನಯದ 'ಧುರಂಧರ್' ಚಿತ್ರ ತೆರೆಕಂಡು ವಾರಗಳ ಬಳಿಕ ಚಿತ್ರಮಂದಿರಗಳಲ್ಲಿ ಅಬ್ಬರಿಸುತ್ತಿದೆ. 9ನೇ ದಿನ ಚಿತ್ರ ₹50 ಕೋಟಿ ಗಳಿಕೆ ಕಂಡಿದ್ದು, ಒಟ್ಟು ಗಳಿಕೆ ₹300 ಕೋಟಿ ಹೊಸ್ತಿಲು ತಲುಪಿದೆ.

ಆದಿತ್ಯ ಧರ್ ನಿರ್ದೇಶನದ ಚಿತ್ರಕ್ಕೆ ಪ್ರಾರಂಭದಲ್ಲಿ ದೀರ್ಘ ಅವಧಿ ಕಾರಣದಿಂದ ನಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಮೂರುವರೆ ಗಂಟೆ ಅವಧಿ ಚಿತ್ರ ಅಲ್ಲಲ್ಲಿ ತಾಳ್ಮೆ ಪರೀಕ್ಷಿಸುತ್ತದೆ ಎಂಬ ವಿಮರ್ಶೆಗಳು ಬಂದಿದ್ದವು. ಬಿಡುಗಡೆಗೆ ಮುನ್ನವೇ ಕೆಲ ವಿವಾದಗಳಿಂದ ಚಿತ್ರತಂಡ ಸುದ್ದಿಯಲ್ಲಿತ್ತು. ಆದರೆ ಎಲ್ಲ ರೀತಿಯ ಪ್ರಚಾರಗಳು ಚಿತ್ರಕ್ಕೆ ಧನಾತ್ಮಕ ಪರಿಣಾಮ ಬೀರಿವೆ. ದೇಶಭಕ್ತಿ, ಪಾಕಿಸ್ತಾನದ ಭೂಗತ ಜಗತ್ತು, ಬೇಹುಗಾರಿಕೆ ಕಥೆಯನ್ನು ಹೊಂದಿರುವ ಚಿತ್ರ ಪ್ರೇಕ್ಷಕರನ್ನು ಸೆಳೆಯುತ್ತಿದೆ.

ಮುಂಬೈ, ಪುಣೆಯಂಥ ನಗರಗಳಲ್ಲಿ ಚಿತ್ರಕ್ಕೆ ಭಾರಿ ಬೇಡಿಕೆ ಸೃಷ್ಟಿಯಾಗಿದ್ದು, ಪ್ರದರ್ಶನಗಳನ್ನು ಹೆಚ್ಚಿಸಲಾಗಿದೆ. ಮುಂಜಾನೆ ಮತ್ತು ತಡರಾತ್ರಿ ಕೂಡ ಚಿತ್ರ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ. ಬೆಂಗಳೂರಿನಲ್ಲಿಯೂ ಈ ಚಿತ್ರದ ಪ್ರದರ್ಶನಗಳ ಸಂಖ್ಯೆ ಹೆಚ್ಚಾಗಿದೆ.

ಸಂಜಯ್ ದತ್, ಅಕ್ಷಯ್ ಖನ್ನಾ, ಅರ್ಜುನ್ ರಾಂಪಾಲ್, ಆರ್ ಮಾಧವನ್ ಮತ್ತು ಸಾರಾ ಅರ್ಜುನ್ ಚಿತ್ರದಲ್ಲಿದ್ದಾರೆ. ವಿಶೇಷವಾಗಿ ಅಕ್ಷಯ್ ಖನ್ನಾ ಅಭಿನಯಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಆದಿತ್ಯ ಧರ್ ಅವರ ಹಿಂದಿನ ಚಿತ್ರ 'ಉರಿ: ದಿ ಸರ್ಜಿಕಲ್ ಸ್ಟ್ರೈಕ್' ಕೂಡ ಗಳಿಕೆಯಲ್ಲಿ ವ್ಯಾಪಕ ಯಶಸ್ಸು ಕಂಡಿತ್ತು.

'ಪ್ರೇಮಿ'ಯ ಹಾಡು ಬಿಡುಗಡೆ



ಅದ್ವಿಕ್, ಸಾತ್ವಿಕಾ

ಅದ್ವಿಕ್, ಸಾತ್ವಿಕಾ ಜೋಡಿಯಾಗಿ ನಟಿಸುತ್ತಿರುವ 'ಪ್ರೇಮಿ' ಚಿತ್ರದ ಮೊದಲ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಸ್. ಪ್ರದೀಪ್ ವರ್ಮ ನಿರ್ದೇಶನದ ಚಿತ್ರಕ್ಕೆ ಗುರು ಕರಿಬಸವೇಶ್ವರ ಪ್ರೊಡಕ್ಷನ್ ಲಾಂಛನದಲ್ಲಿ ಬಿ.ಸಿದ್ದಲಿಂಗಯ್ಯ ಬಂಡವಾಳ ಹೂಡಿದ್ದಾರೆ.

'ಮನಸ್ಸು ಏನೋ ಕಾಡಿದೆ' ಎಂಬ ಗೀತೆಗೆ ನಿರ್ದೇಶಕರೇ ಸಂಗೀತ ನೀಡಿದ್ದು, ನಿಖಿಲ್ ರಾಜ್ ಶೆಟ್ಟಿ ಸಾಹಿತ್ಯವಿದೆ. ಚೇತನ್ ಗಂಧರ್ವ ಹಾಡಿದ್ದಾರೆ. ನಾಯಕ ಅದ್ವಿಕ್ ಅವರ ತಾಯಿಯೇ ಈ ಚಿತ್ರಕ್ಕೆ ಕಥೆ ಬರೆದಿದ್ದು, ಮಗನಿಗಾಗಿ ತಂದೆ ಚಿತ್ರವನ್ನು ನಿರ್ಮಿಸಿದ್ದಾರೆ.

'ನೈಜ ಕಥೆ ಆಧರಿಸಿದ ಈ ಚಿತ್ರ ಪ್ರೇಮ ಕಥಾಹಂದರ ಹೊಂದಿದೆ. ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಜ್ಯೋತಿಷ್ಯದ ಕುರಿತಾದ ವಿಷಯವೂ ಇದರಲ್ಲಿದೆ. ಐದು ಹಾಡುಗಳ ಪೈಕಿ ಮೊದಲ ಹಾಡು ಈಗ ಬಿಡುಗಡೆಯಾಗಿದೆ. ನಿರ್ದೇಶನ, ಸಂಗೀತ ನಿರ್ದೇಶನದ ಜತೆ ಚಿತ್ರದಲ್ಲಿ ಖಳನಾಯಕನಾಗಿ ಅಭಿನಯಿಸಿದ್ದೇನೆ' ಎಂದರು ನಿರ್ದೇಶಕ.

'ಬಾಲ್ಯದಿಂದಲೂ ನಟನಾಗಬೇಕೆಂಬ ಕನಸಿತ್ತು. ಅದು ಈಗ ಈಡೇರಿದೆ. ಹೆತ್ತವರು ನನ್ನ ಕನಸನ್ನು ನನಸಾಗಿಸಿದ್ದಾರೆ. ಸದ್ಯದಲ್ಲೇ ಬಾಕಿಯಿರುವ ಹಾಡುಗಳು, ಟೀಸರ್ ಹಾಗೂ ಟ್ರೇಲರ್ ಅನಾವರಣವಾಗಲಿದೆ' ಎಂದರು ನಾಯಕ ಅದ್ವಿಕ್.

ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಚಿತ್ರಕ್ಕಿದೆ. ಶೋಭಿತ, ದ್ವಿತ ಕೆ. ಗೌಡ, ಸುರೇಶ್, ರಾಘವೇಂದ್ರ ಮುಂತಾದವರು ಚಿತ್ರದಲ್ಲಿದ್ದಾರೆ.



ಸಂಭ್ರಮಶ್ರೀ

'ನೀ ನನ್ನ ದೇವತೆ' ಎಂದ ಸೂರಿ ಅಣ್ಣ

'ಸಲಗ' ಖ್ಯಾತಿಯ ದಿನೇಶ್ ನಿರ್ಮಿಸಿ, ನಿರ್ದೇಶಿಸಿ, ನಾಯಕನಾಗಿ ನಟಿಸಿರುವ 'ಸೂರಿ ಅಣ್ಣ' ಚಿತ್ರದ 'ನೀ ನನ್ನ ದೇವತೆ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಈ ಗೀತೆಗೆ ಕೆ.ಎಂ.ಇಂದ್ರ ಸಂಗೀತ ಸಂಯೋಜನೆ ಮಾಡಿದ್ದಾರೆ. 'ಒಬ್ಬ ಅಮಾಯಕ ತನ್ನ ಇಡೀ ಕುಟುಂಬ ಕಳೆದುಕೊಂಡಾಗ ಯಾವ ಮಟ್ಟಕ್ಕೆ ಹೋಗುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ದುಡುಕಬೇಡಿ, ಯಾರಿಗೂ ತಿರುಗಿ ಬೀಳಬೇಡಿ, ನಮ್ಮನ್ನೇ ನಂಬಿಕೊಂಡ ಕುಟುಂಬ ಇರುತ್ತದೆ ಎಂಬ ಸಂದೇಶವಿದೆ. ಈಗಾಗಲೇ ಚಿತ್ರ ಸೆನ್ಸಾರ್ ಆಗಿದೆ. ಕೆಲ ಭೂಗತ ದೊರೆಗಳು ನಮ್ಮ ಚಿತ್ರದ ಮೂಲಕ ಸಂದೇಶ ನೀಡಿರುವುದು ವಿಶೇಷ' ಎಂದರು ನಿರ್ದೇಶಕ.

ಸಂಭ್ರಮಶ್ರೀ ನಾಯಕಿ. ರವಿ ಕಾಳೆ, ಹರೀಶ್ ರಾಯ್, ಕಾಕ್ರೋಜ್ ಸುಧೀ, ಪ್ರಕಾಶ್ ತೂಮಿನಾಡು, ಎಸ್. ಕೆ.ಉಮೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಕೆ.ಎಂ.ಇಂದ್ರ ಸಂಗೀತ, ಶ್ರೀಧರ್ ಕಶ್ಯಪ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ಎಂ.ಬಿ.ಅಳಿಕಟ್ಟಿ ಛಾಯಾಚಿತ್ರಗ್ರಹಣ, ಎನ್. ಎಂ.ವಿಶ್ವ ಸಂಕಲನವಿದೆ.



ಬಾಲಿವುಡ್‌ನತ್ತ 'ಮಂಸೋರೆ'

ಕಲಾತ್ಮಕ ಚಿತ್ರಗಳಿಂದ ಗಮನ ಸೆಳೆದ ಕನ್ನಡದ ನಿರ್ದೇಶಕ ಮಂಸೋರೆ ಬಾಲಿವುಡ್‌ನತ್ತ ಮುಖ ಮಾಡಿದ್ದಾರೆ. 'ಜೂಲಿಯೆಟ್' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಚಿತ್ರದ ಮೊದಲ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ನೀರಜ್ ತಿವಾರಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಇದೊಂದು ಮ್ಯೂಸಿಕಲ್ ಲವ್ ಸ್ಟೋರಿ ಎಂಬುದು ಪೋಸ್ಟರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. 'ನಟ ನಟಿಯರ ಆಯ್ಕೆ ನಡೆಯುತ್ತಿದೆ. ಆಗಾಜ್ ನಿರ್ಮಾಣ ಸಂಸ್ಥೆ ಈ ಸಿನಿಮಾದೊಂದಿಗೆ 2026ರಲ್ಲಿ ಐದು ಸಿನಿಮಾಗಳ ನಿರ್ಮಾಣ ಗುರಿ ಹೊಂದಿದೆ' ಎಂದು ನಿರ್ಮಾಣ ಸಂಸ್ಥೆ ಹೇಳಿದೆ.

ಮಂಸೋರೆ ಕಲಾತ್ಮಕ ಸಿನಿಮಾಗಳಿಂದಲೇ ಜನಪ್ರಿಯ. ಇವರ ನಿರ್ದೇಶನದ 'ಹರಿವು', 'ನಾತಿಚರಾಮಿ' ಉತ್ತಮ ಪ್ರಶಂಸೆಯ ಜತೆಗೆ ರಾಷ್ಟ್ರ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಗಳಿಸಿದ್ದವು. 'ದೂರ ತೀರ ಯಾನ' ಮಂಸೋರೆ ಹಿಂದಿನ ಸಿನಿಮಾ.

ಮೆಸ್ಸಿ–ಸಚಿನ್ ಭೇಟಿಗೆ ಮನಸೋತ ಮುಂಬೈ

ವಾಂಖೆಡೆಯಲ್ಲಿ ಕ್ರೀಡಾಭಿಮಾನಿಗಳ ಕಣ್ತುಂಬಿದ 'ಸುವರ್ಣ ಕ್ಷಣ' ● ಚೆಟ್ರಿಗೆ ಜೆರ್ಸಿ ನೀಡಿದ ಮೆಸ್ಸಿ

ಮುಂಬೈ (ಪಿಟಿಐ): ವಾಂಖೆಡೆ ಕ್ರಿಕೆಟ್ ಕ್ರೀಡಾಂಗಣದಲ್ಲಿ ಇದುವರೆಗೆ ಹಲವಾರು ಚಾರಿತ್ರಿಕ ಸಾಧನೆಗಳು ದಾಖಲಾಗಿವೆ. ಭಾನುವಾರ ಇಲ್ಲಿ ನಡೆದ ಅಪರೂಪದ ಕಾರ್ಯಕ್ರಮವು ಇತಿಹಾಸ ಪುಸ್ತಕದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಯಿತು.

ಏಕೆಂದರೆ, ವಿಶ್ವ ಫುಟ್‌ಬಾಲ್‌ನ ದಿಗ್ಗಜ ಲಯೊನೆಲ್ ಮೆಸ್ಸಿ ಮತ್ತು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಬ್ಬರ ಭೇಟಿಗೆ ವಾಂಖೆಡೆ ವೇದಿಕೆಯಾಯಿತು. ಕ್ರೀಡಾಂಗಣದಲ್ಲಿದ್ದ ಸಾವಿರಾರು ಅಭಿಮಾನಿಗಳ ಸಂತಸ ಮುಗಿಲುಮುಟ್ಟಿತು.

'ಗೋಟ್ (G.O.A.T: Greatest of All time) ಟೂರ್' ಅಂಗವಾಗಿ ಅರ್ಜೆಂಟೀನಾದ ಫುಟ್‌ಬಾಲ್ ತಾರೆ ಮೆಸ್ಸಿ ಅವರು ಮುಂಬೈಗೆ ಭೇಟಿ ನೀಡಿದರು. ಇದೇ ಹೊತ್ತಿನಲ್ಲಿ ಸಚಿನ್, ಭಾರತದ ಫುಟ್‌ಬಾಲ್ ದಂತಕಥೆ ಸುನಿಲ್ ಚೆಟ್ರಿ ಕೂಡ ಮೆಸ್ಸಿಯೊಂದಿಗೆ ಜೊತೆಗೂಡಿದರು. 2011ರಲ್ಲಿ ಇಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಚಾಂಪಿಯನ್ ಆಗಿತ್ತು. ಅದೇ ಮೈದಾನದಲ್ಲಿ ಭಾನುವಾರ ಫುಟ್‌ಬಾಲ್ ಜಗತ್ತು ತೆರೆದುಕೊಂಡಿತ್ತು. 'ಮೆಸ್ಸಿ.. ಮೆಸ್ಸಿ..' ಎಂಬ ಘೋಷಣೆಗಳು ಮುಗಿಲುಮುಟ್ಟಿದವು.

ಸಂಜೆ ಮೆಸ್ಸಿ, ಅವರ ಸಹ ಆಟಗಾರರಾದ ಲೂಯಿಸ್ ಸೊರೇಝ್ ಮತ್ತು ರಾಡ್ರಿಗೊ ಡಿ ಪಾಲ್ ವಾಂಖೆಡೆಗೆ ಆಗಮಿಸಿದರು. ಮೆಸ್ಸಿ, ಬಿಳಿ ಟೀಶರ್ಟ್ ಮತ್ತು ಕಪ್ಪು ಟ್ರ್ಯಾಕ್ ಪ್ಯಾಂಟ್ ಧರಿಸಿದ್ದರು. ಸ್ವಲ್ಪ ಹೊತ್ತಿನ ನಂತರ ಸಚಿನ್ ಕೂಡ ಬಂದು ಸೇರಿಸಿಕೊಂಡರು. ಆಗ ಸಚಿನ್..ಸಚಿನ್.. ಘೋಷಣೆಗಳೂ ಪ್ರತಿಧ್ವನಿಸಿದವು. ಮುಸ್ಸಂಜೆ ನಡೆದ ಕಾರ್ಯಕ್ರಮದಲ್ಲಿ ಸಚಿನ್ ಅವರು ಮೆಸ್ಸಿಯೊಂದಿಗೆ ವೇದಿಕೆ ಹಂಚಿಕೊಂಡರು.

'ಈ ಮೈದಾನದಲ್ಲಿ ನಾನು ಹಲವಾರು ಅಭೂತಪೂರ್ವ ಕ್ಷಣಗಳನ್ನು ಈ ಹಿಂದೆ ಆಸ್ವಾದಿಸಿದ್ದೇನೆ. ಈ ಮೂವರೂ ಇದೇ ಮೈದಾನದಲ್ಲಿ ಸೇರಿರುವುದು ಅವಿಸ್ಮರಣೀಯ. ಮುಂಬೈ, ಮುಂಬೈಕರ್‌ಗಳಿಗೆ ಮತ್ತು ಭಾರತಕ್ಕೆ ಸುವರ್ಣ ಸಮಯ. ಲಿಯೊ (ಲಯೊನೆಲ್ ಮೆಸ್ಸಿ) ಅವರನ್ನು ವರ್ಣಿಸಲು ಪದಗಳು ಸಾಲುವುದಿಲ್ಲ. ಪರಿಪೂರ್ಣ ಕ್ರೀಡಾಪಟು ಅವರು. ಎಲ್ಲವನ್ನೂ ಸಾಧಿಸಿದ್ದಾರೆ. ಅವರ ಬದ್ಧತೆ, ಶ್ರದ್ಧೆ ಮತ್ತು ನಿರಂತರ ಪ್ರಯತ್ನಗಳು ಅನುಕರಣೀಯ' ಎಂದು ಸಚಿನ್ ಹೇಳಿದರು.

ಮೆಸ್ಸಿ ಅವರು ಸಚಿನ್ ಅವರಿಗೆ ಫುಟ್‌ಬಾಲ್ ಚೆಂಡನ್ನು ಉಡುಗೊರೆಯಾಗಿ ನೀಡಿದರು. ಸಚಿನ್ ಅವರು ತಮ್ಮ ಜೆರ್ಸಿಯನ್ನು ಮೆಸ್ಸಿ ಅವರಿಗೆ ಉಡುಗೊರೆ ನೀಡಿದರು

ಮೆಸ್ಸಿ ಅವರು ಸುನಿಲ್ ಚೆಟ್ರಿಯೊಂದಿಗೆ ಬಹಳ ಸಮಯದವರೆಗೆ ಮಾತುಕತೆ ನಡೆಸಿದರು. ತಮ್ಮ ಪೋಷಾಕನ್ನು ಕಾಣಿಕೆ ನೀಡಿದರು. ಮಿತ್ರಾ ಸ್ಟಾರ್ಸ್ ಮತ್ತು ಇಂಡಿಯಾ ಸ್ಟಾರ್ಸ್ ತಂಡಗಳ ಆಟಗಾರರೊಂದಿಗೂ ಸಂವಾದ ನಡೆಸಿದರು.

ಈ ವೇಳೆ ಹಾಜರಿದ್ದ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು 'ಪ್ರಾಜೆಕ್ಟ್ ಮಹಾ ದೇವ' ಘೋಷಿಸಿದರು. ಈ ಯೋಜನೆಯಡಿ ಮಹಾರಾಷ್ಟ್ರದ ಪ್ರತಿಭಾನ್ವಿತ ಆಟಗಾರರಿಗೆ ಉತ್ತೇಜನ ನೀಡಿ ಪೋಷಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪ್ರದರ್ಶನ ಫುಟ್‌ಬಾಲ್ ಪಂದ್ಯ ನಡೆಯಿತು. ಭಾರತ ತಂಡದ ಆಟಗಾರರಾದ ರಾಹುಲ್ ಭೇಕೆ, ಕೊನ್‌ಶಮ್ ಚಿಂಗ್ಲೆನಸನಾ, ಮಹಿಳಾ ತಂಡದ ತಾರೆ ಬಾಲಾ ದೇವಿ ಅವರೂ ಭಾಗವಹಿಸಿದ್ದರು. ಮೆಸ್ಸಿ, ಲೂಯಿಸ್ ಮತ್ತು ಡಿ ಪಾಲ್ ಅವರು ಚೆಂಡನ್ನು ಕಿಕ್ ಮಾಡಿದರು.



ವಾಂಖೆಡೆ ಕ್ರೀಡಾಂಗಣದಲ್ಲಿ ಮೆಸ್ಸಿ, ಸಚಿನ್ ತೆಂಡೂಲ್ಕರ್ ಮತ್ತು ರಾಡ್ರಿಗೊ ಡಿ ಪಾಲ್ ಪಿಟಿಐ ಚಿತ್ರ

ದೆಹಲಿಯಲ್ಲಿ ಕಾರ್ಯಕ್ರಮ ಇಂದು

ಕೋಲ್ಕತ್ತದ ಸಾಲ್ಟ್‌ಲೇಕ್ ಕ್ರೀಡಾಂಗಣದಲ್ಲಿ ದಾಂದಲೆ ನಡೆದ ಬೆನ್ನಲ್ಲೇ, ಸೋಮವಾರ ದೆಹಲಿಯಲ್ಲಿ ಮೆಸ್ಸಿ ಕಾರ್ಯಕ್ರಮ ನಡೆಯಲಿರುವ ಅರುಣ್ ಜೇಟ್ಲಿ ಕ್ರೀಡಾಂಗಣಕ್ಕೆ ಅಲ್ಲಿನ ಪೊಲೀಸರು ಬಹು ಹಂತದ ಭದ್ರತಾ ವ್ಯವಸ್ಥೆ ಕಲ್ಪಿಸಿದ್ದಾರೆ. ಕ್ರೀಡಾಂಗಣದಲ್ಲಿ ಮಧ್ಯಾಹ್ನ 1ರಿಂದ ಸಂಜೆ 4ರ ಒಳಗೆ ಮೆಸ್ಸಿ ಕಾರ್ಯಕ್ರಮ ನಿಗದಿಯಾಗಿದೆ. ಜನದಟ್ಟಣೆ, ಸಂಚಾರ ನಿಯಂತ್ರಣಕ್ಕೆ ಬಿಗಿ ಕ್ರಮ ಕೈಗೊಳ್ಳಲಾಗಿದೆ. ಕ್ರೀಡಾಂಗಣ ಪ್ರವೇಶ ದ್ವಾರದಲ್ಲಿ ನೂಕು ನುಗ್ಗಲು ತಪ್ಪಿಸಲು ಪರ್ಯಾಯ ಕ್ರಮ ವಹಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯ ಆಯೋಜಕ ಕಸ್ಟಡಿಗೆ (ಕೋಲ್ಕತ್ತ ವರದಿ): ಕಾರ್ಯಕ್ರಮದ ಮುಖ್ಯ ಆಯೋಜಕ ಶತಾದ್ರು ದತ್ತ ಅವರನ್ನು ಬಿಧಾನನಗರ ಪೊಲೀಸರು ಶನಿವಾರ ರಾತ್ರಿ ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ಅವರನ್ನು 14 ದಿನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಉನ್ನತಿ, ಕಿರಣ್‌ಗೆ ಸಿಂಗಲ್ಸ್ ಪ್ರಶಸ್ತಿ

ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿ



ಪುರುಷರ ಸಿಂಗಲ್ಸ್‌ನಲ್ಲಿ ಚಾಂಪಿಯನ್ ಆದ ಕಿರಣ್ ಜಾರ್ಜ್ 'ಎಕ್ಸ್' ಚಿತ್ರ

ಕಟಕ್ (ಪಿಟಿಐ): ಅಗ್ರ ಶ್ರೇಯಾಂಕದ ಆಟಗಾರರಾದ ಉನ್ನತಿ ಹೂಡಾ ಹಾಗೂ ಕಿರಣ್ ಜಾರ್ಜ್ ಅವರು ಭಾನುವಾರ ಮುಕ್ತಾಯಗೊಂಡ ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ಸಿಂಗಲ್ಸ್‌ನಲ್ಲಿ ಕಿರೀಟ ತಮ್ಮದಾಗಿಸಿಕೊಂಡರು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಮಹಿಳೆಯರ ವಿಭಾಗದ ಸಿಂಗಲ್ಸ್ ಫೈನಲ್‌ನಲ್ಲಿ ಭಾರತದ ಉನ್ನತಿ ಅವರು 21–17, 21–10ರಿಂದ ಸ್ವದೇಶದ ಇಶಾರಾಣಿ ಬರೂವಾ ಅವರನ್ನು ಮಣಿಸಿದರು. ಅಸ್ಸಾಂನ ಆಟಗಾರ್ತಿ ಇಶಾರಾಣಿ ಮೊದಲ ಗೇಮ್‌ನಲ್ಲಿ ಪ್ರತಿರೋಧ ತೋರಿದರಾದರೂ, ಎರಡನೇ ಗೇಮ್‌ನಲ್ಲಿ ಉನ್ನತಿ ಸಂಪೂರ್ಣ ಹಿಡಿತ ಸಾಧಿಸಿದರು.

ತೀವ್ರ ಪೈಪೋಟಿ ಇದ್ದ ಪುರುಷರ ಸಿಂಗಲ್ಸ್ ಫೈನಲ್ ಹಣಾಹಣಿಯಲ್ಲಿ ಭಾರತದ ಭರವಸೆಯ ಆಟಗಾರ ಕಿರಣ್ ಅವರು 21–14, 13–21, 21–16ರಿಂದ ಇಂಡೊನೇಷ್ಯಾದ ಮುಹಮ್ಮದ್ ಯೂಸುಫ್ ಅವರನ್ನು ಸೋಲಿಸಿದರು. 65 ನಿಮಿಷಗಳವರೆಗೆ ಸಾಗಿದ ಈ ಇಬ್ಬರು ಆಟಗಾರರ ಪೈಪೋಟಿಯು ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಬಲ್ಗೇರಿಯಾದ ಗ್ಯಾಬ್ರಿಯೆಲಾ– ಸ್ಟೆಫಾನಿ ಸ್ಟೋವಾ ಜೋಡಿಯು 21–19, 21–14ರಿಂದ ಮಲೇಷ್ಯಾದ ಅಂಗ್ ಷಿನ್ ಯೀ ಹಾಗೂ ಕಾರ್ಮೆನ್ ಟಿಂಗ್ ಅವರನ್ನು ಸೋಲಿಸಿ, ಪ್ರಶಸ್ತಿ ತಮ್ಮದಾಗಿಸಿಕೊಂಡಿತು.

ಪುರುಷರ ಡಬಲ್ಸ್ ಫೈನಲ್‌ನಲ್ಲಿ ಇಂಡೊನೇಷ್ಯಾದ ಅಲಿ ಫಾಥಿರ್ ರೆಯಾನ್ ಹಾಗೂ ದೇವಿನ್ ಅರ್ಥ ವಹ್ಯುಡಿ ಅವರು 15–21, 21–12, 21–16ರಿಂದ ಮಲೇಷ್ಯಾದ ಖಾಂಗ್ ಖೈ ಷಿಂಗ್– ಆ್ಯರನ್ ತೈ ಜೋಡಿಯನ್ನು ಮಣಿಸಿದರು.

ಭಾರತ ಯುವಪಡೆಗೆ ಮಣಿದ ಪಾಕ್

19 ವರ್ಷದೊಳಗಿನವರ ಏಷ್ಯಾಕಪ್ ಕ್ರಿಕೆಟ್: ಆ್ಯರನ್, ದೀಪೇಶ್, ಕನಿಷ್ಕ್ ಮಿಂಚು

ದುಬೈ (ಪಿಟಿಐ): ದೀಪೇಶ್ ದೇವೇಂದ್ರನ್ ಮತ್ತು ಕನಿಷ್ಕ್ ಚೌಹಾಣ್ ಅವರಿಬ್ಬರ ಅಮೋಘ ಬೌಲಿಂಗ್ ಬಲದಿಂದ ಭಾರತ ಯುವ ತಂಡವು 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ಯುವ ಬಳಗದ ಎದುರು ಜಯಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನದ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆ್ಯರನ್ ಜಾರ್ಜ್ (85; 88ಎ, 4X12, 6X1) ಹಾಗೂ ಕನಿಷ್ಕ್ ಚೌಹಾಣ್ (46; 46ಎ, 4X2, 6X3) ಅವರ ಬ್ಯಾಟಿಂಗ್ ಬಲದಿಂದ ಭಾರತ ಯುವಪಡೆಯು 46.1 ಓವರ್‌ಗಳಲ್ಲಿ 240 ರನ್ ಗಳಿಸಿತು. ಪಾಕ್ ತಂಡದ ಮೊಹಮ್ಮದ್ ಸಯ್ಯಾಮ್ ಮತ್ತು ಅಬ್ದುಲ್ ಸುಭಾನ್ ಅವರು ತಲಾ 3 ವಿಕೆಟ್ ಗಳಿಸಿ, ಭಾರತದ ದೊಡ್ಡ ಮೊತ್ತ ಗಳಿಸುವ ಗುರಿಗೆ ಅಡ್ಡಿಯಾದರು.

ಗುರಿ ಬೆನ್ನಟ್ಟಿದ ಪಾಕ್ ತಂಡವನ್ನು 150 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಭಾರತದ ಬೌಲಿಂಗ್ ಪಡೆ ಯಶಸ್ವಿಯಾಯಿತು. ದೀಪೇಶ್ ಮತ್ತು ಕನಿಷ್ಕ್ ಅವರು ತಲಾ 3 ವಿಕೆಟ್ ಗಳಿಸಿದರೆ, ಕಿಶನ್ ಕುಮಾರ್ ಸಿಂಗ್ 2 ವಿಕೆಟ್ ಪಡೆದರು.

ಮಳೆ ಬಂದ ಕಾರಣ ಪಾಕ್ ಇನಿಂಗ್ಸ್ ಅನ್ನು 49 ಓವರ್‌ಗಳಿಗೆ ನಿಗದಿ ಮಾಡಲಾಗಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 46.1 ಓವರ್‌ಗಳಲ್ಲಿ 240 (ಆಯುಷ್ ಮಾತ್ರೆ 38, ಆ್ಯರನ್ ಜಾರ್ಜ್ 85, ಅಭಿಗ್ಯಾನ ಕುಂದು 22, ಕನಿಷ್ಕ ಚೌಹಾಣ್ 46, ಮೊಹಮ್ಮದ್ ಸಯ್ಯಾಮ್ 67ಕ್ಕೆ3, ಅಬ್ದುಲ್ ಸುಭಾನ್ 42ಕ್ಕೆ3, ನಿಕಾಬ್ ಶಫೀಕ್ 38ಕ್ಕೆ2) ಪಾಕಿಸ್ತಾನ: 41.2 ಓವರ್‌ಗಳಲ್ಲಿ 150 (ಉಸ್ಮಾನ್ ಖಾನ್ 16, ಫರ್ಹಾನ್ ಯೂಸುಫ್ 23, ಹುಝೈಫಾ ಅಹಸಾನ್ 70, ಕಿಶನಕುಮಾರ್ ಸಿಂಗ್ 33ಕ್ಕೆ2, ದೀಪೇಶ್ ದೇವೇಂದ್ರನ್ 16ಕ್ಕೆ3, ಕನಿಷ್ಕ್ ಚೌಹಾಣ್ 33ಕ್ಕೆ3).
ಫಲಿತಾಂಶ: ಭಾರತ 19 ವರ್ಷದೊಳಗಿನವರ ತಂಡಕ್ಕೆ 90 ರನ್ ಜಯ.



ಕನಿಷ್ಕ್ ಚೌಹಾಣ್ 'ಎಕ್ಸ್' ಚಿತ್ರ

ಹಸ್ತಲಾಘವ ಇಲ್ಲ

ದುಬೈ (ಪಿಟಿಐ): ಈ ಪಂದ್ಯದಲ್ಲಿಯೂ ಭಾರತ 19 ವರ್ಷದೊಳಗಿನ ಆಟಗಾರರು ಪಾಕ್ ತಂಡದವರ ಕೈಕುಲುಕಲಿಲ್ಲ.

ಪಂದ್ಯದ ಟಾಸ್ ವೇಳೆಯಲ್ಲಿ ಭಾರತ ತಂಡದ ನಾಯಕ ಆಯುಷ್ ಮಾತ್ರೆ ಅವರು ಪಾಕ್ ತಂಡದ ನಾಯಕ ಫರ್ಹಾನ್ ಯೂಸುಫ್ ಅವರ ಹಸ್ತಲಾಘವ ಮಾಡಲಿಲ್ಲ.

ಈ ಹಿಂದೆ ಸೀನಿಯರ್ ಪುರುಷರ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಪಾಕ್ ಆಟಗಾರರ ಹಸ್ತಲಾಘವ ಮಾಡಿರಲಿಲ್ಲ. ಪೆಹಲ್ಗಾಮ್ ಭಯೋತ್ಪಾದನಾ ದಾಳಿಯಲ್ಲಿ ಪಾಕ್ ಕೈವಾಡವನ್ನು ಖಂಡಿಸಿದ್ದ ಭಾರತ ಕ್ರಿಕೆಟಿಗರು ಪಾಕ್ ಆಟಗಾರರ ಹಸ್ತಲಾಘವ ನಿರಾಕರಿಸಿದ್ದರು. ಇದೀಗ ಯುವ ತಂಡವೂ ಸೀನಿಯರ್ ಆಟಗಾರರ ಹಾದಿಯಲ್ಲಿ ಸಾಗಿದೆ.

ಯಶಸ್ವಿ ಜೈಸ್ವಾಲ್ ಶತಕ

ಪುಣೆ (ಪಿಟಿಐ): ಭಾರತ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯಲು ಯಶಸ್ವಿ ಜೈಸ್ವಾಲ್ ಅವರು ತಮಗೆ ಸಿಕ್ಕ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಲೀಗ್ ಬಿ ಗುಂಪಿನ ಪಂದ್ಯದಲ್ಲಿ ಅವರು 48 ಎಸೆತಗಳಲ್ಲಿ ಶತಕ ಹೊಡೆದು ತಮ್ಮ ಸಾಮರ್ಥ್ಯವನ್ನು ಮೆರೆದರು.

ಯಶಸ್ವಿ (101; 50ಎಸೆತ, 4X16, 6X1) ಆಟದ ಬಲದಿಂದ ಮುಂಬೈ ತಂಡವು 4 ವಿಕೆಟ್‌ಗಳಿಂದ ಹರಿಯಾಣವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಹರಿಯಾಣ: 20 ಓವರ್‌ಗಳಲ್ಲಿ 3ಕ್ಕೆ234 (ಅಂಕಿತ್ ಕುಮಾರ್ 89, ನಿಶಾಂತ್ ಸಿಂಧು ಔಟಾಗದೇ 63) ಮುಂಬೈ: 17.3 ಓವರ್‌ಗಳಲ್ಲಿ 6ಕ್ಕೆ238 (ಯಶಸ್ವಿ ಜೈಸ್ವಾಲ್ 101, ಸರ್ಫರಾಜ್ ಖಾನ್ 64, ಸಮಂತ್ ಜಾಖಡ್ 42ಕ್ಕೆ2).

ರಾಜ್ಯ ಮಟ್ಟದ ಪಿಯು ಕಾಲೇಜುಗಳ ಹಾಕಿ ಟೂರ್ನಿ

ಬೆಂಗಳೂರು, ಕೊಡಗು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕೊಡಗು ಮತ್ತು ಬೆಂಗಳೂರು ತಂಡಗಳು ಭಾನುವಾರ ಇಲ್ಲಿ ನಡೆದ ರಾಜ್ಯಮಟ್ಟದ ಪದವಿಪೂರ್ವ ಕಾಲೇಜುಗಳ ಹಾಕಿ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿ ಮತ್ತು ಬಾಲಕರ ವಿಭಾಗದ ಪ್ರಶಸ್ತಿ ಜಯಿಸಿದವು.

ಮೈಸೂರು ಬಾಲಕಿಯರು ಹಾಗೂ ಬಳ್ಳಾರಿ ಬಾಲಕರ ತಂಡಗಳು ರನ್ನರ್ಸ್ ರನ್ನರ್ ಅಪ್ ಆದವು.

ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಪ್ರಾಂಶುಪಾಲರ ಸಂಘ, ಬಳ್ಳಾರಿಯ ಸೇಂಟ್ ಜಾನ್ಸ್ ಪದವಿ ಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ನಗರದಲ್ಲಿ ಎರಡು ದಿನಗಳ ಹಾಕಿ ಟೂರ್ನಿ ನಡೆಯಿತು.

ಬಾಲಕಿಯರ ತೀವ್ರ ಸೆಣಸಾಟ: ಬಾಲಕಿಯರ ಫೈನಲ್‌ನಲ್ಲಿ ಕೊಡಗು ಮತ್ತು ಮೈಸೂರು ತಂಡಗಳು ಸಮಬಲದ ಪೈಪೋಟಿ ನಡೆಸಿದವು. ಕೊನೆವರೆಗೆ ಕುತೂಹಲ ಉಳಿಸಿಕೊಂಡಿದ್ದ ಈ ಪಂದ್ಯದ ಅಂತಿಮ ಕ್ವಾರ್ಟರ್‌ನಲ್ಲಿ ಕೊಡಗು ತಂಡ ಏಕೈಕ ಗೋಲು ಬಾರಿಸುವ ಮೂಲಕ ಗೆಲುವು ಸಾಧಿಸಿತು. ಕೊಡಗಿನ ಪ್ರೀತಿಕಾ ಉತ್ತಮ ಡಿಫೆಂಡರ್, ಮೈಸೂರಿನ ಯುವಿಕಾ ಉತ್ತಮ ಗೋಲ್ ಕೀಪರ್, ಮೈಸೂರಿನ ಲಕ್ಷ್ಮೀ ಸ್ಕೋರರ್ ಎನಿಸಿಕೊಂಡರು.

ಮಣಿದ ಬಳ್ಳಾರಿ: ಬಳ್ಳಾರಿ ತಂಡ ಫೈನಲ್‌ನಲ್ಲಿ 1–6 ಅಂತರದಿಂದ ಬೆಂಗಳೂರು ಉತ್ತರ ತಂಡದ ವಿರುದ್ಧ ಸೋತಿತು. ಟೂರ್ನಿಯಲ್ಲಿ ಕೊಡಗಿನ ಪಳಂಗಪ್ಪ ಉತ್ತಮ ಗೋಲ್‌ಕೀಪರ್ ಆದರು. ಬಳ್ಳಾರಿಯ ಯಲ್ಲಪ್ಪ ಉತ್ತಮ ಡಿಫೆಂಡರ್ ಎನಿಸಿಕೊಂಡರು. ಬೆಂಗಳೂರು ಉತ್ತರ ತಂಡದ ಜಶಿನ್ ಉತ್ತಮ ಸ್ಕೋರರ್ ಆಗಿ ಹೊರಹೊಮ್ಮಿದರು.



ಬಳ್ಳಾರಿಯ ಜಿಲ್ಲಾ ಹಾಕಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜುಗಳ ಹಾಕಿ ಕ್ರೀಡಾಕೂಟದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕೊಡಗು ಮತ್ತು ಮೈಸೂರು ತಂಡಗಳ ಆಟಗಾರರ ಸೆಣಸಾಟ

ಭಾರತದ ಮುಡಿಗೆ ಸ್ಕ್ವಾಷ್ ವಿಶ್ವಕಪ್



ಟ್ರೋಫಿಯೊಂದಿಗೆ ಭಾರತ ಸ್ಕ್ವಾಷ್ ತಂಡ ಚಿತ್ರ: 'ವಿಶ್ವ ಸ್ಕ್ವಾಷ್'

ಚೆನ್ನೈ (ಪಿಟಿಐ): ಭಾರತ ಸ್ಕ್ವಾಷ್ ತಂಡವು ಇದೇ ಮೊದಲ ಬಾರಿ ವಿಶ್ವಕಪ್ ಜಯಿಸಿ ಚಾರಿತ್ರಿಕ ಸಾಧನೆ ಮಾಡಿತು.

ಎರಡನೇ ಶ್ರೇಯಾಂಕದ ಭಾರತ ತಂಡವು, ಇಲ್ಲಿನ ಎಕ್ಸ್‌ಪ್ರೆಸ್ ಅವೆನ್ಯೂ ಮಾಲ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ 3–0ಯಿಂದ ಹಾಂಗ್‌ಕಾಂಗ್ ತಂಡದ ವಿರುದ್ಧ ಗೆಲುವು ಸಾಧಿಸಿತು.

ಫೈನಲ್‌ನಲ್ಲಿ ಅನುಭವಿ ಆಟಗಾರ್ತಿ ಜೋಷ್ನಾ ಚಿನ್ನಪ್ಪ ಅವರು 3–1 ರಿಂದ (7–3, 2–7, 7–5, 7–1) ಮಹಿಳೆಯರ ಸಿಂಗಲ್ಸ್‌ನಲ್ಲಿ ಲೀ ಕಾ ಯೀ ವಿರುದ್ಧ ಗೆಲುವು ಸಾಧಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಏಷ್ಯನ್ ಗೇಮ್ಸ್ ಪದಕವಿಜೇತ ಅಭಯ್ ಸಿಂಗ್ 3–0 (7–1, 7–4, 7–4) ಅಲೆಕ್ಸ್ ಲಾವು ವಿರುದ್ಧ ಗೆದ್ದರು.

ಮಹಿಳೆಯರ ಇನ್ನೊಂದು ಸಿಂಗಲ್ಸ್‌ನಲ್ಲಿ 17 ವರ್ಷದ ಅನಾಹತ್ ಸಿಂಗ್ ಅವರು 3–0 (7–2, 7–2, 7–5) ರಿಂದ 31ನೇ ರ‍್ಯಾಂಕ್‌ನ ಟೊಮಾಟೊ ಹೊ ವಿರುದ್ಧ ಗೆದ್ದರು.

2023ರ ಆವೃತ್ತಿಯ ವಿಶ್ವಕಪ್ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದ್ದು ಭಾರತ ತಂಡದ ಈವರೆಗಿನ ಉತ್ತಮ ಸಾಧನೆಯಾಗಿತ್ತು.

2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕೂಟದಲ್ಲಿ ಮೊದಲ ಬಾರಿಗೆ ಸ್ಕ್ವಾಷ್ ಕ್ರೀಡೆಯನ್ನು ಸೇರ್ಪಡೆಗೊಳಿಸಲಾಗಿದೆ.

ನಾಮಧಾರಿ ಕಪ್: ಡಿವೈಇಎಸ್ ಎ ತಂಡ ರನ್ನರ್‌ಅಪ್

ಹಾಕಿ: ಕೆನರಾ ಬ್ಯಾಂಕ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೂಟೌಟ್‌ವರೆಗೆ ಸಾಗಿದ ಫೈನಲ್ ಪಂದ್ಯದಲ್ಲಿ ಕೆನರಾ ಬ್ಯಾಂಕ್ ತಂಡವು ಡಿವೈಇಎಸ್ 'ಎ' ತಂಡವನ್ನು ಮಣಿಸಿ ಹಾಕಿ ಕರ್ನಾಟಕ ಆಯೋಜಿಸಿದ್ದ ನಾಮಧಾರಿ ಕಪ್ ಹಾಕಿ ಟೂರ್ನಿಯ ಚಾಂಪಿಯನ್ ಆಗಿ ಹೊರಹೊಮ್ಮಿತು.

ಭಾನುವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಡಿವೈಇಎಸ್ ತಂಡದ ಹರೀಶ್ ಎಂ. 12ನೇ ನಿಮಿಷದಲ್ಲಿ ಗೋಲು ಗಳಿಸಿ ತಮ್ಮ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಒಂದೇ ನಿಮಿಷದ ಅಂತರದಲ್ಲಿ ಗೋಲು ಹೊಡೆದ ಕೆನರಾ ಬ್ಯಾಂಕ್ ತಂಡದ ವಿನಯ್ ವಿ.ಎಸ್. (13ನೇ ನಿ.) ಸಮಬಲ ಸಾಧಿಸಿಕೊಟ್ಟರು.

ಎರಡನೇ ಕ್ವಾರ್ಟರ್‌ನಲ್ಲಿ ಡಿವೈಇಎಸ್ ತಂಡದ ದೇಶ್ ಪೂವಯ್ಯ ಎ.ಎ. (26ನೇ ನಿ.) ಅವರು ಗೋಲು ಗಳಿಸಿ, 2–1 ಮುನ್ನಡೆಗೆ ಕಾರಣರಾದರು. ಕೆನರಾ ಬ್ಯಾಂಕ್ ತಂಡದ ಹಿತೇಶ್ ಶರ್ಮಾ (55ನೇ ನಿ.) ಅವರು ಅಂತಿಮ ಕ್ಷಣದಲ್ಲಿ ಗೋಲು ಹೊಡೆದ ಪರಿಣಾಮ ಪಂದ್ಯ ಡ್ರಾ ಆಯಿತು.

ನಂತರ ನಡೆದ ಶೂಟೌಟ್‌ನಲ್ಲಿ ಕೆನರಾ ಬ್ಯಾಂಕ್ ತಂಡ 5–4ರಿಂದ ಗೆಲುವು ಸಾಧಿಸಿತು. ವಿಜೇತ ತಂಡಕ್ಕೆ ₹50 ಸಾವಿರ ನಗದು ಹಾಗೂ ಟ್ರೋಫಿ ನೀಡಲಾಯಿತು. ರನ್ನರ್‌ಅಪ್ ತಂಡಕ್ಕೆ ₹30 ಸಾವಿರ ನಗದು ಹಾಗೂ ಟ್ರೋಫಿ ದೊರೆಯಿತು.


ಪುರುಷರ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿ ಆಡಿದ್ದ ಸುನಿಲ್ ಪಿ.ಬಿ. ಅವರಿಗೆ ₹1 ಲಕ್ಷ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಇದೇ ತಂಡದ ಕೋಚ್ ಜನಾರ್ಧನ್ ಸಿ.ಬಿ. ಹಾಗೂ 'ಎಫ್‌ಐಎಚ್ ವರ್ಷದ ಅಂಪೈರ್' ಪ್ರಶಸ್ತಿ ಗೆದ್ದ ರಘುಪ್ರಸಾದ್ ಆರ್.ವಿ. ಅವರಿಗೆ ತಲಾ ₹50 ಸಾವಿರ ನೀಡಿ ಸನ್ಮಾನ ಮಾಡಲಾಯಿತು.



ಕೆನರಾ ಬ್ಯಾಂಕ್ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು

ಅರ್ಷದೀಪ್–ಹರ್ಷಿತ್ ಆಟಕ್ಕೆ ಜಯ





ಭಾರತ ತಂಡದ ವೇಗದ ಬೌಲರ್‌ಗಳಾದ ಹಾರ್ದಿಕ್ ಪಾಂಡ್ಯ, ಹರ್ಷಿತ್ ರಾಣಾ ಹಾಗೂ ಅರ್ಷದೀಪ್ ಸಿಂಗ್ ಸಂಭ್ರಮ. (ಎಡ ಚಿತ್ರ) ಎರಡು ವಿಕೆಟ್ ಪಡೆದ ವರುಣ್ ಚಕ್ರವರ್ತಿ ಪಿಟಿಐ ಚಿತ್ರಗಳು


100 ವಿಕೆಟ್
ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 100 ವಿಕೆಟ್ ಪೂರೈಸಿದರು. ಅದರೊಂದಿಗೆ, ಅರ್ಷದೀಪ್ ಸಿಂಗ್ (112) ಹಾಗೂ ಜಸ್‌ಪ್ರೀತ್ ಬೂಮ್ರಾ (101) ಅವರ ಸಾಲಿಗೆ ಹಾರ್ದಿಕ್ ಸೇರ್ಪಡೆಯಾದರು.

50 ವಿಕೆಟ್
ಬಲಗೈ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 50 ವಿಕೆಟ್ ಪೂರೈಸಿದರು. ಅತಿ ಕಡಿಮೆ ಇನಿಂಗ್ಸ್‌ಗಳಲ್ಲಿ (32) ಈ ಸಾಧನೆ ಮಾಡಿದ ಭಾರತೀಯ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದರು. ಕುಲದೀಪ್ ಯಾದವ್ (30) ಅಗ್ರಸ್ಥಾನದಲ್ಲಿದ್ದಾರೆ.

ಭಾರತದ ವೇಗಿಗಳ ಮುಂದೆ ಶರಣಾದ ದಕ್ಷಿಣ ಆಫ್ರಿಕಾ • ವರುಣ್, ಕುಲದೀಪ್ ಕೈಚಳಕ

ಧರ್ಮಶಾಲಾ (ಪಿಟಿಐ): ಭಾರತ ತಂಡದ ವೇಗದ ಬೌಲರ್‌ಗಳು ಅಮೋಘವಾದ ಬೌಲಿಂಗ್ ಮಾಡಿದರು. ಅವರ ದಾಳಿಗೆ ದಕ್ಷಿಣ ಅಫ್ರಿಕಾದ ಬ್ಯಾಟರ್‌ಗಳು ತತ್ತರಿಸಿದರು. ಇದರಿಂದಾಗಿ ಆತಿಥೇಯ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರಿನ ಮೂರನೇ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಎಡಗೈ ವೇಗಿ ಅರ್ಷದೀಪ್ ಸಿಂಗ್ (13ಕ್ಕೆ2), ಹರ್ಷಿತ್ ರಾಣಾ (34ಕ್ಕೆ2) ಮತ್ತು ಹಾರ್ದಿಕ್ ಪಾಂಡ್ಯ (23ಕ್ಕೆ1) ಅವರ ದಾಳಿಗೆ ಪ್ರವಾಸಿ ತಂಡವು 117 ರನ್‌ಗಳ ಸಾಧಾರಣ ಮೊತ್ತಕ್ಕೆ ಕುಸಿಯಿತು. ಅದಕ್ಕುತ್ತರವಾಗಿ ಆತಿಥೇಯ ತಂಡವು 15.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 120 ರನ್ ಗಳಿಸಿತು. 7 ವಿಕೆಟ್‌ಗಳಿಂದ ಜಯಿಸಿದ ತಂಡವು ಐದು ಪಂದ್ಯಗಳ ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿತು.



ಏಡನ್ ಮರ್ಕರಂ

ಆರಂಭಿಕ ಜೋಡಿ ಅಭಿಷೇಕ್ ಶರ್ಮಾ (35; 18ಎ, 4X3, 6X3) ಮತ್ತು ಶುಭಮನ್ ಗಿಲ್ (28; 28ಎ, 4X5) ಮೊದಲ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿ ತಂಡದ ಗೆಲುವನ್ನು ಮತ್ತಷ್ಟು ಸುಲಭಗೊಳಿಸಿದರು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪ್ರವಾಸಿ ಬಳಗದ ಏಡನ್ ಮರ್ಕರಂ (61; 46 ಎಸೆತ) ಅವರು ಏಕಾಂಗಿ ಹೋರಾಟ ಮಾಡಿದರು. ಅದರಿಂದಾಗಿ ತಂಡವು ಮೂರಂಕಿ ಮೊತ್ತ ಗಳಿಸಲು ಸಾಧ್ಯವಾಯಿತು. ಇಲ್ಲದಿದ್ದರೆ ಅಲ್ಪ ಮೊತ್ತಕ್ಕೆ ಕುಸಿಯುವ ಸಾಧ್ಯತೆ ಇತ್ತು. 10 ಓವರ್‌ಗಳಲ್ಲಿ 44 ರನ್‌ಗಳಿಗೇ 5 ವಿಕೆಟ್ ಕಳೆದುಕೊಂಡಿತ್ತು.

ಸರಣಿಯ ಎರಡನೇ ಪಂದ್ಯದಲ್ಲಿ ಬಹಳಷ್ಟು ದಂಡನೆಗೊಳಗಾಗಿದ್ದ ಭಾರತದ ಬೌಲರ್‌ಗಳು ಇಲ್ಲಿ ತಿರುಗೇಟು ನೀಡಿದರು. ಅದರಲ್ಲೂ ಅರ್ಷದೀಪ್ ಅವರು ತಮ್ಮ ಮೊದಲ ಓವರ್‌ನಲ್ಲಿಯೇ ರೀಜಾ ಹೆನ್ರಿಕ್ಸ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಖಾತೆ ತೆರೆಯುವ ಮುನ್ನವೇ ರೀಜಾ ನಿರ್ಗಮಿಸಿದರು. ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಹರ್ಷಿತ್ ರಾಣಾ ಅವರ ಚುರುಕಾದ ಎಸೆತದಲ್ಲಿ ಕ್ವಿಂಟನ್ ಡಿ ಕಾಕ್ ಎಲ್‌ಬಿ ಬಲೆಗೆ ಬಿದ್ದರು. ತಮ್ಮ ಇನ್ನೊಂದು ಓವರ್‌ನಲ್ಲಿಯೂ ಹರ್ಷಿತ್ ಅವರು ಡೆವಾಲ್ಡ್ ಬ್ರೆವಿಸ್ (2 ರನ್) ಅವರ ವಿಕೆಟ್ ಉರುಳಿಸಿದರು. ಆಗ ತಂಡದ ಮೊತ್ತವು ಕೇವಲ ಏಳು ರನ್‌ಗಳಾಗಿದ್ದವು.

ಪವರ್‌ಪ್ಲೇ ನಂತರದ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯ ಎಸೆತದಲ್ಲಿ ಟ್ರಿಸ್ಟನ್ ಸ್ಟಬ್ಸ್ ಔಟಾದರು. ಹಾರ್ದಿಕ್ ಅವರಿಗೆ ಟಿ20 ಕ್ರಿಕೆಟ್‌ನಲ್ಲಿ ನೂರನೇ ವಿಕೆಟ್ ಆದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಏಡನ್ ಮರ್ಕರಂ ಮಾತ್ರ ರನ್ ಸೂರೆ ಮಾಡುವುದರಲ್ಲಿ ಮಗ್ನರಾಗಿದ್ದರು. ಅರ್ಧಶತಕ ಗಳಿಸಿದರು. ಅವರ ಆಟಕ್ಕೂ ಅರ್ಷದೀಪ್ ಅವರು ತಮ್ಮ ಎರಡನೇ ಸ್ಪೆಲ್‌ನಲ್ಲಿ ತಡೆಯೊಡ್ಡಿದರು. ಮತ್ತೊಂದು ಬದಿಯಿಂದ ಸ್ಪಿನ್ನರ್ ವರುಣ್ ಚಕ್ರವರ್ತಿ (11ಕ್ಕೆ2) ಅವರೂ ಪರಿಣಾಮಕಾರಿ ದಾಳಿ ನಡೆಸಿದರು. ಅವರಿಗೆ ಕುಲದೀಪ್ ಯಾದವ್ (12ಕ್ಕೆ2) ಕೂಡ ಕೈ ಜೋಡಿಸಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಪಡೆಯು ಕುಸಿಯಿತು.

ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿತ್ತು.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 117 (20 ಓವರ್‌ಗಳಲ್ಲಿ)

ಡಿ ಕಾಕ್ ಎಲ್‌ಬಿಡಬ್ಲ್ಯು ಹರ್ಷಿತ್ 1 (3ಎ)
ಹೆನ್ರಿಕ್ಸ್ ಎಲ್‌ಬಿಡಬ್ಲ್ಯು ಅರ್ಷದೀಪ್ 0 (3ಎ)
ಮರ್ಕರಂ ಸಿ ಜಿತೇಶ್ ಬಿ ಅರ್ಷದೀಪ್ 61 (46ಎ, 4x6, 6x2)
ಬ್ರೆವಿಸ್ ಬಿ ಹರ್ಷಿತ್ 2 (7ಎ)
ಸ್ಟಬ್ಸ್ ಸಿ ಜಿತೇಶ್ ಬಿ ಹಾರ್ದಿಕ್ 9 (13ಎ)
ಬಾಷ್ ಬಿ ದುಬೆ 4 (9ಎ)
ಫೆರೀರಾ ಬಿ ಚಕ್ರವರ್ತಿ 20 (15ಎ, 4x1, 6x1)
ಯಾನ್ಸೆನ್ ಬಿ ಚಕ್ರವರ್ತಿ 2 (7ಎ)
ನಾಕಿಯಾ ಸ್ಟಂಪ್ ಜಿತೇಶ್ ಬಿ ಕುಲದೀಪ್ 12 (12ಎ)
ಎನ್‌ಗಿಡಿ ಔಟಾಗದೇ 2 (3ಎ)
ಬಾರ್ಟ್‌ಮನ್ ಸಿ ಸೂರ್ಯಕುಮಾರ್ ಬಿ ಕುಲದೀಪ್ 1 (2ಎ)

ಇತರೆ: 3 (ಬೈ 1, ಲೆಗ್‌ಬೈ 2)

ವಿಕೆಟ್ ಪತನ: 1–1 (ರೀಜಾ ಹೆನ್ರಿಕ್ಸ್, 0.4), 2–1 (ಕ್ವಿಂಟನ್ ಡಿ ಕಾಕ್, 1.2), 3–7 (ಡೆವಾಲ್ಡ್ ಬ್ರೆವಿಸ್, 3.1), 4–30 (ಟ್ರಿಸ್ಟನ್ ಸ್ಟಬ್ಸ್, 6.6), 5–44 (ಕಾರ್ಬಿನ್ ಬಾಷ್, 10.1), 6–69 (ಡೊನವಾನ್ ಫೆರೀರಾ, 13.3), 7–77 (ಮಾರ್ಕೊ ಯಾನ್ಸೆನ್, 15.1), 8–113 (ಏಡನ್ ಮರ್ಕರಂ, 18.3), 9–115 (ನಾಕಿಯಾ, 19.3), 10–117 (ಬಾರ್ಟ್‌ಮನ್, 19.6).

ಬೌಲಿಂಗ್: ಅರ್ಷದೀಪ್ ಸಿಂಗ್ 4–0–13–2, ಹರ್ಷಿತ್ ರಾಣಾ 4–0–34–2, ಹಾರ್ದಿಕ್ ಪಾಂಡ್ಯ 3–0–23–1, ವರುಣ್ ಚಕ್ರವರ್ತಿ 4–0–11–2, ಶಿವಂ ದುಬೆ 3–0–21–1, ಕುಲದೀಪ್ ಯಾದವ್ 2–0–12–2.

ಭಾರತ: 3 ವಿಕೆಟ್‌ಗೆ 120 (15.5 ಓವರ್‌ಗಳಲ್ಲಿ)

ಅಭಿಷೇಕ್ ಶರ್ಮಾ ಸಿ ಮರ್ಕರಂ ಬಿ ಬಾಷ್ 35 (18ಎ, 4X3, 6X3)
ಗಿಲ್ ಬಿ ಯಾನ್ಸೆನ್ 28 (28ಎ, 4X5)
ತಿಲಕ್ ಔಟಾಗದೇ 26 (34ಎ, 4X3)
ಸೂರ್ಯಕುಮಾರ್ ಸಿ ಬಾರ್ಟ್‌ಮನ್ ಬಿ ಎನ್‌ಗಿಡಿ 12 (11ಎ, 4X2)
ದುಬೆ ಔಟಾಗದೇ 10 (4X1, 6X1)

ಇತರೆ: 9 (ಲೆಗ್‌ಬೈ 7, ವೈಡ್ 2)

ವಿಕೆಟ್ ಪತನ: 1–60 (ಅಭಿಷೇಕ್ ಶರ್ಮಾ, 5.2), 2–92 (ಶುಭಮನ್ ಗಿಲ್, 11.4), 3–109 (ಸೂರ್ಯಕುಮಾರ್ ಯಾದವ್, 14.4).

ಬೌಲಿಂಗ್: ಲುಂಗಿ ಎನ್‌ಗಿಡಿ: 3–0–23–1, ಮಾರ್ಕೊ ಯಾನ್ಸೆನ್: 3–0–24–0, ಬಾರ್ಟ್‌ಮನ್: 3.5–0–34–0, ಕಾರ್ಬಿನ್ ಬಾಷ್: 3–0–18–1, ನಾಕಿಯಾ: 3–0–14–0.

ಪಂದ್ಯದ ಆಟಗಾರ: ಅರ್ಷದೀಪ್ ಸಿಂಗ್

ಫಲಿತಾಂಶ: ಭಾರತಕ್ಕೆ 7 ವಿಕೆಟ್ ಜಯ, ಸರಣಿ 2–1 ಮುನ್ನಡೆ